ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ

ಸಂಪುಟ 6 ಸಂಚಿಕೆ 13

೨೬ ಜನವರಿ ೧೯೫೮

★

ಪುಟ ೧೦ ಬೆಲೆ: ೧೩ ನ. ಪೈಸೆ

ಭಾರತದ ಎಂಟನೆಯ ಗಣರಾಜ್ಯ ದಿನ

ಎನ್. ಎಲ್. ಉಪಾಧ್ಯಾಯ

ಪ್ರಜಾಪ್ರಭುತ್ವಶಕ್ತಿಗಳ ಬೆಳವಣಿಗೆಗೆ ಶ್ರಮಿಸೋಣ

ಜನವರಿ, 26–ಭಾರತದ ಇತಿಹಾಸದಲ್ಲಿ ಅತ್ಯಂತ ಮಹತ್ವದ ದಿನ. 28 ವರ್ಷಗಳ ಹಿಂದೆ ರಾವಿ ನದಿಯ ದಂಡೆಯಲ್ಲಿ ಸಾಮ್ರಾಜ್ಯಶಾಹಿಯ ವಿರುದ್ಧ ಸಂಪೂರ್ಣ ಸ್ವಾತಂತ್ರ್ಯಕ್ಕೋಸ್ಕರ ಹೋರಾಡಲು ರಣಕಹಳೆಯನ್ನೂದಿದ ದಿನ. ಭಾರತದ ಯುವಕ ಯುವತಿಯರಲ್ಲಿ ನವ ಸ್ಫೂರ್ತಿಯನ್ನು ನೀಡಿದ ದಿನ. ದೇಶದ ಗುಲಾಮಗಿರಿಯ ಸಂಕೋಲೆಯನ್ನು ಮುರಿದು ಹಾಕಲು ಪಣತೊಟ್ಟ ಪವಿತ್ರ ದಿನ.

20 ವರ್ಷಗಳ ನಂತರ ಜನವರಿ, 26, 1950ರಲ್ಲಿ ಭಾರತ ಇನ್ನೊಂದು ದೊಡ್ಡ ಹೆಜ್ಜೆಯನ್ನಿಟ್ಟಿತು. ಅಂದು ಭಾರತವೊಂದು ಸ್ವತಂತ್ರ ರಿಪಬ್ಲಿಕ್ ಎಂದು ಸಾರಲಾಯಿತು. ಸ್ವಾತಂತ್ರ್ಯದ ಕನಸು ನನಸಾಯಿತು. ವಿಶ್ವದ ಸ್ವತಂತ್ರ ರಾಷ್ಟ್ರಗಳ ಶ್ರೇಣಿಯಲ್ಲಿ ಭಾರತವೂ ಒಂದು ಸ್ಥಾನಗಳಿಸಿತು. ದೇಶಕ್ಕೆ ಹೆಮ್ಮೆಯನ್ನು ತಂದಿತು. ಭಾರತ ರಿಪಬ್ಲಿಕ್ ಹುಟ್ಟಿದ ಎಂಟನೇ ಹುಟ್ಟು ಹಬ್ಬವನ್ನೀಗ ನಾವು ಆಚರಿಸಲಿದ್ದೇವೆ.

ಈ ಕಾಲಘಟ್ಟದಲ್ಲಿ ದೇಶದಲ್ಲಿ ಗಣನೀಯ ಬದಲಾವಣೆಗಳಾಗಿವೆ. ಭಾರತವು ವಿಶ್ವದ ಅಗ್ರರಾಷ್ಟ್ರಗಳಲ್ಲೊಂದಾಗಿದೆ. ಸಾಮ್ರಾಜ್ಯಶಾಹಿಗಳ ಯುದ್ಧ ಪ್ರಚೋದನೆಯನ್ನು ಎದುರಿಸುವುದರಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಿದೆ ಚೀನಾದೊಡನೆ ಪಂಚಶೀಲ ತತ್ವದ ಆಧಾರದ ಮೇಲೆ ಒಪ್ಪಂದ ಮಾಡಿಕೊಂಡಿರುವುದಲ್ಲದೆ, ರಷ್ಯ ಮತ್ತಿತರ ಸಮಾಜವಾದಿ ರಾಷ್ಟ್ರಗಳೊಡನೆ ನಿಕಟ ಸಂಪರ್ಕವನ್ನು ಬೆಳೆಸಿದೆ. ಏಷ್ಯಾ-ಆಫ್ರಿಕಾ ರಾಷ್ಟ್ರಗಳನ್ನೊಟ್ಟುಗೂಡಿಸಿ ಬಾಂಡುಂಗ್ ಸಮ್ಮೇಳನವನ್ನು ನಡೆಸಿ ಪರಿಣಾಮಕಾರಿಯಾದ ಹೆಜ್ಜೆಯನ್ನಿಟ್ಟಿದೆ. ಸಾಮ್ರಾಜ್ಯಶಾಹಿಗಳ ಯುದ್ಧ ಪಿತೂರಿಗಳನ್ನೆದುರಿಸಿ, ವಿಶ್ವಶಾಂತಿಗೆ ಸತತ ದುಡಿದು ಅಗ್ರಸ್ಥಾನವನ್ನು ಗಳಿಸಿದೆ. ಇದರ ಪರಿಣಾಮವಾಗಿ ವಿಶ್ವಾದ್ಯಂತ ಭಾರತದ ಜನತೆಗೆ ಗೌರವ ದೊರಕಿದೆ ಇದನ್ನು ನಾವು ಸಂತೋಷದಿಂದ ಸ್ವಾಗತಿಸುತ್ತೇವೆ.

ಆದರೆ ಕೆಲವು ಪ್ರತಿಗಾಮಿಗಳು ಈ ಧೋರಣೆಯನ್ನು ಬದಲಿಸಲು ಪ್ರಯತ್ನಿಸುತ್ತಿದ್ದಾರೆ. ಅವರ ಪ್ರಯತ್ನಗಳನ್ನು ವಿಫಲಗೊಳಿಸುವುದು ನಮ್ಮ ಕರ್ತವ್ಯ.

ಕಾಮನ್‌ವೆಲ್ತ್‌ನಲ್ಲಿ ಉಳಿದಿರುವುದು ಅನುಚಿತ

ನಮ್ಮ ದೇಶ ರಿಪಬ್ಲಿಕ್ ರಾಷ್ಟ್ರವೆಂದು ಸಾರಿದ್ದರೂ ನಾವಿನ್ನು ಕಾಮನ್‌ವೆಲ್ತ್‌ನಲ್ಲಿರುವುದು ಅವಮಾನಕರವಾಗಿದೆ ಸದಾ ಯುದ್ಧ ಪ್ರಚೋದನೆಯಲ್ಲೇ ನಿರತವಾಗಿರುವ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಕೂಟದಲ್ಲಿರುವುದು, ಇತರ ರಾಷ್ಟ್ರಗಳ ಸ್ವಾತಂತ್ರ್ಯ ಹೋರಾಟವನ್ನು ನಾಶಮಾಡಲು ಜನತೆಯ ಮೇಲೆ ಅಮಾನುಷ ದಬ್ಬಾಳಿಕೆ ನಡಿಸುತ್ತಿರುವ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಕಾಮನ್‌ವೆಲ್ತ್‌ನಲ್ಲಿ ಭಾರತವು ಮುಂದರಿಯುತ್ತಿರುವುದನ್ನು ನಾವು ಖಂಡಿಸುತ್ತೇವೆ. ಈ ಸಂಬಂಧದಿಂದ ನಮ್ಮ ಹೆಸರಿಗೂ ಕಳಂಕ ಬಂದಿದೆ. ಕಾಮನ್‌ವೆಲ್ತ್‌ನಿಂದ ನಮ್ಮ ದೇಶ ಹೊರಗೆ ಬರಬೇಕೆಂಬುದಾಗಿ ಒತ್ತಾಯ ಪಡಿಸುವುದು ನಮ್ಮ ಕರ್ತವ್ಯ.

ಇದರ ಜೊತೆಗೆ ಭಾರತದ ಅಂಗವಾದ ಗೋವಾ ಇನ್ನೂ ವಿದೇಶೀಯರ ವಶದಲ್ಲಿರುವುದು ಶೋಚನೀಯವಾಗಿದೆ. ಅದನ್ನು ವಿಮೋಚನೆಗೊಳಿಸದೆ ನಮ್ಮ ಸ್ವಾತಂತ್ರ್ಯ ಪೂರ್ಣವಾಗಿದೆ ಎಂದು ಪರಿಗಣಿಸಲು ಸಾಧ್ಯವಿಲ್ಲ.

ಭಾರತದ ಅವಿಭಾಜ್ಯ ಅಂಗವಾದ ಕಾಶ್ಮೀರದಲ್ಲಿ ಸಾಮ್ರಾಜ್ಯಶಾಹಿಗಳ ಪಿತೂರಿ ಮುಂದುವರಿಯುತ್ತಿದೆ. ಅಲ್ಲಿ ಇನ್ನೊಂದು ಮತಗಣನೆಯಾಗಬೇಕೆಂದು ಷೇಕ್ ಅಬ್ದುಲ್ಲಾರವರು ಪ್ರಚಾರ ಆರಂಭಿಸಿ ಪ್ರತಿಗಾಮಿಗಳಿಗೆ ಪ್ರೋತ್ಸಾಹ ನೀಡಿದ್ದಾರೆ ಕಾಶ್ಮೀರವು ಭಾರತದ ಒಂದು ಅಂಗವೆಂದೂ, ಅಲ್ಲಿ ಸಾಮ್ರಾಜ್ಯಶಾಹಿಗಳ ಕುತಂತ್ರಗಳನ್ನು ಎದುರಿಸುವೆವೆಂದೂ ನಾವಿಂದು ಸಾರಬೇಕಾಗಿದೆ. ಕಾಶ್ಮೀರ ಪ್ರಶ್ನೆಯನ್ನು ವಿಚಾರಿಸಲು ಬಂದಿರುವ ಗ್ರಹಾಂರವರು ನಮಗೆ ಬೇಕಾಗಿಲ್ಲ. ಕಾಶ್ಮೀರದ ಜನತೆಯೇ ಆ ಪ್ರಶ್ನೆಯನ್ನು ಬಗೆಹರಿಸಿದೆ. ಗ್ರಹಾಂರವರು ವಾಪಸಾಗಲೆಂದು ಒತ್ತಾಯಪಡಿಸೋಣ.

ದ್ವಿತೀಯ ಪಂಚವಾರ್ಷಿಕ ಯೋಜನೆ

ನಮ್ಮ ರಿಪಬ್ಲಿಕ್ ರಾಷ್ಟ್ರ ಬಲಗೊಳ್ಳಬೇಕಾದರೆ ದೇಶದಲ್ಲಿ ಕೈಗಾರಿಕೆಗಳು ಬೆಳೆಯಬೇಕು. ಘನ ಕೈಗಾರಿಕೆಗೆ ಹೆಚ್ಚಿನ ಪ್ರಾಶಸ್ತ್ಯ ಸಿಗಬೇಕು. ದ್ವಿತೀಯ ಯೋಜನೆಯಲ್ಲಿ ಇದು ಕೈಗೂಡುವುದೆಂದು ಭರವಸೆ ಇತ್ತು. ಆದರೆ ಈಗ ಯೋಜನೆ ಬಿಟ್ಟು ಯೋಜನೆಯ ತಿರುಳಿಗೂ ಧಕ್ಕೆ ತಗಲುವಂತಿದೆ. ಸರಕಾರದ ಪ್ರತಿಗಾಮಿ ಧೋರಣೆಯ ಪರಿಣಾಮವಾಗಿ ದೇಶದಲ್ಲಿ ತೀವ್ರ ಮುಗ್ಗಟ್ಟು ತಲೆ ಎತ್ತಿದೆ. ಯೋಜನೆಯಲ್ಲಿ ಕೈಗಾರಿಕೆಗೆ ಪ್ರಾಧಾನ್ಯತೆ ಹೋಗಿ, ವ್ಯವಸಾಯಕ್ಕೆ ಪ್ರಥಮ ಗಮನ ಕೊಡಬೇಕೆಂಬ ಕೂಗನ್ನು ಕೇಳುತ್ತಿದ್ದೇವೆ. ಆಹಾರ ಸಮಸ್ಯೆಯು ತೀವ್ರವಾಗಿದ್ದು ಯೋಜನೆಯ ಯಶಸ್ಸಿಗೆ ಅಡ್ಡಿಯಾಗಿರುವುದೇನೋ ನಿಜ. ಆಹಾರ ಉತ್ಪಾದನೆಯನ್ನು ಹೆಚ್ಚಿಸಬೇಕೆಂಬುದು ಅಗತ್ಯವಾಗಿದೆ. ಆದರೆ ಯಾವ ಕಾರಣದಿಂದಲೂ ಕೈಗಾರಿಕೆಯ ಅಭಿವೃದ್ಧಿಯನ್ನು ತಡೆ ಹಿಡಿದರೆ ದೇಶದ ಪ್ರಗತಿಗೆ ಧಕ್ಕೆ ತಗಲುವುದು ಖಂಡಿತ. ಆಹಾರ ಸಮಸ್ಯೆಯನ್ನು ಬಗೆಹರಿಸಲು ಯೋಗ್ಯ ಭೂಸುಧಾರಣೆ ಕೂಡಲೇ ಜಾರಿಗೆ ಬರಲಿ. ದೇಶದ ಸ್ವಾತಂತ್ರ್ಯವನ್ನು ಬಲಗೊಳಿಸಲು ಕೈಗಾರಿಕೆಗೆ ಆದ್ಯ ಗಮನ ನೀಡಲಿ.

ಕೇರಳ

ಕಳೆದ ಚುನಾವಣೆಯ ನಂತರ ಕೇರಳ ರಾಜ್ಯದಲ್ಲಿ ಕಮ್ಯೂನಿಸ್ಟ್ ಪಾರ್ಟಿ ಬಹುಮತ ಗಳಿಸಿ ಅಧಿಕಾರಕ್ಕೆ ಬಂದಿರುವುದು ಹೊಸ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ. ನಮ್ಮ ರಿಪಬ್ಲಿಕ್‌ನಲ್ಲಿ ವಿವಿಧ ರಾಜ್ಯಗಳಲ್ಲಿ ಬೇರೆ ಬೇರೆ ಪಕ್ಷಗಳ ಸರಕಾರಗಳು ರಚನೆಯಾಗಲು ಅವಕಾಶವಿದೆ. ಆದರೆ ಪ್ರತಿಗಾಮಿಗಳಿಗೆ ಮಾತ್ರ ಇದರಿಂದ ಸಹಿಸಲಾರದ ಸಂಕಟವೊದಗಿದೆ. ಕೇರಳದ ಕಮ್ಯೂನಿಸ್ಟ್ ಸರಕಾರವನ್ನುರುಳಿಸಲು ಸತತ ಪ್ರಯತ್ನ ನಡೆದಿದೆ. ಕೇರಳವು ಕೆಲವೇ ತಿಂಗಳಲ್ಲಿ ಸಾಧಿಸಿದ ಅದ್ಭುತ ಪ್ರಗತಿಯಿಂದ ಇತರರು ಕಂಗಾಲಾಗಿದ್ದಾರೆ. 28 ವರ್ಷಗಳ ಹಿಂದೆ ಭಾರತದ ಜನತೆ ಮಾಡಿದ ಪ್ರತಿಜ್ಞೆಯನ್ನು ಅಕ್ಷರಶಃ ಜಾರಿಗೆ ತಂದಿರುವ ಹೆಮ್ಮೆ ಕೇರಳದ ಕಮ್ಯೂನಿಸ್ಟ್ ಸರಕಾರದ್ದಾಗಿದೆ. ಭಾರತವೊಂದು ರಿಪಬ್ಲಿಕ್ ಪ್ರಜಾಪ್ರಭುತ್ವ ರಾಷ್ಟ್ರವೆಂಬುದು ನಿಜವಾದರೆ ಕೇರಳದ ಕಮ್ಯೂನಿಸ್ಟ್ ಸರಕಾರಕ್ಕೆ ಬೆಂಬಲ ನೀಡಿ ಅದನ್ನು ಬಲಗೊಳಿಸುವುದು ಎಲ್ಲ ಪ್ರಜಾಪ್ರಭುತ್ವವಾದಿಗಳ ಕರ್ತವ್ಯ.

ಪ್ರಜಾಪ್ರಭುತ್ವ ಶಕ್ತಿಗಳು ಬಲಗೊಳ್ಳಲಿ

ಈಗಲೂ ನಮ್ಮ ದೇಶ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಆಹಾರದ ಅಭಾವ ಬೆಲೆಗಳ ಏರಿಕೆ, ನಿರುದ್ಯೋಗ, ತೆರಿಗೆಗಳ ಹೊರೆ, ಮಿತಿಮೀರಿದ ಲಂಚಗುಳಿತನ, ಆಡಳಿತೆಯಲ್ಲಿ ಅದಕ್ಷತೆ ಮತ್ತು ಸ್ವಜನ ಪಕ್ಷಪಾತ ಮುಂತಾದುವು ತಾಂಡವವಾಡುತ್ತಿವೆ. ಕಾರ್ಮಿಕರ ಮತ್ತು ರೈತರ ಮೇಲೆ ದಬ್ಬಾಳಿಕೆ ನಡೆದಿದೆ. ಸರಕಾರ ಜನತೆಯ ಬೇಡಿಕೆಗಳನ್ನು ಈಡೇರಿಸುವ ಬದಲು ಪ್ರತಿಗಾಮಿಗಳಿಗೆ ಪ್ರೋತ್ಸಾಹ ನೀಡುತ್ತಿದೆ. ಇದನ್ನೆದುರಿಸಲು ಕಮ್ಯೂನಿಸ್ಟ್ ಪಾರ್ಟಿಯು ಬಲಗೊಳ್ಳಬೇಕಾಗಿದೆ. ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಬೇಕಾಗಿದೆ.

ಭಾರತ ರಿಪಬ್ಲಿಕ್ ಬಲಗೊಳ್ಳಲು ಕೂಡಲೇ ವಿಶ್ವದ ಅಗ್ರರಾಷ್ಟ್ರಗಳ ಶೃಂಗ ಸಮ್ಮೇಳನ ನಡೆದು ವಿಶ್ವಶಾಂತಿಗೆ ದಾರಿಯಾಗಲು ಭಾರತವು ಪ್ರಯತ್ನಿಸಲಿ! ದೇಶದ ಆಹಾರ ಸಮಸ್ಯೆ ಆರ್ಥಿಕ ಮುಗ್ಗಟ್ಟು, ಯೋಜನೆಯ ಪೂರೈಕೆಗೆ ಸರ್ವಪಕ್ಷ ಸಮ್ಮೇಳನ ನಡೆಯಲಿ! ಪ್ರಗತಿಪರ ಭೂಸುಧಾರಣೆ ಬೇಗನೇ ಜಾರಿಗೆ ಬರಲಿ! ಕೇರಳ ಸರಕಾರ ಚಿರಾಯುವಾಗಲಿ! ಕಾಮನ್‌ವೆಲ್ತ್‌ನಿಂದ ಭಾರತ ಹೊರಗೆ ಬರಲಿ!

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಾದ ಅಸಂಖ್ಯಾತ ಸೋದರರಿಗೆ ನಾವಿಂದು ಶ್ರದ್ಧಾಂಜಲಿಯನ್ನರ್ಪಿಸಿ ದೇಶದ ಸ್ವಾತಂತ್ರ್ಯವನ್ನು ರಕ್ಷಿಸಿ ಬಲಪಡಿಸಲು ಪ್ರತಿಜ್ಞೆ ಮಾಡೋಣ.

ಪ್ರಕಟನೆ

ಅನಿವಾರ್ಯವಾದ ಕಾರಣಗಳಿಂದಾಗಿ "ಜನಶಕ್ತಿ" ಮುಂದಿನ ವಾರ (2—2—58) ಪ್ರಕಟವಾಗುವುದಿಲ್ಲವೆಂದು ಈ ಮೂಲಕ ತಿಳಿಸುತ್ತೇವೆ. ತಾರೀಖು 9—2—58ರಂದು ಎಂದಿನಂತೆ ಪತ್ರಿಕೆ ಪ್ರಕಟವಾಗುವುದು.

— ವ್ಯವಸ್ಥಾಪಕರು

63ನೆಯ ಕಾಂಗ್ರೆಸ್ ಅಧಿವೇಶನ—

ಆಡಂಬರವಿದ್ದರೂ ಅತೃಪ್ತಿ ಅಳಿಯಲಿಲ್ಲ

ಎಂದಿನಂತೆ ವರ್ಷಕ್ಕೊಮ್ಮೆ ಸೇರುವ ಜಾತ್ರೆಯ ರೀತಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ಸಿನ 63ನೆಯ ಅಧಿವೇಶನವು ಅಸ್ಸಾಂ ಪ್ರಾಂತದ ಗೌಹಾತಿಯಲ್ಲಿ ಈ ವಾರ ಸೇರಿದ್ದು ಮುಕ್ತಾಯಗೊಂಡಿದೆ. ಕಾಂಗ್ರೆಸ್ ಅಧಿವೇಶನವೆಂದರೆ ಯಥಾಪ್ರಕಾರ ನಡೆಯುವ ಆಡಂಬರದ ಸಿದ್ಧತೆಗಳೆಲ್ಲವೂ ನಡೆದು ಲಕ್ಷಾಂತರ ರೂಪಾಯಿಗಳ ವೆಚ್ಚವೂ ಆಗಿದೆ. ಅಧಿವೇಶನ ಮುಕ್ತಾಯವಾಗುವ ವೇಳೆಗೆ ಕಾರ್ಯಕಲಾಪಗಳನ್ನು ಕುತೂಹಲದಿಂದ ಅವಲೋಕಿಸಿದವರಲ್ಲಿ ಅತೃಪ್ತಿ ಮಾತ್ರ ಅಳಿಯಲಿಲ್ಲ. ಅಧಿವೇಶನಕ್ಕೆ ಪ್ರತಿನಿಧಿಗಳಾಗಿ ಹೋಗಿದ್ದ ಅನೇಕ ಕಾಂಗ್ರೆಸ್ ಸದಸ್ಯರ ನಡುವೆ ಈ ಉದ್ಗಾರ ಕೇಳಿಬಂದಿದೆ. ಕಾಂಗ್ರೆಸ್ಸಿಗರ ನಡುವೆ ಹೆಚ್ಚು ಬೇಸರ ಮತ್ತು ನಿರುತ್ಸಾಹವನ್ನುಂಟು ಮಾಡಿದೆ.

ಅಬ್ಬರದ ಆಡಂಬರ

ಕಾಂಗ್ರೆಸ್ಸಿನ ಈ ಅಧಿವೇಶನಕ್ಕೆ ಗೌಹಾತಿಯಂಥ ಸಣ್ಣ ನಗರದಲ್ಲಿ ಅಬ್ಬರದ ಆಡಂಬರವೇ ನಡೆದಿತ್ತು. ರಸ್ತೆಗಳಿಲ್ಲದಿದ್ದ ಸ್ಥಳವಲ್ಲಿ ರಸ್ತೆಗಳು, ಎಲ್ಲ ಸೌಕರ್ಯಗಳು ಏರ್ಪಟ್ಟಿದ್ದುವು. ಪ್ರತಿನಿಧಿಗಳಿಗೆ, ವೀಕ್ಷಕರಿಗೆ ತಂಗಲು ಹೊಸ ನಗರವೇ ಪ್ರಾಗ್‌ಜ್ಯೋತಿಷ್ಯಪುರ ನಿರ್ಮಿಸಲ್ಪಟ್ಟಿದ್ದಿತು. ಅಸ್ಸಾಮಿನ ಎಲ್ಲ ಪೋಲೀಸರೂ ಸಾಕಾಗದೆ ಬಂಗಾಳದಿಂದಲೂ ವಿಶೇಷ ಪೋಲಿಸು ಪಡೆ ಆಗಮಿಸಿತ್ತು. ಅಸ್ಸಾಂ ರೈಲ್ವೆ ತನ್ನ ಒಂದೇ ಒಂದು ಡಿಸೆಲ್ ರೈಲನ್ನು ಕಾಂಗ್ರೆಸ್ ನಗರಕ್ಕಾಗಿ ವಿಶೇಷವಾಗಿ ಓಡಿಸುತ್ತಿತ್ತು.

ಅಧಿವೇಶನದ ಅಂಗವಾಗಿ ಏರ್ಪಟ್ಟಿದ್ದ ವಸ್ತು ಪ್ರದರ್ಶನಕ್ಕೆ ಸುಮಾರು 14 ಲಕ್ಷ ರೂ.ಗಳನ್ನು ಖರ್ಚುಮಾಡಲಾಗಿದೆಯೆಂದು ತಿಳಿದು ಬಂದಿದೆ. ಇಷ್ಟು ಖರ್ಚಾಗಿದ್ದರೂ ಅಧಿವೇಶನವು ಮುಕ್ತಾಯವಾಗುತ್ತಿದ್ದರೂ ಕೂಡ ವಸ್ತು ಪ್ರದರ್ಶನದ ಸಿದ್ಧತೆ ಕಾರ್ಯ ಮುಗಿದಿರಲಿಲ್ಲವೆಂದು ತಿಳಿದು ಬಂದಿದೆ. ಲಕ್ಷಾಂತರ ರೂಪಾಯಿಗಳು ದುರ್ವ್ಯಯವಾಗಿದೆಯೆಂದು ತಿಳಿದುಬಂದ ನಿಷ್ಠಾವಂತ ಕಾಂಗ್ರೆಸ್ ಸ್ವಾಗತಸಮಿತಿ ಸದಸ್ಯರುಗಳು ಅಧಿವೇಶನಕ್ಕೇ ಬರಲಿಲ್ಲವೆಂದು ವರದಿಯೊಂದು ತಿಳಿಸುತ್ತದೆ. ವಸ್ತು ಪ್ರದರ್ಶನದ ಏರ್ಪಾಟಿನಲ್ಲಿ ಸಾರ್ವಜನಿಕ ಹಣವನ್ನು ದುರ್ವಿನಿಯೋಗಮಾಡಲಾಗಿದೆ, ಅಂಚೆ ಮತ್ತು ತಂತಿ ಕಛೇರಿ–ಪ್ರತಿನಿಧಿಗಳ ಸೌಕರ್ಯಕ್ಕಾಗಿ ವಿಶೇಷವಾಗಿ ವ್ಯವಸ್ಥೆಯಾಗಿತ್ತು–ಯವರು ದುಬಾರಿಯಾದ ಬಾಡಿಗೆಯನ್ನಿತ್ತಿದ್ದಾರೆಂದೂ ಮತ್ತು ಇದಕ್ಕೆ ಹೆಚ್ಚಾಗಿ ಜೀವವಿಮಾ ಕಾರ್ಪೊರೇಷನ್‌ನ ಪ್ರದರ್ಶನ ವಿಭಾಗವು 40,000 ರೂ ಗಳನ್ನು ಕೊಟ್ಟಿದೆಯೆಂದು ವರದಿಯೊಂದು ತಿಳಿಸುತ್ತದೆ.

ಇಷ್ಟೆಲ್ಲಾ ವ್ಯವಸ್ಥೆಯಲ್ಲಿ, ಅಧ್ಯಕ್ಷ ಧೇಬರರ ವೈಭವ ಆಟಾಟೋಪದ ಮೆರವಣಿಗೆಯೂ ನಡೆದಿದ್ದು, ಹಿಂದಿನ ಪಾಳೆಯಗಾರರ ಆಡಂಬರವನ್ನು ನೆನಪಿಗೆ ತರುತ್ತದೆ. ಕಾಂಗ್ರೆಸ್ ಅಧ್ಯಕ್ಷರೇನು ಸಾಮಾನ್ಯವೇ, ಅವರ ಮೆರವಣಿಗೆಗೆ ಮುಂದೆ 63 ಮದ್ದಾನೆಗಳ ಸಾಲು, ನಂತರ ಪದಾತಿಗಳು. ಈ ಬೃಹತ್ ಪ್ರದರ್ಶನದ ನಂತರ ಭವ್ಯ ಚಪ್ಪರದಲ್ಲಿ ಅಧಿವೇಶನದ ಅವಾಂತರ ಆರಂಭ.

ಅಚ್ಚೊತ್ತುವ ನಿರ್ಣಯಗಳು

ಪಂಡಿತ ನೆಹರೂರವರ ಹಲವಾರು ದೀರ್ಘವಾದ ಭಾಷಣಗಳಿಂದ ಕಾಂಗ್ರೆಸ್ ಅಧ್ಯಕ್ಷರ ಅಣಿಮುತ್ತುಗಳಿಂದ ಅಧಿವೇಶನವು ಗೌಹಾತಿಯಲ್ಲಿ ಆರಂಭವಾಯಿತು. ಈ ಭಾಷಣಗಳಲ್ಲಿ ಹೊಸತೇನೂ ಇಲ್ಲದೆ ಎಲ್ಲವೂ ಹಳೆಯದರ ರಾಗಮಾಲಿಕೆಯೇ ಎನ್ನುವ ಟೀಕೆ ಹಲವು ಕಡೆಗಳಿಂದ ಬಂದಿದೆ.

ಇನ್ನು ಅಧಿವೇಶನ ನಡೆದ ರೀತಿ, ನಡೆಯುವ ರೀತಿ. ಕಾಂಗ್ರೆಸ್ ವಿಷಯನಿಯಾಮಕ ಸಮಿತಿಯ ಮುಂದೆ ಅಂತರರಾಷ್ಟ್ರೀಯ ಪರಿಸ್ಥಿತಿಯಿಂದ ಆರಂಭವಾಗಿ ಗ್ರಾಮ ಕೈಗಾರಿಕೆಗಳು, ಸಂಘಟನೆಯಲ್ಲಿನ ಶಿಸ್ತು ಎಲ್ಲಾ ತೀರ್ಮಾನಗಳೂ ಬರುತ್ತವೆ ಅದೇ ರೀತಿಯಲ್ಲಿ ಈ ಬಾರಿಯೂ ವಿಷಯನಿಯಾಮಕ ಸಮಿತಿಯ ಮುಂದೆ ನಿರ್ಣಯಗಳ ಮೇಲೆ ಚರ್ಚೆ ನಡೆದಾಗ, ನಡೆಯುತ್ತಿದ್ದಾಗ, ತಿದ್ದುಪಡಿ ಬಂದಾಗ. ಅಡಿಗೆ ನೂರು ಬಾರಿ ಎನ್ನುವಂತೆ ಪಂಡಿತ ನೆಹರೂ ಮಧ್ಯೆ ತಲೆಹಾಕಿ ಅವುಗಳನ್ನು ಅಂಗೀಕರಿಸದಂತೆ ಮಾಡುವುದು ಯಥಾವತ್ತಾಗಿ ನಡೆದಿತ್ತು. ವಿಷಯನಿಯಾಮಕ ಸಭೆಯಲ್ಲಿ ನಿರ್ಣಯಗಳ ಅನುಮೋದನೆಯಾಯಿತೆಂದರೆ ಅಧಿವೇಶನ ಮುಗಿದಂತೆಯೇ. ಬಹಿರಂಗ ಅಧಿವೇಶನದಲ್ಲಿ ಕೇವಲ ಅದಕ್ಕೆ ಅಚ್ಚೊತ್ತುವುದು ಅಷ್ಟೆ. ಕಾಂಗ್ರೆಸ್ ಅಧಿವೇಶನದ ನಿರ್ಣಯಗಳನ್ನು ಕಾರ್ಯಕಲಾಪಗಳನ್ನೂ ಕುರಿತು ಬರೆಯುತ್ತಾ 'ಡೆಕ್ಕನ್ ಹೆರಾಲ್ಡ್' ಪತ್ರಿಕೆ ತನ್ನ ಅಗ್ರ ಲೇಖನದಲ್ಲಿ, ಸ್ವಾರಸ್ಯವಾಗಿ ಪಂಡಿತ ನೆಹರೂರವರ ಭಾಷಣಗಳನ್ನು ಸೂಕ್ಷ್ಮವಾಗಿ ಸಂಪಾದಿಸಿ, ಪ್ರತಿವ್ಯಾಖ್ಯಾಕ್ಕೊ ಒಂದೊಂದು ನೂರು ಶೀರ್ಷಿಕೆಯನ್ನು ಇತ್ತಲ್ಲಿ ಅದೇ ಕಾಂಗ್ರೆಸ್ ವಿಷಯನಿಯಾಮಕ ಸಮಿತಿಯಲ್ಲಿ, ನಂತರ ಬಹಿರಂಗ ಅಧಿವೇಶನದಲ್ಲಿ ಅನುಮೋದನೆಯಾಗುವ ನಿರ್ಣಯಗಳೆಂದು ಸಿದ್ಧವಾಗುತ್ತವೆ. ಕಾಂಗ್ರೆಸ್ ಅಧಿವೇಶನದಲ್ಲಿ ಅನುಮೋದನೆಯಾಗುವ ನಿರ್ಣಯಗಳೆಲ್ಲವನ್ನೂ ಒಟ್ಟುಗೂಡಿಸಿ, ಅವುಗಳಲ್ಲಿನ ರಾಜಕೀಯ ಜೋಡನೆಗಳನ್ನು ತೆಗೆದು ಹಾಕಿದರೆ ಉಳಿದದ್ದು ನಮ್ಮ ವಿಶ್ವ ವಿದ್ಯಾನಿಲಯದ ಯಾವೊಂದು ಘಟಕೋತ್ಸವಕ್ಕಾದರೂ ಸಿದ್ಧವಾಗಿರುವ ಭಾಷಣವಾಗುತ್ತದೆ ಎಂದು ಹೇಳಿದೆ. ಅಂದಮೇಲೆ ಕಾಂಗ್ರೆಸ್ ಅಧಿವೇಶನದಲ್ಲಿ ಅನುಮೋದನೆಯಾಗುವ ನಿರ್ಣಯಗಳ ಸತ್ವವೆಷ್ಟು ಎಂಬುದು ಅರಿವಾಗುತ್ತದೆ.

ಭಾಷಾ ಸಮಸ್ಯೆ ಮತ್ತು ಭೂಸುಧಾರಣೆ ಬಗ್ಗೆ

ದಕ್ಷಿಣ ಭಾರತದ ಎಲ್ಲ ರಾಜ್ಯಗಳಲ್ಲೂ ವಿವಾದನ್ನೆಬ್ಬಿಸಿರುವ ರಾಷ್ಟ್ರಭಾಷಾ ಸಮಸ್ಯೆಯ ಕುರಿತು ಕಾಂಗ್ರೆಸ್ ಅಧಿವೇಶನವು ಮಾಡಿರುವ ಗೊತ್ತುವಳಿ ತತ್ಕಾಲಕ್ಕೆ ಅನುಕೂಲವಾಗುವಂತೆ ಇದೆ ಎಂದು ಹೇಳಬಹುದು. ಹಿಂದೀ ರಾಷ್ಟ್ರಭಾಷೆಯಾಗಿ ಮಾರ್ಪಡುವವರೆಗೂ ಈ ಸಂಧಿಕಾಲದಲ್ಲಿ ಇಂಗ್ಲಿಷ್ ಭಾಷೆಯೂ ಕೂಡ ಅಧಿಕೃತ ಭಾಷೆಯಾಗಿಯೇ ಉಳಿಯುವುದೆಂದು ನಿರ್ಣಯವು ಹೇಳುತ್ತದೆ.

ಭೂಸುಧಾರಣೆಗಳ ಬಗ್ಗೆ ಅನುಮೋದನೆಯಾಗಿರುವ ನಿರ್ಣಯವು ನೆಪಮಾತ್ರಕ್ಕೆ ಎಂದು ಹೇಳಬಹುದು. ಅಧಿವೇಶನದಿಂದ ಅಧಿವೇಶನಕ್ಕೆ ಅನುಮೋದನೆಯಾಗುವ ಎಲ್ಲ ನಿರ್ಣಯಗಳಂತೆಯೇ ಇದೂ ಇದೆ. ಎರಡನೆಯ ಪಂಚವಾರ್ಷಿಕ ಯೋಜನೆ ಪೂರಯಿಸುವುದರೊಳಗೆ ಎಲ್ಲ ರಾಜ್ಯಗಳಲ್ಲೂ ಭೂಸುಧಾರಣೆ ಜಾರಿಗೆ ಬರಬೇಕೆಂದು ನಿರ್ಣಯವು ಹೇಳುತ್ತದೆ. ರಾಜ್ಯ ಸರಕಾರಗಳು ಭೂಸುಧಾರಣಾ ಮಸೂದೆಗಳನ್ನು ಕೆಲವು ಕಡೆಗಳಲ್ಲಿ ತಂದಿದ್ದರೂ ಅವು ಅಮಲಿನಲ್ಲಿ ಬಂದಿಲ್ಲ. ಭೂಸುಧಾರಣಾ ಕಾರ್ಯವು ತೀರಾ ಮಂದಗತಿಯಿಂದ ಸಾಗುತ್ತಿದೆ ಎಂದೆಲ್ಲಾ ಹೇಳುತ್ತಿದ್ದರೂ ಕಾಂಗ್ರೆಸು ನಿರ್ಣಯವನ್ನು ಈ ಬಗ್ಗೆ ತೆಗೆದುಕೊಳ್ಳುವಾಗ ಮಾತ್ರ, ಅರೆಮನಸ್ಸಿನಿಂದ ತೆಗೆದುಕೊಂಡಿದೆ ಎಂದು ಹೇಳಬಹುದು. ಆಡಳಿತದಲ್ಲಿರುವ ಪಕ್ಷವಾಗಿರುವುದರಿಂದ, ರಾಜ್ಯಗಳಲ್ಲಿ ಆಡಳಿತಗಾರರಾಗಿರುವ ಕಾಂಗ್ರೆಸ್ ನಾಯಕರುಗಳಿಗೆ ಸ್ಪಷ್ಟ ನಿರ್ದೇಶಗಳನ್ನು ಅಧಿವೇಶನ ಈಯುವುದಿಲ್ಲ. ರಾಷ್ಟ್ರವು ಇಂದು ಇದಿರಿಸುತ್ತಿರುವ ಸಮಸ್ಯೆಗಳ ಕುರಿತಾದ ನಿರ್ಣಯಗಳು ಕೇವಲ ಔಪಚಾರಿಕವಾಗಿಯೇ ಹೊರತು ಗಂಭೀರವಾದುವಾಗಿಲ್ಲ ಎಂದು ಹೇಳಬಹುದು.

ಗೌಹಾತಿ ಅಧಿವೇಶನದ ಇತರ ಔಚಿತ್ಯಗಳು

ಈ ಅಧಿವೇಶನದ ವಿಶೇಷತೆಯೆಂದರೆ, ಕಲುಷಿತಗೊಂಡಿರುವ ಕಾಂಗ್ರೆಸ್ಸನ್ನು ಶುದ್ಧೀಕರಣಮಾಡಿ ಹೊಸ ನೇತ್ರರನ್ನು ತುಂಬಲು ಹೊಸದಾಗಿ ರಚಿತಗೊಂಡಿರುವ 'ಶುಂಠಿ ಗುಂಪಿನ' ಚಟುವಟಿಕೆ. ಈ ಗುಂಪಿನ ಸದಸ್ಯರುಗಳು ಈ ಅಧಿವೇಶನದ ಕಾಲವನ್ನುಪಯೋಗಿಸಿಕೊಂಡು ವಿವಿಧ ಪ್ರಾಂತಗಳಿಂದ ಬಂದಿರುವವರು ಒಟ್ಟು ಸೇರಿ ಸಭೆ ನಡೆಸುವ ಉದ್ದಿಶ್ಯ ಹೊಂದಿತ್ತು. ಸಭೆ ಸೇರಿದರೂ ಅದರ ಪರಿಣಾಮ ಅಷ್ಟಾಗಿರಲಿಲ್ಲ. ಸಭೆಯ ನಂತರ ಪರಂಪರಾಗತವಾಗಿ ಕಾಂಗ್ರೆಸ್ಸಿಗೆ ಬಂದಿರುವ ವಿವಿಧ ಗುಂಪುಗಳ ಸಭೆ ನಡೆದಿತ್ತು. ಈ 'ಶುಂಠಿ ಗುಂಪು' ತಾನು ಅಪೇಕ್ಷಿಸಿದ್ದಷ್ಟು ಪರಿಣಾಮಕಾರಿಯಾದದ್ದೇನನ್ನೂ ಈ ಅಧಿವೇಶನದಲ್ಲಿ ನಡೆಸಲಾಗಲಿಲ್ಲ. ಸಭೆ ಸೇರಿತು ಅಷ್ಟೆ.

ಗೌಹಾತಿಯ ಅಧಿವೇಶನ ನೀರಸವಾಗಿತ್ತೆಂದು ಪತ್ರಿಕೆಗಳ ವರದಿಗಳು ತಿಳಿಸುತ್ತವೆ. ಹೆಚ್ಚು ಜನರೂ ಇರಲಿಲ್ಲವೆಂದೂ, ಪ್ರತಿನಿಧಿಗಳಿಗಾಗಿ ಮತ್ತು ಪ್ರೇಕ್ಷಕರಿಗಾಗಿ ನಿರ್ಮಿಸಲಾಗಿದ್ದ ಅನೇಕ ವಸತಿಗಳು ಖಾಲಿಯಾಗಿದ್ದುವೆಂದೂ ತಿಳಿದುಬಂದಿದೆ. ಕಳೆದ ಐದು ವರ್ಷಗಳಿಂದ ನಡೆದಿರುವ ಅಧಿವೇಶನಗಳ ಪೈಕಿ ಇದು ಹೆಚ್ಚು ನೀರಸವಾದುದಾಗಿತ್ತು ಎಂದು ಪತ್ರಿಕಾ ವರದಿಯೊಂದು ತಿಳಿಸುತ್ತದೆ.

ಬಹಿರಂಗ ಅಧಿವೇಶನ ನಡೆದಾಗ ಹೆಚ್ಚು ಜನರೇ ಇರಲಿಲ್ಲವೆಂದು ತಿಳಿದುಬರುತ್ತದೆ. ಇದಕ್ಕೆ ನಾನಾ ಕಾರಣಗಳನ್ನು ಕೊಡಲಾಗುತ್ತದೆ. ಪ್ರವೇಶ ಶುಲ್ಕ ಹೆಚ್ಚಾಗಿದ್ದುದು. ಗೌಹಾತಿಯಿಂದ ಅಧಿವೇಶನದ ನಗರ ಪ್ರಾಗ್ಜ್ಯೋತಿಷಪುರ 6 ಮೈಲು ದೂರವಿರುವುದು, ನಗರದ ಜನಸಂಖ್ಯೆಯೇ ಹೆಚ್ಚಾಗಿರದಿರುವುದೂ ಕಾರಣವಾಗಿದೆ ಎಂದು ಹೇಳಲಾಗುತ್ತಿದೆ. ಬಹಿರಂಗ ಅಧಿವೇಶನದ ಚಪ್ಪರದಲ್ಲಿ ಜನ ಸಾಕಷ್ಟಿಲ್ಲದಿದ್ದರೂ, ವಸ್ತುಪ್ರದರ್ಶನದಲ್ಲಿ ಜನ ಕಿಕ್ಕಿರಿದು ಸೇರಿದ್ದರೆಂದು ಪತ್ರಿಕಾ ವರದಿಗಳು ತಿಳಿಸುತ್ತವೆ.

ಮತ್ತೊಂದು ಅಂಶವೆಂದರೆ ಈ ಬಾರಿ ಪಶ್ಚಿಮ ಬಂಗಾಳದಿಂದ ಪ್ರಮುಖ ಕಾಂಗ್ರೆಸ್ ನಾಯಕರುಗಳಾರೂ ಅಧಿವೇಶನಕ್ಕೆ ಬಾರದಿದ್ದುದು. ಡಾ|| ಬಿ. ಸಿ. ರಾಯ್, ಪ್ರಫುಲ್ಲಸೇನ್ ಮತ್ತು ಅತುಲ್ಯಘೋಷ್‌ರಂಥ ಹಳೆಯ ಕಾಂಗ್ರೆಸ್ ನಾಯಕರುಗಳು ಬಾರದಿದ್ದುದು. ಅಲ್ಲದೆ ವಿಷಯನಿಯಾಮಕ ಸಭೆಯಲ್ಲಿ 700 ಪ್ರತಿನಿಧಿಗಳಿದ್ದರೂ ಕೂಡ 250ಕ್ಕೂ ಹೆಚ್ಚು ಪ್ರತಿನಿಧಿಗಳು ಇರಲಿಲ್ಲ

ಒಟ್ಟಿನಲ್ಲಿ ಗೌಹಾತಿಯಲ್ಲಿ ಸಮಾವೇಶಗೊಂಡಿದ್ದ 63ನೆಯ ಕಾಂಗ್ರೆಸ್ ಅಧಿವೇಶನವು ಎಂದಿನಂತೆ ದೊಡ್ಡ ತಮಾಷಾ ಆಗಿತ್ತು ಎಂದು ಹೇಳಬಹುದು.

ಕಮ್ಯೂನಿಸ್ಟ್ ಪಾರ್ಟಿ ಸಮ್ಮೇಳನಗಳು

ಬೆಂಗಳೂರು

ಭಾರತ ಕಮ್ಯೂನಿಸ್ಟ್ ಪಾರ್ಟಿಯ ವಿಶೇಷ ಸಮ್ಮೇಳನವು ಏಪ್ರಿಲ್ ತಿಂಗಳಲ್ಲಿ ಅಮೃತ್‌ಸರ್‌ನಲ್ಲಿ ನಡೆಯಲಿದೆ. ಆ ಸಂಬಂಧವಾಗಿ ಕರ್ನಾಟಕ ಪ್ರಾಂತ ಸಮಿತಿ ಸಮ್ಮೇಳನವು ಇದೇ ತಿಂಗಳ ಕೊನೆಗೆ 29, 30 ಮತ್ತು 31ರಂದು ಮಂಗಳೂರಿನಲ್ಲಿ ನಡೆಯುವುದು ಅದರ ಅಂಗವಾಗಿ ಬೆಂಗಳೂರು ಸಮಿತಿಯ ಸಮ್ಮೇಳನವು ಭಾನುವಾರ 19ರಂದು ಎಸ್. ಎಸ್. ಕೆ. ಹಾಲಿನಲ್ಲಿ ಜರಗಿತು

ಒಟ್ಟು ನಲ್ವತ್ತು ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು. ಭಾರತ ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಯು ಅಮೃತಸರ ಸಮ್ಮೇಳನದಲ್ಲಿ ಮಂಡಿಸಲಿರುವ ಪಾರ್ಟಿಯ ಸಂಘಟನಾ ನಿರ್ಣಯದ ಕರಡಿನ ಬಗ್ಗೆ ದೀರ್ಘ ಚರ್ಚೆಯು ನಡೆದು ಹಲವಾರು ತಿದ್ದುಪಡಿಗಳನ್ನು ಸೂಚಿಸಲಾಯಿತು.

ಪ್ರಾರಂಭದಲ್ಲಿ ಕರ್ನಾಟಕ ಪ್ರಾಂತ ಸಮಿತಿಯ ಸದಸ್ಯರಾದ ಕಾ॥ ಬಿ. ವಿ. ಕಕ್ಕಿಲ್ಲಾಯರವರು ಕರಡು ನಿರ್ಣಯದ ಬಗ್ಗೆ ದೀರ್ಘ ವರದಿಯನ್ನು ಒಪ್ಪಿಸಿದರು. ಪ್ರತಿನಿಧಿಗಳು ಅದರ ಮೇಲೆ ಚರ್ಚೆಗಳನ್ನು ನಡೆಸಿದರು. ಕೊನೆಯಲ್ಲಿ ಪ್ರಾಂತ ಸಮಿತಿಯ ಕಾರ್ಯದರ್ಶಿಗಳಾದ ಕಾ॥ ಎನ್. ಎಲ್. ಉಪಾಧ್ಯಾಯರು ಮಾತನಾಡಿ; ಇಂದು ಪಾರ್ಟಿಯ ಸಂಘಟನೆಯಲ್ಲಿ ಪರಿವರ್ತನೆಯ ಅವಶ್ಯಕತೆ ಯಾಕೆ ಎಂಬುದರ ಬಗ್ಗೆ ವಿವರಣೆ ನೀಡಿ, ಪಾರ್ಟಿಯ ಮೇಲಿರುವ ದೊಡ್ಡ ಜವಾಬ್ದಾರಿಯನ್ನು ನಿರ್ವಹಿಸುವ ಉದ್ದೇಶದಿಂದ ಪುನರ್ಘಟನೆಯನ್ನು ಮಾಡಲಾಗಿದೆ ಎಂಬ ಅಂಶವನ್ನು ಸ್ಪಷ್ಟಪಡಿಸಿದರು.

ಪ್ರಾಂತಸಮಿತಿಯ ಸಮ್ಮೇಳನಕ್ಕೆ ಎಂಟು ಮಂದಿ ಪ್ರತಿನಿಧಿಗಳನ್ನು ಚುನಾಯಿಸಲಾಯಿತು.

ಪಾರ್ಟಿ ಸದಸ್ಯರುಗಳಾದ ಕೊಡಗಿನ ಕಾಮ್ರೇಡ್ ನರೇಂದ್ರ, ಬೆಂಗಳೂರಿನ ಕುಪ್ಪಸ್ವಾಮಿ ಮತ್ತು ಜೆ. ಶ್ರೀನಿವಾಸರಾವ್‌ರವರ ನಿಧನದ ಬಗ್ಗೆ ಸಮ್ಮೇಳನದಲ್ಲಿ ಸಂತಾಪ ಸೂಚನೆಯನ್ನು ಮಾಡಲಾಯಿತು.

ಸಭೆಯಲ್ಲಿ ಕೆಳಗಿನ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ನಿರ್ಣಯಗಳು

ಬೆಂಗಳೂರು ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿಯ ಸಮ್ಮೇಳನವು ಮೈಸೂರು ಸರ್ಕಾರದ ಕಾರ್ಮಿಕ ಧೋರಣೆಯನ್ನು ತೀವ್ರವಾಗಿ ಗಮನಿಸಿದೆ. ಕಾರ್ಮಿಕರು ದೇಶದ ಬೆನ್ನೆಲುಬು, ಹಾಗೂ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕಾರ್ಮಿಕರ ಪಾತ್ರ ಅತಿ ಮುಖ್ಯವಾದದ್ದು ಎಂಬುದನ್ನು ಆಳುವ ವರ್ಗ ಒಪ್ಪಿಕೊಂಡಿದ್ದರೂ ಸಹ, ಕಾರ್ಯತಃ ಅವರ ನೀತಿಯು ಕಾರ್ಮಿಕರ ಹಿತ ರಕ್ಷಣೆಗೆ ವಿರೋಧವಾಗಿಯೂ, ಪ್ರತಿಗಾಮಿಯಾಗಿಯೂ ಇದೆ. ಉದಾಹರಣೆಗೆ, ಕಾರ್ಮಿಕ-ಮಾಲಿಕರ ನಡುವೆ ಉದ್ಭವಿಸುವ ವಿವಾದಗಳನ್ನು ಆದಷ್ಟು ಶೀಘ್ರವಾಗಿ ಬಗೆಹರಿಸಬೇಕೆಂದೂ, ಈಗಿರುವುದಕ್ಕಿಂತ ಹೆಚ್ಚು ಟ್ರಿಬ್ಯೂನಲ್‌ಗಳನ್ನು ರಚನೆ ಮಾಡಬೇಕೆಂದು ಕಾರ್ಮಿಕ ಸಂಘಗಳು ಒತ್ತಾಯಪಡಿಸಿದ್ದರೂ ಸಹ, ಸರ್ಕಾರವು ಒಂದೇ ನ್ಯಾಯಾಲಯ ಸಾಕೆಂದು ನಿರ್ಧರಿಸಿದೆ ಕಾರ್ಮಿಕ ಪ್ರಶ್ನೆಗಳು ಇತ್ಯರ್ಥವಾಗಲು ವಿನಾಕಾರಣ ಕಾಲವಿಳಂಬ ಮಾಡಲು ಅವಕಾಶ ಕೊಟ್ಟಿದೆ. ಅಂತೆಯೇ ವಿವಾದಗಳು ಮಾತುಕತೆಗಳಲ್ಲಿ ಇತ್ಯರ್ಥವಾಗದಿದ್ದಲ್ಲಿ ಕೈಗಾರಿಕಾ ನ್ಯಾಯಾಲಯಕ್ಕೆ ಒಪ್ಪಿಸಬೇಕೆಂದು ಕಾರ್ಮಿಕ ಸಂಘಗಳು ಹಲವಾರು ಬಾರಿ ಕೇಳಿದ್ದರೂ ಸಹ ಅವುಗಳನ್ನು ಒಪ್ಪಿಸದೆ, ದಿನ ತಳ್ಳುತ್ತಿದೆ. ಮುಖ್ಯವಾಗಿ ಕೇಂದ್ರ ಸರ್ಕಾರದ ಕೈಗಾರಿಕೆಗಳಲ್ಲಿ ಈ ನೀತಿಯನ್ನನುಸರಿಸಲಾಗುತ್ತಿದೆ. ಇನ್ನೊಂದು ಅಂಶವೆಂದರೆ, ಸರ್ಕಾರದ ನೀತಿಯನ್ನು ರೂಪಿಸಲು, ಅಥವಾ ಅದರ ಬಗ್ಗೆ ಸಲಹೆ ನೀಡಲು ಲೇಬರ್ ಅಡ್ವೈಸರಿ ಸಮಿತಿಗಳನ್ನಾಗಲೀ, ವೇತನಸಮಿತಿಯನ್ನಾಗಲೀ ಸಮರ್ಪಕವಾದರೀತಿಯಲ್ಲಿ ರಚಿಸದಿರುವುದು ಇದೆ. ಕನಿಷ್ಠ ಕೂಲಿ ಶಾಸನ, ಫಾಕ್ಟರಿ ಶಾಸನ ಇತ್ಯಾದಿ ಶಾಸನಗಳ ಉಲ್ಲಂಘನೆಯನ್ನು ತಡೆಗಟ್ಟದೆ ಬಂಡವಾಳಗಾರರಿಗೆ ಅನುಕೂಲ ಮಾಡಿಕೊಟ್ಟಿದೆ. ಸಕಾರರ್ದ ನೌಕರರಿಗೆ ವೇತನ ನಿರ್ಣಯ ಮಾಡಿದ್ದರೂ ಸಹ ಅದನ್ನು ಜಾರಿಗೆ ತರದೆ ಇದೆ.

ಎಲ್ಲಕ್ಕಿಂತ ಮಿಗಿಲಾಗಿ, ಸರ್ಕಾರವು ಕಾರ್ಮಿಕರ ಪ್ರಶ್ನೆಗಳನ್ನು ಬಗೆಹರಿಸುವ ಬದಲು, ಅವರ ಹೋರಾಟಗಳನ್ನು ಹತ್ತಿಕ್ಕಲು ದಬ್ಬಾಳಿಕಾ ಅಸ್ತ್ರವನ್ನು ಉಪಯೋಗಿಸುತ್ತದೆ. ಹಿಂದುಸ್ತಾನ ವಿಮಾನ ಕಾರ್ಖಾನೆ ನೌಕರರ ನ್ಯಾಯವಾದ ಮತ್ತು ಶಾಂತಿಯುತವಾದ ಹೋರಾಟವನ್ನು ಮುರಿಯಲು ತೀವ್ರವಾದ ದಬ್ಬಾಳಿಕಾ ಅಸ್ತ್ರವನ್ನುಪಯೋಗಿಸಲಾಗಿದೆ. ಸುಮಾರು 84 ಕಾರ್ಮಿಕರನ್ನು ಬಂಧಿಸಿ ಕೇಸುಗಳನ್ನು ಹೊರಿಸಲಾಗಿದೆ. ಮ್ಯಾನೇಜ್‌ಮೆಂಟಿನವರು ಈ 84 ಜನರನ್ನು ಸಸ್ಪೆಂಡ್ ಮಾಡಿ ಅವರ ಮೇಲೆ ಶಿಸ್ತಿನ ಕಾರ್ಯಕ್ರಮ ಕೈಗೊಳ್ಳಲು ಅನುಕೂಲ ಮಾಡಿಕೊಟ್ಟಿದೆ. ಕೇಸುಗಳನ್ನು ವಾಪಾಸು ಪಡೆಯುವುದಾಗಿ ಕೊಟ್ಟ ಆಶ್ವಾಸನೆಯನ್ನು ಪರಿಪಾಲಿಸಿಲ್ಲ. 144ನೇ ಸೆಕ್ಷನ್ ವಿಮಾನ ಕಾರ್ಖಾನೆಯ ಪ್ರದೇಶದಲ್ಲಿ ಹೋರಾಟ ಮುಗಿದು $1\frac{3}{4}$ ತಿಂಗಳಾದರೂ ಸಹ ಇನ್ನೂ ಜಾರಿಯಲ್ಲಿದೆ.

ಸರ್ಕಾರದ ಈ ನೀತಿಯಿಂದಾಗಿ ಕಾರ್ಮಿಕರ ಪ್ರಶ್ನೆಗಳು ಬಗೆಹರಿಯದೇ ಉಳಿದಿವೆ. ಅಶಾಂತಿ ಹೆಚ್ಚುತ್ತಿದೆ. ಸರ್ಕಾರದ ನೀತಿಯು ಅವರು ಘೋಷಿಸುತ್ತಿರುವ ತತ್ವಗಳಿಗೆ ವಿರೋಧವಾಗಿದೆಯೆಂದೂ, ಮತ್ತು ಅದು ಎರಡನೆಯ ಪಂಚವಾರ್ಷಿಕ ಯೋಜನೆಗೇ ಧಕ್ಕೆ ತರುವಂತಹದೆಂದೂ ಈ ಸಮ್ಮೇಳನವು ಅಭಿಪ್ರಾಯಪಡುತ್ತದೆ.

ಸರ್ಕಾರವು ಈ ನೀತಿಯನ್ನು ಬದಲು ಮಾಡಬೇಕೆಂದು ಸ್ಪಷ್ಟಪಡಿಸುತ್ತಾ, ಕೂಡಲೇ ಕೆಳಗಿನ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದೂ ಒತ್ತಾಯಪಡಿಸುತ್ತದೆ.

1. ಕನಿಷ್ಟಪಕ್ಷ ಮೂರು ಕೈಗಾರಿಕಾ ನ್ಯಾಯಾಲಯಗಳನ್ನಾದರೂ, ಪ್ರಾದೇಶಿಕವಾಗಿ (ಉತ್ತರ ಕನ್ನಡ, ಮೈಸೂರು, ಕೊಡಗು ಮತ್ತು ದಕ್ಷಿಣ ಕನ್ನಡ) ರಚಿಸಬೇಕು.

2. ಕಾರ್ಮಿಕರ ಪ್ರತಿನಿಧಿಗಳನ್ನೊಳಗೊಂಡ, ಲೇಬರ್ ಅಡ್ವೈಸರಿ ಬೋರ್ಡ್‌ಗಳನ್ನು ಕೂಡಲೇ ರಚಿಸಬೇಕು.

3. ಮುಖ್ಯ ಕೈಗಾರಿಕೆಗಳಲ್ಲಿ ವೇತನ ನಿರ್ಣಯಿಸಲು ವೇತನ ಸಮಿತಿಗಳನ್ನು ರಚಿಸಬೇಕು.

4. ಕಾರ್ಮಿಕರ ವಿವಾದಗಳನ್ನು ಶೀಘ್ರವಾಗಿ ಇತ್ಯರ್ಥ ಮಾಡಲು ತ್ವರಿತ ಮಾತುಕತೆಗಳು ಫಲಕಾರಿಯಾಗದಿದ್ದಲ್ಲಿ ಅವುಗಳನ್ನು ಕೈಗಾರಿಕಾ ನ್ಯಾಯಾಲಯಕ್ಕೆ ಒಪ್ಪಿಸಬೇಕೆಂದು ಯಾವ ಸಂಘವೇ ಕೇಳಿದಲ್ಲಿ ಅವುಗಳನ್ನು ಕೂಡಲೇ ಒಪ್ಪಿಸಬೇಕು.

5. ಕನಿಷ್ಠ ಕೂಲಿಶಾಸನ, ಫ್ಯಾಕ್ಟರಿ ಶಾಸನ ಇತ್ಯಾದಿ ಶಾಸನಗಳನ್ನು ತ್ವರಿತವಾಗಿ ಜಾರಿಗೆ ತರಬೇಕು. ಅದಕ್ಕೆ ಬೇಕಾದ ಯಂತ್ರವನ್ನು ರಚಿಸಬೇಕು. ಮತ್ತು ಶಾಸನಗಳನ್ನು ಉಲ್ಲಂಘಿಸುವ ಮಾಲೀಕರನ್ನು ದಂಡಿಸಬೇಕು.

6. ಹಿಂದೂಸ್ತಾನ್ ವಿಮಾನ ಕಾರ್ಖಾನೆ ನೌಕರರ 515 ಕಮಾಂಡ್ ವರ್ಕ್‌ಶಾಪ್ ಕೆಲಸಗಾರರ ಮೇಲೆ ಹೊರಿಸಿರುವ ಕೇಸುಗಳನ್ನು, ಶಿಸ್ತಿನ ಕ್ರಮಗಳನ್ನು ವಾಪಾಸು ಪಡೆದು, ಅವರ ಪ್ರಶ್ನೆಗಳನ್ನು ಶೀಘ್ರವಾಗಿ ಇತ್ಯರ್ಥ ಮಾಡಬೇಕು.

ಮೇಲಿನ ಕಾರ್ಯಕ್ರಮವನ್ನು ಕಾರ್ಯಗತಗೊಳಿಸಲು ಎಲ್ಲ ಕಾರ್ಮಿಕರೂ, ಒಂದಾಗಿ ಹೋರಾಟ ನಡೆಸಬೇಕೆಂದು ಈ ಸಮ್ಮೇಳನವು ಮನವಿ ಮಾಡುತ್ತದೆ.

ಕಾರ್ಪೊರೇಷನ್ ಚುನಾವಣೆಗಳು

ಕಳೆದ ಕಾರ್ಪೊರೇಷನ್ ಚುನಾವಣೆಗಳಲ್ಲಿ ವಿರೋಧ ಪಕ್ಷದವರಿಗೆ ಹೆಚ್ಚಿನ ಮತ ಕೊಟ್ಟು ಅವರನ್ನು ಜಯಶೀಲರನ್ನಾಗಿ ಮಾಡಿರುವುದಲ್ಲದೆ, ಕಾಂಗ್ರೆಸ್ ಪಕ್ಷದ ಅನೇಕ ವರ್ಷದ ಗುತ್ತಿದಾರಿ ಮುರಿಯುವಂತೆ ಬೆಂಗಳೂರಿನ ಜನತೆ ಮಾಡಿರುವುದಕ್ಕಾಗಿ ಅವರನ್ನು ಈ ಸಮ್ಮೇಳನ ಅಭಿನಂದಿಸುತ್ತದೆ.

ಬೆಂಗಳೂರಿನ ಕಾರ್ಪೊರೇಷನ್ ಅನೇಕ ವರ್ಷಗಳಿಂದ ಕಾಂಗ್ರೆಸ್ ಪಕ್ಷದ ಕೈಯಲ್ಲೇ ಇದ್ದರೂ ಸಹ ಜನತೆಯ ಪ್ರಶ್ನೆಗಳಾದ, ಸರಿಯಾದ ನೀರಿನ ಸೌಕರ್ಯ, ನಗರ ನೈರ್ಮಲ್ಯ ಹೆಚ್ಚಿನ ತೆರಿಗೆ ಇತ್ಯಾದಿ ಅನೇಕ ವಿಷಯಗಳಲ್ಲಿ ಜನರಿಗೆ ಅನುಕೂಲವಾಗದೆ, ಸ್ವಜನ ಪಕ್ಷಪಾತ, ಲಂಚಗುಳಿತನ, ಸ್ವಹಿತಸಾಧನೆಯ ಬೀಡಾಗಿದೆ. ಬಡಜನರ ವಾಹನವಾದ ಸೈಕಲ್‌ಗೆ ಕೊಡುತ್ತಿರುವ ತೆರಿಗೆಗಳನ್ನು ರದ್ದುಮಾಡಬೇಕೆಂದು ಜನತೆಯ ಒತ್ತಾಯವಿದ್ದರೂ ಸಹ, ಕಾರ್ಪೊರೇಷನ್ ತೀರ್ಮಾನವಾಗಿದ್ದರೂ ಸಹ, ಹಾಗೆಯೇ ಉಳಿದಿದೆ. ಈಗ ಹೆಚ್ಚಿನ ಮಂದಿ ವಿರೋಧ ಪಕ್ಷದವರು ಆರಿಸಿ ಬಂದಿರುವುದರಿಂದ ಅವರ ಮೇಲೆ ಹೆಚ್ಚಿನ ಜವಾಬ್ದಾರಿಯಿದೆ. ಜನತೆ ಅವರ ಬಗ್ಗೆ ಆಶೆ-ಆಕಾಂಕ್ಷೆಗಳನ್ನಿಟ್ಟಿದೆ. ಇವುಗಳನ್ನು

(೭ನೇ ಪುಟ ನೋಡಿ)

ಬಳ್ಳಾರಿ

ಜನವರಿ ತಾ. 12 ಮತ್ತು 13 ರಂದು ಬಳ್ಳಾರಿ ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿಯ ಪ್ರಥಮ ಸಮ್ಮೇಳನವು ಬಳ್ಳಾರಿ ಪಟ್ಟಣದಲ್ಲಿ ಜರಗಿತು. ಶ್ರೀಗಳಾದ ಎ. ತಿಪ್ಪಯ್ಯ, ರಾಮಪ್ಪ ಮತ್ತು ಕೇಶಪ್ಪ ಇವರನ್ನೊಳಗೊಂಡ ಅಧ್ಯಕ್ಷ ಮಂಡಲಿಯು ಸಮ್ಮೇಳನದ ಅಧ್ಯಕ್ಷತೆ ವಹಿಸಿತ್ತು.

ಜಿಲ್ಲಾ ಸಮಿತಿಯ ಕಾರ್ಯದರ್ಶಿ ಶ್ರೀ ಅರವಿಂದರವರು ಪಾರ್ಟಿಯ ಕೆಲಸಗಳ ವರದಿಯನ್ನು ಸಮ್ಮೇಳನಕ್ಕೆ ಒಪ್ಪಿಸಿದರು. ಅದರ ಮೇಲೆ ದೀರ್ಘವಾದ ಚರ್ಚೆ ನಡೆಯಿತು. ಬಳ್ಳಾರಿಯಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಮುನ್ಸಿಪಲ್ ಕೆಲಸಗಾರರ, ಲಮಾಣಿ ಜನರ, ರೈತರ ಮತ್ತು ಕಬ್ಬಿಣದ ಅದಿರು ಗಣಿಕೆಲಸಗಾರರ ಸಂಘಟನೆಗೆ ಪ್ರಾಮುಖ್ಯತೆ ಕೊಟ್ಟು ಕೆಲಸ ಮಾಡಬೇಕೆಂದು ನಿರ್ಣಯವಾಯಿತು. ಒಂದು ಪುಸ್ತಕಾಲಯವನ್ನು ತೆರೆಯಲು ನಿರ್ಣಯವಾಯಿತು. ಪಾರ್ಟಿಗೆ ರೂ 2000 ದ ನಿಧಿಯನ್ನು ಸಂಗ್ರಹಿಸುವಕಾರ್ಯ ನಡೆದಿದ್ದು ಒಂದು ಲೌಡ್‌ಸ್ಪೀಕರ್ ಹಾಗೂ ನಗದಿಯಾಗಿ ಒಟ್ಟು ರೂ. 1000ಕ್ಕಿಂತ ಹೆಚ್ಚು ಈಗಾಗಲೇ ಸಂಗ್ರಹವಾಗಿದೆ. ಸಹಾಯ ನೀಡಿದವರಿಗೆ ಸಮ್ಮೇಳನವು ಅಭಿನಂದನೆಗಳನ್ನು ಅರ್ಪಿಸಿ, ಹೆಚ್ಚಿನ ಸಹಾಯಕ್ಕೆ ಕರೆಕೊಟ್ಟಿತು.

ಅನಂತಪುರ ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿ ಕಾರ್ಯದರ್ಶಿ ಶ್ರೀ ಪಿ. ಸದಾಶಿವನ್‌ರವರು ಪಾರ್ಟಿಯ ಘಟನೆಗೆ ಉಚಿತವಾಗಿರುವ ತಿದ್ದುಪಡಿಗಳನ್ನು ವಿವರಿಸಿ, ಕಮ್ಯೂನಿಸ್ಟ್ ಪಾರ್ಟಿಯನ್ನು ವಿಶಾಲವಾದ ಜನತಾ ಪಕ್ಷವಾಗಿ ಬೆಳೆಸಬೇಕೆಂದು ತಿಳಿಸಿದರು.

ಕರ್ನಾಟಕ ಪ್ರಾಂತ ಸಮಿತಿಯ ಸದಸ್ಯ ಶ್ರೀ ಬಿ.ವಿ. ಕಕ್ಕಿಲ್ಲಾಯರು ಮೈಸೂರು ಸರಕಾರವು ಕಾರ್ಮಿಕರ ಹಿತವನ್ನು ಮಾಲಿಕರ ಲಾಭಕ್ಕೆ ಬಲಿ ಕೊಡುವ ಮತ್ತು ಕಾರ್ಮಿಕರ ಮೇಲೆ ದಬ್ಬಾಳಿಕೆ ನಡೆಸುವ ನೀತಿಯನ್ನು ಖಂಡಿಸಿದರು; ಜತ್ತಿ ಸಮಿತಿಯ ಲೋಪ ದೋಷಗಳನ್ನು ಎತ್ತಿ ತೋರಿಸಿ, ಅವುಗಳನ್ನು ತಿದ್ದಿ ಪ್ರಗತಿಶೀಲ ಭೂಸುಧಾರಣೆ ಮಾಡಲು ಸರಕಾರವನ್ನು ಒತ್ತಾಯಿಸುವ ಅವಶ್ಯಕತೆಯನ್ನು ವಿವರಿಸಿದರು. ಕಮ್ಯೂನಿಸ್ಟ್ ಪಾರ್ಟಿಯು ಕರ್ನಾಟಕದ ರಾಜಕೀಯದಲ್ಲಿ ಪರಿಣಾಮಕಾರಿಯಾಗಿ ವರ್ತಿಸಲು ಸಾಧ್ಯವಾಗುವಂತೆ ಪಾರ್ಟಿಯ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಬೇಕೆಂದೂ, ಸಂಘಟನೆ ಬಲಪಡಿಸಬೇಕೆಂದೂ, ಚಟುವಟಿಕೆ ತೀವ್ರಗೊಳಿಸಬೇಕೆಂದೂ ತಿಳಿಸಿದರು.

ತಾ. 13 ರಂದು ಸಾಂಬಮೂರ್ತಿ ಮೈದಾನದಲ್ಲಿ ಶ್ರೀ ರಾಮಪ್ಪನವರ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಶ್ರೀ ಟಿ. ನಾಗರೆಡ್ಡಿ, ಎಂ.ಪಿ. ಅವರು ವಿಶ್ವಶಾಂತಿಯನ್ನು ರಕ್ಷಿಸುವ ಮಹತ್ಕಾರ್ಯದಲ್ಲಿ ಭಾರತ ಸರಕಾರ ಮತ್ತು ಜನತೆ ಪ್ರಾಮುಖ್ಯ ಪಾತ್ರವಹಿಸುವ ಅವಶ್ಯಕತೆಯನ್ನು ವಿವರಿಸಿದರು, ಭಾಷಾ ಸಮಸ್ಯೆಯ ಬಗ್ಗೆ ಕಮ್ಯೂನಿಸ್ಟ್ ಪಾರ್ಟಿಯ ಧೋರಣೆಯೇನೆಂದು ತಿಳಿಸಿದರು, ಕೇರಳ ಸರಕಾರಕ್ಕೆ ಬೆಂಬಲ ನೀಡಲು ಕರೆಕೊಟ್ಟರು. ಶ್ರೀ ಪಿ. ಸದಾಶಿವನ್ ಮತ್ತು ಶ್ರೀ ಬಿ. ವಿ. ಕಕ್ಕಿಲ್ಲಾಯರು ಮಾತನಾಡಿದ ಬಳಿಕ ಶ್ರೀ ಅರವಿಂದರವರು ವಂದನಾರ್ಪಣೆಮಾಡಿ ಸಭೆ ಮುಕ್ತಾಯವಾಯಿತು.

ಮನೆ ಮುರಿದ ಮಗ

(ಸಾಮಾಜಿಕ ನಾಟಕ)

ಮೂಲ: ಶ್ರೀ ತೋಪಿಲ್ ಭಾಸಿ. ಅನುವಾದ: ಪಂಡಿತ್.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ರಾಮಪ್ಪ: ಮಾಡೋದೇನು? ಮಣ್ಣು! ಪ್ರೊಸೀಡಿಂಗ್ಸ್ ಪುಸ್ತಕ ತಗೋ—ಬೇಕಾದಂಗೆ ಬರಿ—ನಾನೂ ಸಹಿ ಹಾಕ್ತೀನಿ, ನೀನೂ ಹಾಕು! ನಾಳೆ ನಮ್ಮ ಈರಣ್ಣ, ಫೆರ್ನಾಂಡೀಸ್, ಇಮಾಂ ಸಾಬ್ರು, ಶಂಕರ ಬಟ್ರು—ಮತ್ತೆ ಯಾರ್ಯಾರು ಸಿಕ್ತಾರೋ ಅವ್ರಿಂದೆಲ್ಲ ದಸ್ಕತ್ ತಗೋ! ನಾನ್ ಹೇಳಿದ್ದೇನೇಂತನ್ನು! ಎಲ್ಲ ಹಾಕ್ತಾರೆ—ದಸ್ಕತ್ತು!

ನಾರಾಯಣಪ್ಪ: ಹಂಗೇ ಮಾಡಾನ!

ರಾಮಪ್ಪ: ಯಾರ್ಯಾರು ಸೇರಿಲ್ಲ? ಹೇಳು!

ನಾರಾಯಣಪ್ಪ: ಅದ್ಯಾಕೆ ಕೇಳ್ತೀರಿ ಸ್ವಾಮಿ? ನಮ್ಮವರೇ ಸೇರಿಲ್ಲಾಂದ್ರೆ ಹೊರಗಿನವ್ರು ಸೇರ್ತಾರೆಯೆ? ಚಂದಾ ಕೇಳಿದ್ರೆ—ಎಲ್ಲ ತಕ್ರಾರೇ! ನಿನ್ನೆ ಗೋವಿಂದಪ್ಪನ್ನ ಕೇಳ್ದೆ—ಅವ ಏನಂದ ಗೊತ್ತೆ?

ರಾಮಪ್ಪ: ಗೋವಿಂದಪ್ಪನೂ ಚಂದಾ ಕೊಡ್ಲಿಲ್ವೆ?

ನಾರಾಯಣಪ್ಪ: ಕೊಡೋದು ಬಿಡಿ! 'ನಿನ್ನ ಪ್ರಸಿಡೆಂಟ್ರು ಕೊಟ್ಟಿದ್ದಾರೇನಯ್ಯ, ಚಂದಾನ?' ಅಂತ ಕೇಳ್ದ. ಹೌದೂಂದೆ. 'ಅಲ್ಲೊ—ಅವರ ಮನೆಯವ್ರ ಚಂದಾ ಬಂತೇಂತ ನಾನ್ ಕೇಳೋದು' ಅಂತಂದ. ನಾನೇನ್ ಹೇಳ್ಲಿ ಸ್ವಾಮಿ! 'ರಾಯ್ರಿಗೂ ಮನೆಯವರಿಗೂ ಸಂಬಂಧ ಇಲ್ಲ. ಅವರಿರೋದು ಗೋಪೀ ಸದನದಲ್ಲೀಂದೆ. ತೆಗ್ದ ಬಾಯಿಗೆ ಅವನನ್ತಾನೆ—'ಗೋಪೀ ಸದನದಲ್ಲಿರ್ಲಿ, ಸುಡ್ಗಾಡಲ್ಲಿರ್ಲಿ—ಅವರ ಮನೆಯವರ ಚಂದಾ ಮೊದ್ಲು ಕೊಡ್ಲಿ! ಮತ್ತೆ ನಮ್ಮನ್ನ ಕೇಳ್‌ಲಿ' ಅಂತ!

ರಾಮಪ್ಪ: ನಮ್ಮ ಮನೆಯವರ ಚಂದಾ ಬರ್ಲಿಲ್ವೆ?

ನಾರಾಯಣಪ್ಪ: ಅದೇ ನಾನ್ ಹೇಳ್ತಿರೋದು! ಅಮ್ಮಾವ್ರನ್ನ ಕೇಳಿದ್ರೆ—ಇಲ್ಲಾಂತಾರೆ! ರಾಜಪ್ಪನ ಕೇಳಿದ್ರೆ—ಹೊಡ್ಯೋಕ್ ಬರ್ತಾರೆ!

ರಾಮಪ್ಪ: ಹೂಂ! ಅಮ್ಮಾಗ್ಲಿ, ತಮ್ಮಾಗ್ಲಿ—ಚಂದಾ ಕೊಡ್ಲಿಲ್ಲಾಂದ್ರೆ ಈ ಗ್ರಾಮದಲ್ಲಿ ಇರ್ಕೂಡ್ದು! ನಂಗೆ ಅವಮಾನಮಾಡಿ ಹೆಂಗೆ ಉಳ್ಕೋತಾರೋ ನೋಡ್ತೀನಿ! ಯಾರಾದ್ರೆ ಏನಂತೆ!

(ಗೋಪಿ ಪ್ರವೇಶಿಸುತ್ತಾಳೆ)

ಗೋಪಿ: ಊಟಕ್ಕೆ—

ರಾಮಪ್ಪ: (ಅವಳ ಮಾತನ್ನು ತಡೆದು) ಬರ್ತಾ ಒಂದು ಎಳ್ನೀರು ಕುಡ್ದ್‌ಬಿಟ್ಟೆ. ಇನ್ನೂ ಹಸಿವಿಲ್ಲ.

ಗೋಪಿ: (ಸುತ್ತಲೂ ನೋಡುತ್ತ) ಇಲ್ಲೊಬ್ರು ಕುಂತಿದ್ರಲ್ಲ? ಊಟಕ್ಕೆ ಇರ್ತಾರಾಂತ ಅಂದ್ಕೊಂಡಿದ್ದೆ!

ರಾಮಪ್ಪ: ಎಲ್ಲೋ ಊಟ ಮಾಡ್ಕೊಂಡೇ ಬಂದಿರ್ಬೇಕು ಬಿಡು!

ಗೋಪಿ: ಒಳ್ಳೆ ಮಾವಿನ ಹಣ್ಣಿದೆ—ತರ್ಲೆ? (ನಾರಾಯಣಪ್ಪ ಆಸೆಯಿಂದ ರಾಮಪ್ಪನ ಮುಖ ನೋಡ್ತಾನೆ.)

ರಾಮಪ್ಪ: ಈಗ ಬೇಡ! (ನಾರಾಯಣಪ್ಪನ ಮುಖ ಸಪ್ಪೆಯಾಗುತ್ತದೆ.)

ಗೋಪಿ: ಅತ್ತೆ ಬೆಳಗಿಂದ ಕಾದ್ಕೊಂಡಿದಾರೆ!

ರಾಮಪ್ಪ: ಹೇಂ!

ಗೋಪಿ: ಏನೋ ಮಾತಾಡ್ಬೇಕಂತೆ—ಬೆಳಿಗ್ಗೇನೆ ಬಂದಿದ್ದಾರೆ! ಊಟಾನು ಮಾಡಿಲ್ಲ!

ರಾಮಪ್ಪ: (ಕೋಪದಿಂದ) ಅದೆಲ್ಲ ನಂಗೊತ್ತು! ಮಾತಾಡೋದಿಕ್ಕೆ ಬಂದಿದಾರೆ! ಹುಂ!

ನಾರಾಯಣಪ್ಪ: (ಮೆಲ್ಲಗೆ) ಏನೂಂತ ತಿಳ್ಕೊಂಡ್ರೆ ನಷ್ಟ ಇಲ್ಲ!

ರಾಮಪ್ಪ: ಏನೋ ಕೇಳೋಕೆ ಬಂದಿದ್ದಾರೆ! ಮತ್ತೇನು ಮಾತಾಡೋದು, ಸುಡ್ಗಾಡು! (ಕುರ್ಚಿಯಲ್ಲಿ ಕುಳಿತುಕೊಂಡು, ಗೋಪಿಯೊಡನೆ) ಇಲ್ಲೇ ಮಾತಾಡ್ಲಿ! ಬರ್ಲಿ ಹೇಳು!

(ಗೋಪಿ ಚಿಂತೆಯಿಂದ ಒಳಗೆ ಹೋಗುತ್ತಾಳೆ.)

ರಾಮಪ್ಪ: (ಮುಖ ಕೆಳಗೆ ಹಾಕಿ ಲೆಖ್ಖದ ಪುಸ್ತಕ ನೋಡುತ್ತಾನೆ) ಈ ಕಾಲದಲ್ಲಿ ಪ್ರೀತಿ-ಗೌರವಾ-ತೋರ್ಸುವವರು ದಿವಾಳಿ ಆಗ್ತಾರೆ!

ನಾರಾಯಣಪ್ಪ: ಅದ್ ನಿಜ! ಹಾಲ್ ನೀಡೋ ಹಸ್ವಿನ ಕೆಚ್ಚಲೇ ಕುಯ್ದು ಬಿಡ್ತಾರೆ!

ರಾಮಪ್ಪ: ಇರೋದನ್ನೆಲ್ಲ ಹಾಳ್ಮಾಡಿ, ಮಾನಾ-ಮರ್ಯಾದೆ ಕಳೆಯುವ ಬಿಟ್ಟೀ ಬಸ್ವಾಂದ್ರೆ - ಭಾರೀ ಪ್ರೀತಿ ಮತ್ತೆ!

ನಾರಾಯಣಪ್ಪ: ಅದೂ ನಿಜಾನೆ!

(ಪಾರ್ವತಮ್ಮ—ರಾಮಪ್ಪನ ತಾಯಿ—ಮೆಲ್ಲಗೆ ಪ್ರವೇಶಿಸಿ, ಬಾಗಿಲಿನ ಹತ್ತಿರ ನಿಂತುಕೊಂಡು, ಮಗನನ್ನೆ ನೋಡುತ್ತಾಳೆ. ಅವಳ ವಯಸ್ಸು ಐವತ್ತು. ಮಾಸಿದ ಹರಕು ಬಟ್ಟೆ ತೊಟ್ಟುಕೊಂಡಿದ್ದಾಳೆ. ಮುಖದಲ್ಲಿ ನಿರಂತರವಾದ ಕಷ್ಟ ಸಹನೆ ಮುದ್ರೆ ಒತ್ತಿದಂತಿದೆ. ಚಿಂತೆ ತುಂಬಿದೆ. ರಾಮಪ್ಪ ಲೆಖ್ಖ ಪುಸ್ತಕ ನೋಡುವುದರಲ್ಲೆ ಮಗ್ನನಾಗಿದಾನ್ದೆ).

ನಾರಾಯಣಪ್ಪ: (ರಾಮಪ್ಪನೊಡನೆ) ಅಮ್ಮ ಬಂದಿದಾರೆ!

ರಾಮಪ್ಪ: (ಮೊದಲಿನಂತೆಯೆ ಪುಸ್ತಕ ನೋಡುತ್ತ, ತಾಯಿಯ ಮುಖ ನೋಡದೆ) ಏನಂತೆ?

ಪಾರ್ವತಿ: (ಮೆಲ್ಲಗೆ) ಸ್ವಲ್ಪ ಮಾತಾಡ್ಲಿಕ್ಕಂತ ಬಂದೆ, ರಾಮೂ!

ರಾಮಪ್ಪ: (ಮೊದಲಿನ ಮಟ್ಟಿನಲ್ಲೆ) ಏನದು?

ಪಾರ್ವತಮ್ಮ: ಬೇರೆಯವರ ಮುಂದೆ ಹೆಂಗೆ ಹೇಳ್ಲಿ? ನೀನ್ ಒಳಗೆ ಬಾ—ಹೇಳ್ತೀನಿ!

ರಾಮಪ್ಪ: ಹೋ! ನಾರಾಯಣಪ್ಪ ಕೇಳ್‌ಬಾರ್ದ ಗುಟ್ಟು ನಾನೂ ಕೇಳೋಲ್ಲ!

ನಾರಾಯಣಪ್ಪ: ಅದ್ಯಾಕೆ? ನಾನು ಹೊರಗೆ ಹೋಗಿಬಿಡ್ತೀನಿ, ಹಂಗಾದ್ರೆ! ಅಮ್ಮಾವ್ರಿಗೆ—ಪಾಪ—ಸಂಕೋಚ!

ಪಾರ್ವತಮ್ಮ: ನಮ್ ಮನೇ ಕಷ್ಟಾನ ಯಾರ್ಯಾರ ಮುಂದೆ ಯಾಕೆ ತೋಡಿಕೊಳ್ಬೇಕೂಂತ ಹಂಗೆ ಹೇಳ್ದೆ!

ರಾಮಪ್ಪ: ಕಷ್ಟದ ಕಂತೆ ಬಿಚ್ಚೋದಿಕ್ಕೆ ಇಲ್ಲಿಗೆ ಯಾಕೆ ಬರ್ಬೇಕಾಗಿತ್ತು? ರಾಜು ಇದಾನಲ್ಲ—ರಾಜು!

ಪಾರ್ವತಮ್ಮ: (ವ್ಯಸನದಿಂದ) ನಂಗೆ ಉಳ್ದಿರೋದು! ಕಷ್ಟದ ಕಂತೇನೆ! ರಾಜೂಗೂ ಅದೇನೆ, ನಿಂಗೂ ಅದೇನೆ, ರಾಮೂ, ನನ್ತಾವ ಇರೋದು!

ರಾಮಪ್ಪ: ಪುರಾಣ ಏನೂ ಇಲ್ಲಿ ಬೇಡ! ಬಂದಿದ್ದ್ಯಾಕೆ? ಅದನ್ನ ಹೇಳಿಬಿಡು!

(ಪಾರ್ವತಮ್ಮ ಮೌನವಾಗಿ ಮಗನ ಮುಖ ನೋಡಿ ನಿಲ್ಲುತ್ತಾಳೆ.)

ರಾಮಪ್ಪ: (ಪಾರ್ವತಮ್ಮನ ಮುಖ ನೋಡಿ) ಅಮ್ಮ ಬಂದದ್ದ್ಯಾಕೇಂತ?

ಪಾರ್ವತಮ್ಮ: (ಮಗನನ್ನೆ ದಿಟ್ಟಿಸಿ ನೋಡುತ್ತ ಒಂದು ಕ್ಷಣ ತಡೆದು, ನಿಧಾನವಾಗಿ) ಮಗನನ್ನ—ಒಮ್ಮೆ—ನೋಡೋದಿಕ್ಕೆ! (ಬಿಕ್ಕಿ ಬಿಕ್ಕಿ ಅಳುತ್ತಾಳೆ.)

ರಾಮಪ್ಪ: (ನಾರಾಯಣಪ್ಪನೊಡನೆ) ಅಳು, ನಮ್ ಅಮ್ಮನ ಜಡಹುಟ್ಟು! ಮಾತ್ ಮಾತಿಗೆ ಕಣ್ಣೀರು!

ಪಾರ್ವತಮ್ಮ: ನನ್ ಮಕ್ಳು - ಪ್ರಾಯಕ್ಕೆ ಬಂದ್ಮೇಲೇನೇ—ಅಳು—ನನ್ ಜೊತೆ—ಸೇರಿದ್ದು! (ಸೀರೆಯ ಸೆರಗಿನಿಂದ ಮೂಗು, ಕಣ್ಣು ಒರಸಿಕೊಳ್ಳುತ್ತಾಳೆ)

ರಾಮಪ್ಪ: ಅದ್ರೊಳ್ಗೆ ನನ್ನ ಸೇರ್ಸ್ಕೋಬೇಡ! ನಾನ್ ನನ್ನ ಪಾಡು ನೋಡ್ಕೊಂಡು ಬೇರೇನೆ ಇದೀನಿ! ನನ್ನಿಂದ ಒಂದಿಷ್ಟು ಸಹಾಯನೇ ಹೋತರ್ಗ್, ಕೇಡಿಲ್ಲ ತಾನೆ! ಮತ್ಯಾಕೆ ನನ್ನ ಹ್ಯೊಕೊಳ್ತಿದಿ!

(ಪಾರ್ವತಮ್ಮ ಏನೂ ಹೇಳದೆ, ಕಣ್ಣೀರು ತುಂಬಿದ ಕಣ್ಣುಗಳಿಂದ ಮಗನನ್ನೇ ನೋಡಿ ನಿಲ್ಲುತ್ತಾಳೆ.

ನಾರಾಯಣಪ್ಪ: (ರಾಮಪ್ಪನೊಡನೆ) ನಾನು ಹೋಗ್ಬಿಟ್ಟು ಬರ್ತೀನಿ! ಅಮ್ಮಾವ್ರು ಏನೋ ಹೇಳ್ಬೇಕೊಂತಿದಾರೆ—ನನ್ ಮುಂದೆ ಹೇಳೋಕೆ ಸಂಕೋಚ—ಪಾಪ! (ಏಳುತ್ತಾನೆ)

ರಾಮಪ್ಪ: (ನಾರಾಯಣಪ್ಪನೊಡನೆ) ಸ್ವಲ್ಪ ತಡಿ! ನಿನ್ ಮುಂದೇನೆ ಒಂದ್ಮಾತು ಕೇಳ್‌ಬಿಡ್ತಿನಿ! (ತಾಯಿಯೊಡನೆ) ನಮ್ ಸಂಘಕ್ಕೆ ಚಂದಾ ಕೊಡೋಕಾಗೋಲ್ಲಾಂತ ನೆನ್ನೆ ನಾರಾಯಣಪ್ಪನಿಗೆ ಹೇಳಿದ್ಯ? ಮೊದ್ಲು ಅದು ತೀರ್ಮಾನ ಆಗೋಗ್ಲಿ! ಮನೆಗೆ ಹತ್ ರುಪಾಯೀಂತ ನಿರ್ಣಯ. ಅದ್ಯಾಕೆ ಕೊಡೋಲ್ಲ?

ಪಾರ್ವತಮ್ಮ: ನಾನ್ ಕೊಡೋಲ್ಲಾನ್ನಿಲ್ಲ, ಕೊಡ್ ಕೂಡ್ದೂಂತ ಇರಾದೇನೂ ಇಲ್ಲ. ನನ್ ತಾವ ಹಣ ಇಲ್ಲಾಂದೆ—ಅಷ್ಟೇನೆ!

ನಾರಾಯಣಪ್ಪ: ನಿಜ-ನಿಜ! ಅಮ್ಮಾವ್ರು ಕೊಡೋಲ್ಲಾನ್ನಿಲ್ಲ. ಹಣ ಇಲ್ಲ—ಏನ್ಮಾಡಾನಾಂತಂದ್ರು! ಕೊಡೋಲ್ಲಾಂತ....

ಪಾರ್ವತಮ್ಮ: (ನಾರಾಯಪ್ಪನ ಮಾತಿನ ನಡುವೆ) ಕೊಡೋಲಾಂತಂದಿದ್ದು ನಿನ್ ತಮ್ಮ ರಾಜು! ನಾನೇನ್ಮಾಡ್ಲಿ?

ರಾಮಪ್ಪ: ರಾಜು—ನನ್—ತಮ್ಮ—ಹುಂ! ನಂಗೆ ತಮ್ಮನೂ ಇಲ್ಲ ಅಣ್ಣನೂ ಇಲ್ಲ! ನಿಂಗೆ ಒಂದೋ ರಾಜು ಮಗ—ಅಲ್ಲಾಂದ್ರೆ ನಾನ್ ಒಬ್ನೇ! ನಾವು ಅಣ್ಣ-ತಮ್ಮ ಅಲ್ಲಾಂತ ಮೊದ್ಲೇ ಹೇಳಿದೀನಿ! ಮತ್ತೆ ಆ ಮಾತು ಎತ್ ಬೇಡ!

ಪಾರ್ವತಮ್ಮ: ನೀ ಹಂಗೆ ಹೇಳ್ತೀಯ! ನಾನ್ ಹಂಗೆ ಎಣ್ಸೋಕೆ ಆಗಲ್ಲ, ರಾಮೂ! ನಾನ್ ಹೆತ್ತಾಕೆ—ನಿಮ್ಮಿಬ್ರನ್ನೂ!

ರಾಮಪ್ಪ: ನನ್ನ ಹೆತ್ತಾಕೆ - ಅವನ್ನ ಹೆರ್ಬಾರ್ದಾಗಿತ್ತು! ಅಲ್ಲ—ಹುಟ್ಟುವಳಿ ಚಿಕ್ಕಾಸೂ ನಂಗೆ ಕೊಡೋದಿಲ್ಲ—ತೆಂಗಿನ್‌ಕಾಯಿನ್ನೂ ನಾ ಕೊಯಿಸ್‌ಬಾರ್ದು—ಮತ್ತೆ ಹೆಚ್ಚು ಮಾತಾಡಿದ್ರೆ ಹಲ್ ಮುರೀತಾನಂತೆ! ನಿನ್ ರಾಜು!

ಪಾರ್ವತಮ್ಮ: ಅವನ ನಡತೆ ಹಂಗೆ! ನಿನ್ನ ಕಾರ್ಬಾರು ಹಿಂಗೆ! ನಾನೇನು ಮಾಡ್ಲಿ? ಬಾವೀಗಾದ್ರು ಹಾರೋಣಾಂದ್ರೆ—ಪ್ರಾಯಕ್ಕೆ ಬಂದ ಹುಡ್‌ಗೀನ ನೋಡ್ಕೋಳ್ಳೋದಿಕ್ಕೆ ಯಾರಿದಾರೆ?

ರಾಮಪ್ಪ: ಈಗಾದ್ರೂ ಅದೆಲ್ಲ ತಿಳೀತಲ್ಲ!

ಪಾರ್ವತಮ್ಮ: (ಸ್ವಲ್ಪ ಸಿಡುಕಿನಿಂದ) ತಿಳೀತಂತೆ! ನೀನಾದ್ರೂ ಏನ್ ಮಾಡ್ತಿದಿ ಸಹಾಯ?

ರಾಮಪ್ಪ: ನನ್ ಕೈಲಿ ಆಗಲ್ಲ! ಒಟ್ಟಿಗೆ ಇದ್ದಾಗ ಹೆಂಗಾದ್ರೂನೂ ಕೈಲಾದಷ್ಟು ಮಾಡ್ದೆ. ನೀವ್ಯಾರೂ ಉಪವಾಸ ಇರ್ದಂಗೆ ನೋಡ್ದೆ. ನಾನು ಇಲ್ಲಿಗೆ ಬಂದಾಗ ನನ್ನೊಬ್ಬನ ಪಾಲು ಮಾತ್ರ ತಂದಿರೋದು ಅದ್ರೂನು ತಾಯಿ—ತಂಗಿ—ತಮ್ಮಾಂತ ಏನಾದ್ರೂ ಅಷ್ಟಿಷ್ಟು ಕೊಡ್ತ ಬಂದಿದೀನಿ! ಅದ್ಕೆ ನಂಗೆ ಸಿಕ್ಕಿದ ಫಲ ಸಾಕು. ಇನ್ನು ನನ್ನನ್ನು ಕೇಳ್ಬೇಡಿ! (ಪಾರ್ವತಿ ಮರುಗುತ್ತಾಳೆ)

ನಾರಾಯಣಪ್ಪ: ಈಗ ನಾನಿರೋದು ಚೆನ್ನಾಗಿರಲ್ಲ ಸ್ವಾಮೀ. ನಾನ್ ಹೋಬ್ಬಿಟ್ಟು....

ರಾಮಪ್ಪ: ಸ್ವಲ್ಪ ತಡಿ. ನೀನಿದ್ರೂ ಚಿಂತಿಲ್ಲ. ನಿಂಗೂ ಗೊತ್ತಿಲ್ವೆ—ರಾಜು ಏನಂತಾನೇಂತ? ಅಪ್ಪ ತೀರ್ಕೊಂಡ ಮೇಲೆ ನಾನ್ ಕಾರ್‌ಬಾರ್ ನಡ್ಸಿ ಕುಟುಂಬಕ್ಕೆ ಮೋಸಾ ಮಾಡ್ದೆ—ಹುಟ್ಟುವಳಿಯೆಲ್ಲ ಸ್ವಂತಕ್ಕೆ ಇಟ್ಕೊಂಡು ಹಣ ಸಂಪಾದ್ಸ್ದೆ! ಹಿಂಗೆಲ್ಲ ಹೇಳ್ಕೊಂಡು ಅವ ತಿರ್ಗ್ತಾನೆ! (ತಾಯಿಯ ಮುಖ ನೋಡಿ) ಅಸೂಯೆ ಪಟ್ರೆ ಏನ್ ಬಂತು?

ಪಾರ್ವತಮ್ಮ: ನೀನ್ ಚೆನ್ನಾಗಿರೋದಿಕ್ಕೆ ನಾನ್ಯಾಕೆ ಅಸೂಯೆ ಪಡ್ಲಿ, ರಾಮೂ? ನನ್ ಮಕ್ಳಲ್ಲಿ ಒಬ್ಬನಾದ್ರೂ ಚೆನ್ನಾಗಿದ್ರೆ ನಂಗೆ ಸಂತೋಷಾನೆ! ನಿಂಗೆ ಇನ್ನೂ ದೇವ್ರು ಒಳ್ಳೇದ್ ಮಾಡ್ಲಪ್ಪ!

ರಾಮಪ್ಪ: ನಿಂಗೆ ಅಸೂಯೆ ಇಲ್ಲಾಂತ ಇಟ್ಕೊ! ಬೇರೆಯವರಿದ್ದಾರಲ್ಲ ನಿನ್ ಜೊತೆಗೆ!

ಪಾರ್ವತಮ್ಮ: ಹೆತ್ತ ಕರುಳು ನೋಡ್ ರಾಮೂ! ನಿನ್ನಂಗೇ ರಾಜೂನೂ ಬಾರದೇನೂ ನನ್ ಮಕ್ಳು! ಪಾಪ ಆ ಹುಡುಗಿ—ಇಬ್ರು ಅಣ್ಣಂದಿರಿದ್ದು—ದಿಕ್ಕಿಲ್ಲದವಳಾಗಿದಾಳೆ! ಅವಳ ವಿಧಿ ಹಾಂಗೋ ಏನೋ!

ನಾರಾಯಣಪ್ಪ: ನಾನಿನ್ನು ಇರೋಕಾಗಲ್ಲ ನೀವು ಹೇಳ್ದಂಗೇನೆ ಎಲ್ಲ ಮಾಡಿಟ್ಟಿರ್ತೀನಿ! ಸಾಯಂಕಾಲ ನೋಡಾನ—ಬರ್ತೀನಿ! (ಎದ್ದು ಪಾರ್ವತಿಯಮ್ಮನನ್ನು ನೋಡಿಕೊಂಡು ಹೋಗುತ್ತಾನೆ)

ರಾಮಪ್ಪ: ಒಂದ್ ವಿಷಯ ಈಗ್ಲೇ ಹೇಳಿಬಿಡ್ತೀನಮ್ಮ! ಗ್ರಾಮ ಸಂಘಕ್ಕೆ ನಿಮ್ಮನೇ ಚಂದಾ ಕೊಟ್‌ಬಿಡ್‌ಬೇಕು! ಹುಂ! ಪ್ರಾಯಕ್ಕೆ ಬಂದ ಹುಡ್‌ಗಿಯೊಂದು ಮನೇಲಿದೆ. ನಿಂಗೂ ವಯಸ್ಸಾಯ್ತು. ಯಾಕಾದ್ರು ನಾಲ್ಕು ಜನ ಬೇಕಾದ್ರೆ ಬರ್ಬೇಡ್ವೆ? ಚಂದಾ ಕೊಡ್ದಿದ್ರೆ ಬಹಿಷ್ಕಾರ ಹಾಕ್ತಾರೆ! ಹಾಂಗಾಗಿದೆ ನಮ್ ತೀರ್ಮಾನ!

ಪಾರ್ವತಮ್ಮ: ಬಹಿಷ್ಕಾರ ಹಾಕ್ಲಿ—ಕೊಂದ್ ಹಾಕ್ಲಿ—ಹಣ ನನ್ ಕೈನಲ್ಲಿಲ್ಲ! ಆಗೋದ್ ಆಗ್ಲಿ—ಹತ್ತರ ಜೊತೆಗೆ ಹನ್ನೊಂದೂಂತ ಅನುಭವಿಸ್ತೀನಿ!

ರಾಮಪ್ಪ: ರಾಜು ಸೊತ್ತೆಲ್ಲ ಮೂರ್ಖಾಸಿಗೆ ಮಾರ್ಲಿಲ್ವೆ? ಒಂದ್ಮಾತು ನನ್ನ ಕೇಳ್‌ಬಹುದಾಗಿತ್ತು! ಬೇರೆಯವ್ರಿಗಿಂತ ಎಕ್ರೆಗೊಂದು ನಾಲ್ಕು ರೂಪಾಯೀನಾದ್ರೂ ನಾ ಹೆಚ್ಚು ಕೊಡ್ತಿದ್ದೆ—ಹಿರಿಯರ ಆಸ್ತಿ ಕೈತಪ್ಪಿ ಹೋಗ್ಬಾರ್ದೂಂತ! ಅವ ಎಲ್ಲ ಮುಗ್ಸಿದ. ಈಗ ನಾನೇನ್ಮಾಡೋಕ್ಕಾಗ್ತದೆ?

(ಪಾರ್ವತಮ್ಮ ಮೌನವಾಗಿ ನಿಂತು ಮರುಗುತ್ತಾಳೆ. ಸೆರಗಿನಿಂದ ಕಣ್ಣು—ಮೂಗು ಒರಸಿಕೊಳ್ಳುತ್ತಾಳೆ)

ರಾಮಪ್ಪ: ಅದಿರ್ಲಿ—ಈಗ ನನ್ನಿಂದ ಏನಾಗ್ಬೇಕು?

ಪಾರ್ವತಿ: ಮನೆಯಲ್ಲಿ ಊಟಕ್ಕಿಲ್ಲ ಏನಾದ್ರೂ—

ರಾಮಪ್ಪ: (ಧೂರ್ತತನದಿಂದ) ಎಲ್ಲರ ಊಟಕ್ಕೆ ನಾನೆಲ್ಲಿಂದ ಕೊಡ್ಲಿ? ನೀನೊಬ್ಳು ಬೇಕಾದ್ರೆ ಬಂದು ಇಲ್ಲೆ ಇದ್ಬಿಡು. ಅವಳೂ—ಗೋಪೀನೂ ಒಬ್ಳೇ ಇದಾಳೆ!

ಪಾರ್ವತಮ್ಮ: (ತಿರಸ್ಕಾರ ಭಾವದಿಂದ) ನನ್ ಪಾಡು ನಾನ್ ನೋಡ್ಕೋಬಹುದು! ಇಲ್ಲಿ ಯಾಕೆ? ಎಲ್ಲಿ ಹೋದ್ರೂ ಮುಸ್ರೇ ತಿಕ್ಕಬದ್‌ಕ್ಕೊಂಡೇನು! ಆ ಹುಡುಗೀನ ಏನ್ ಮಾಡ್ಲಿ?

ರಾಮಪ್ಪ: ಹುಡ್‌ಗಿಗೆ ಒಬ್ಬ ಅಣ್ಣ ಇದಾನಲ್ಲ—ಅವ ನೋಡ್ಕೋತಾನೆ! ಆ ರಗಳೇನೆಲ್ಲ ಇಲ್ಲಿ ತರ್‌ಕೂಡ್ದು!

ಪಾರ್ವತಮ್ಮ: (ಸ್ವಲ್ಪ ಸಮಯ ಏನೂ ಮಾತಾಡದೆ ಯೋಚಿಸಿ, ನಿರ್ಧಾರಕ್ಕೆ ಬಂದವಳಂತೆ) ನಾನ್ ಹೋಗ್ತೀನಿ, ರಾಮೂ! ದೇವರು ನಿಂಗೆ ಒಳ್ಳೇದ್ ಮಾಡ್ಲಿ! (ಬಿಕ್ಕುತ್ತ ಬಿಕ್ಕುತ್ತ ಹೊರಡುತ್ತಾಳೆ.)

ರಾಮಪ್ಪ: ಅಮ್ಮ ಬಂದದಕ್ಕೆ—ಸ್ವಲ್ಪ ಅಕ್ಕಿ ಕಳಿಸ್ತೀನಿ. ಸಂಜೆಗೆ ಯಾರನ್ನಾದರೂ ಈಕಡೆ ಕಳ್ಸಿಬಿಡು.

(೬ನೇ ಪುಟ ನೋಡಿ)

ಕೈರೋದಲ್ಲಿ ನಡೆದ ಏಷ್ಯಾ-ಆಫ್ರಿಕಾ ಸಮ್ಮೇಳನ ಮಹತ್ವವಾದುದು

— ಸೋವಿಯತ್ ಪ್ರತಿನಿಧಿಗಳ ಅಭಿಪ್ರಾಯ —

ಕೈರೋ ಸಮ್ಮೇಳನದ ಏಳು ದಿನಗಳ ಕಾರ್ಯಕಲಾಪವು, ಏಷಿಯದ ಮತ್ತು ಆಫ್ರಿಕದ ದೇಶಗಳ ಜನತೆಗಳ ಸದಾ ವರ್ಧಮಾನ ಐಕ್ಯತೆಯ ಸಪ್ತಾಹವಾಗಿತ್ತು. ಮೊದಲು ತೀರಾ ಅಪರಿಚಿತರಾಗಿದ್ದ ಸಮ್ಮೇಳನ-ಪ್ರತಿನಿಧಿಗಳು, ಶಾಂತಿ, ಸ್ವೇಚ್ಛಾ ಸ್ವಾತಂತ್ರ್ಯಗಳ ಸಲುವಾಗಿ ಹೋರಾಟ ನಡೆಸುವ ಘನೋದ್ದೇಶ ಬಂಧಿತರಾದ ನಿಕಟ ಮಿತ್ರರಾಗಿ ಪರಸ್ಪರರನ್ನು ಬೀಳ್ಕೊಂಡರು. ಸಮ್ಮೇಳನದ ಪ್ರತಿನಿಧಿಗಳು ಒಬ್ಬರೊಡನೊಬ್ಬರು ಮಾತನಾಡುತ್ತಿದ್ದಾಗ "ಸೋದರ", "ಸೋದರರೇ" ಎಂಬೀ ಶಬ್ದಗಳು ಎಂದಿಗಿಂತ ಹೆಚ್ಚಾಗಿ ಪದೇ ಪದೇ ಕೇಳಿಬರುತ್ತಿದ್ದುವು. ಈ ಸೋದರ ಐಕ್ಯತೆ ಮತ್ತು ಮೈತ್ರಿ—ಈ ಅಭೇದ್ಯಶಕ್ತಿ ಕೈರೋ ಸಮ್ಮೇಳನದ ಕುಲುಮೆಯಲ್ಲಿ ಬೆಸೆಯಲ್ಪಟ್ಟಿತು. ಏಶಿಯದ ಮತ್ತು ಆಫ್ರಿಕದ ಜನತೆಗಳ ನೂತನ ವಿಜಯಗಳ ಬಗ್ಗೆ ಭರವಸೆಯಾಗಿದೆ, ಈ ಶಕ್ತಿ.

ಬಾಂಡುಂಗ್ ತರುವಾಯ ಕೈರೋ ಸಮ್ಮೇಳನವು ಏಷಿಯದ ಮತ್ತು ಆಫ್ರಿಕದ ದೇಶಗಳ ಜನತೆಗಳನ್ನು ರಾಷ್ಟ್ರೀಯ ಜಾಗೃತಿಯ ಅತ್ಯುನ್ನತ ಮಟ್ಟಕ್ಕೆ ಏರಿಸಿತು, ಸಾಮ್ರಾಜ್ಯವಾದದ ವಿರೋಧವಾಗಿ ನಡೆಯುವ ಹೋರಾಟದಲ್ಲಿ ಅವರ ಭವಿಷ್ಯಗಳ ಸಮ್ಮಿಲನವನ್ನು ವ್ಯಕ್ತಪಡಿಸಿತು ಮತ್ತು ಇಡೀ ಜನತೆಗಳನ್ನೇ ಈ ಹೋರಾಟದೊಳಕ್ಕೆ ಸೆಳೆಯಿತು.

ಎಲ್ಲ ನಿರ್ಣಯಗಳನ್ನೂ ಈ ಸಮ್ಮೇಳನವು ಒಮ್ಮತದಿಂದ ಸ್ವೀಕರಿಸಿದುದು, ಈ ಎರಡು ಖಂಡಗಳ ಜನತೆಗಳ ಐಕ್ಯಮತ್ಯವನ್ನು ವ್ಯಕ್ತಪಡಿಸುತ್ತದೆ.

ಸಮ್ಮೇಳನದಲ್ಲಿ ಮಾತನಾಡಿದ ವಸಾಹತು ದೇಶಗಳ ಪ್ರತಿನಿಧಿಗಳು ಸ್ಪಷ್ಟವಾದ, ಮನವೊಪ್ಪಿಸುವ ಉದಾಹರಣೆಗಳನ್ನಿತ್ತು, -ಸಾಮ್ರಾಜ್ಯವಾದೀ ವಸಾಹತು ವ್ಯವಸ್ಥೆಯು, ಸ್ವತಂತ್ರ ಅಸ್ತಿತ್ವಕ್ಕೆ ಮಾನವರಿಗಿರುವ ಹಕ್ಕುಗಳ ನಿರಾಕರಣೆಯನ್ನು ವ್ಯಕ್ತಪಡಿಸುತ್ತದೆಯೆಂಬುದನ್ನು ತೋರಿಸಿಕೊಟ್ಟರು. ವಸಾಹತು ವಾದೀರಾಜ್ಯಶಕ್ತಿಗಳ ಹಲವು ವಲಯಗಳ—ಅಮೆರಿಕದ ಸಂಯುಕ್ತ ರಾಜ್ಯಗಳು, ಬ್ರಿಟನ್, ಫ್ರಾನ್ಸ್, ನೆದರ್‌ಲ್ಯಾಂಡ್ಸ್ ಮತ್ತು ಇತರ ವಸಾಹತು ದೇಶಗಳ ಹಲವು ವಲಯಗಳ—ಜನರು ಆಕ್ರಮಣಕಾರೀ ಸೈನಿಕ ಒಡಂಬಡಿಕೆಗಳ ಮತ್ತು ಮೈತ್ರೀ ಕೂಟಗಳ ಸಂಘಟಕರಾಗಿದ್ದಾರೆ; ಶಸ್ತ್ರಾಸ್ತ್ರಗಳ ತಯಾರಿಕೆಯ ಧರಾಟಿಯ ಸಂಘಟಕರೂ, ಯುದ್ಧೋಪಾಯದ ಮತ್ತು ಅಂತರ ರಾಷ್ಟ್ರೀಯ ಪ್ರಕ್ಷುಬ್ಧತೆಯ ಸಂಘಟಕರೂ ಆಗಿದ್ದಾರೆ. ಸಾಮ್ರಾಜ್ಯವಾದವನ್ನೂ, ಅದರ ಎಲ್ಲ ರೂಪಗಳನ್ನೂ, ಪ್ರದರ್ಶನಗಳನ್ನೂ ಈ ಸಮ್ಮೇಳನವು ಖಂಡಿಸಿತು. ಇತರ ದೇಶಗಳ ಆಂತರಿಕ ವ್ಯವಹಾರಗಳಲ್ಲಿ ನಡೆಯುವ ಹಸ್ತಕ್ಷೇಪವನ್ನು ಖಂಡಿಸಿತು.

ಏಶಿಯದ ಮತ್ತು ಆಫ್ರಿಕದ ಜನತೆಗಳ ಐಕ್ಯತೆಯನ್ನು ಬಲಪಡಿಸುವ ಬಗ್ಗೆ ನಡೆಯುವ ಕಾರ್ಯಾಚರಣೆಗಳ ಅಭಿವೃದ್ಧಿಗೆ ಮಹತ್ತರ ಪ್ರಾಧಾನ್ಯವನ್ನು ನೀಡುತ್ತಾ, ನಿಲುವಳಿ (ಸ್ಥಾಯಿ) ಸಂಘಟನೆಯೊಂದನ್ನು ನೆಲೆಗೊಳಿಸಬೇಕೆಂದು ಸಮ್ಮೇಳನವು ನಿರ್ಧರಿಸಿತು. ಕೈರೋ ಸಮ್ಮೇಳನದ ಗೊತ್ತುವಳಿಗಳನ್ನೂ ಮತ್ತು ಶಿಫಾರಸುಗಳನ್ನೂ ಕಾರ್ಯಗತಗೊಳಿಸುವುದು. ಉಭಯ ಖಂಡಗಳ ಎಲ್ಲ ದೇಶಗಳಲ್ಲಿಯೂ ಆಫ್ರೊ-ಏಶಿಯನ್ ಐಕ್ಯತೆಯ ಚಳವಳಿಯನ್ನು ಅಭಿವೃದ್ಧಿಗೊಳಿಸುವುದೂ ಮತ್ತು ಬಲಪಡಿಸುವುದೂ ಈ ಸ್ಥಾಯಿ ಸಂಘಟನೆಯ ಕಾರ್ಯಭಾರವಾಗಿರುವುದು, ಬೇರೆ ಬೇರೆ ದೇಶಗಳ ಮಧ್ಯೆ ಈ ಸಂಘಟನೆಯು ಸಂಪರ್ಕದ ಕೊಂಡಿಯಾಗಿ ಕೆಲಸ ಮಾಡುವುದು. ಈ ಉದ್ದೇಶದ ಸಲುವಾಗಿಯೇ, ಏಶಿಯದ ಮತ್ತು ಆಫ್ರಿಕದ ದೇಶಗಳ ಐಕ್ಯತೆಯ ಆಲೋಚನಾ ಸಮಿತಿಯೂ ಮತ್ತು ಖಾಯಂ ಕಾರ್ಯದರ್ಶಿ ಕಚೇರಿಯೂ (ಸೆಕ್ರೆಟೇರಿಯಟ್) ನೆಲೆಗೊಳಿಸಲ್ಪಟ್ಟುವು. ಮುಂದಿನ ಸಮ್ಮೇಲನವನ್ನು ನಡೆಸುವವರೆಗೂ ಕಾರ್ಯದರ್ಶಿ ಮಂಡಲದ ಕಚೇರಿಯು ಕೈರೋ ನಗರದಲ್ಲಿರಬೇಕೆಂದು ಆಯ್ಕೆ ಮಾಡಲಾಗಿದೆ.

ಸಮ್ಮೇಲನವು ಅಂಗೀಕರಿಸಿದ ನಿರ್ಣಯಗಳೂ ಮತ್ತು ಶಿಫಾರಸುಗಳೂ ಎರಡು ಖಂಡಗಳಿಗಿಂತಲೂ ದೂರದ ವರೆಗೆ ವ್ಯಾಪಿಸುತ್ತವೆಂದರೆ ಅದೇನೂ ಅತಿಶಯೋಕ್ತಿಯಾಗಲಾರದು. ಪ್ರಪಂಚದ ಎಲ್ಲ ದೇಶಗಳಿಗೂ ಅವು ಮೂಲಭೂತ ಮಹತ್ವವುಳ್ಳ ವಿಷಯಗಳಾಗಿವೆ. ಶಾಂತಿವಲಯದ ವಿಸ್ತರಣೆಗೆ ಅನುಕೂಲಾವಕಾಶಗಳು ಇವೆಯೆಂಬುದನ್ನು ಅದು ರುಜುಪಡಿಸುತ್ತದೆ. ಸಾಮ್ರಾಜ್ಯವಾದದ ಗಡಿಗಳು ನಿರಂತರವಾಗಿ ಕುಗ್ಗುತ್ತಿವೆಂಬುದನ್ನೂ, ಮತ್ತು ಸಾಮ್ರಾಜ್ಯವಾದೀ ಶಕ್ತಿಗಳು ನಿರಂತರವಾಗಿ ಕುಗ್ಗುತ್ತಿವೆ ಎಂಬುದನ್ನೂ, ಮತ್ತು ಸಾಮ್ರಾಜ್ಯವಾದೀ ಶಕ್ತಿಗಳು ತಮ್ಮ ವ್ಯೂಹೋಪಾಯಗಳ ಸಲುವಾಗಿ ತುಂಬಾ ಕಡಿಮೆ ಅವಕಾಶಗಳನ್ನು ಪಡೆಯುತ್ತಿವೆ ಎಂಬುದನ್ನೂ ಅಂಗೀಕೃತ ನಿರ್ಣಯಗಳು ತೋರಿಸಿ ಕೊಡುತ್ತದೆ. ಸಾಮ್ರಾಜ್ಯವಾದದ ವಸಾಹತು ಪದ್ಧತಿಯ ವಿಚ್ಛಿನ್ನತೆಯು ಎಂದಿಗಿಂತಲೂ ಹೆಚ್ಚು ತೀವ್ರಗತಿಯಲ್ಲಿ ನಡೆಯುತ್ತಿದೆ.

ಕೈರೋ ಸಮ್ಮೇಳನವು ಮುಗಿದ ದಿನವೇ ನಾವು ಕಾಮೆರೂನ್ ನಾಡಿನ ಪ್ರತಿನಿಧಿ ಮಂಡಲದ ನಾಯಕರಾದ ಡಾ|| ಫೆಲಿಕ್ಸ್ ರೊಲಂಡ್ ಮೂಮಿಯವರನ್ನು ಸಂಧಿಸಿ, ಸಮ್ಮೇಳನದ ಪರಿಣಾಮಗಳನ್ನು ಕುರಿತು ಅವರ ಅಭಿಪ್ರಾಯವನ್ನು ತಿಳಿಸಬೇಕೆಂದು ಕೋರಿದೆವು, ಅವರು ಹೀಗೆಂದರು.

"ಕೈರೋ ನಗರದಲ್ಲಿ ಏಶಿಯದ ಮತ್ತು ಆಫ್ರಿಕದ ಜನತೆಗಳ ಸಮಾವೇಶ ನಡೆದುದು ಒಂದು ಐತಿಹಾಸಿಕ ಘಟನೆಯಾಗಿದೆ. ವಸಾಹತುವಾದದಿಂದ ವಿಮುಕ್ತಿಯನ್ನಿನ್ನೂ ಪಡೆಯದ, ಆಫ್ರಿಕದ ಮತ್ತು ಏಶಿಯದ ಜನತೆಗಳಿಗೆ ಅದು ವಿಶೇಷ ಮಹತ್ವಪೂರ್ಣವಾದುದಾಗಿದೆ. ಕಾಮೆರೂನ್ ನಾಡುಗಳು ಇನ್ನೂ ಫ್ರೆಂಚ್ ಮತ್ತು ಬ್ರಿಟಿಷ್ ಸಾಮ್ರಾಜ್ಯವಾದಿಗಳ ಮಧ್ಯೆ ಹಂಚಿ ಹೋಗಿವೆಯೆಂಬ ಮಾತು ಸರ್ವವಿದಿತವಾಗಿದೆ ಕಾಮೆರೂನ್ ನಾಡುಗಳೆಲ್ಲವೂ ಒಂದುಗೂಡಬೇಕೆಂಬುದೂ ಮತ್ತು ಏಕೀಕೃತ ಕಾಮೆರೂನ್‌ಗಳಿಗೆ ನೈಜವಾದ ಸ್ವಾತಂತ್ರ್ಯ ಲಭಿಸಬೇಕೆಂಬುದೂ ನಮ್ಮ ಬಯಕೆ. ವಿಮುಕ್ತ ಆಫ್ರಿಕನ್ ಮತ್ತು ಏಶಿಯನ್ ಜನತೆಗಳ ಸಹಾಯದಿಂದ ನಮ್ಮ ಜನತೆಯು, ತಮ್ಮ ಮನೋವಾಂಛಿತ ಸ್ವಪ್ನಗಳನ್ನು ತಾವು ಸಾಧಿಸಿಕೊಳ್ಳವರೆಂಬ ಆಸೆಯನ್ನು ಹೊಂದಿದ್ದಾರೆ."

ತಮ್ಮ ಮಾತನ್ನು ಮುಂದುವರಿಸುತ್ತಾ ಡಾ|| ಮೂಮಿಯವರು ಇನ್ನೂ ಹೀಗೆಂದರು: 1958ನೆಯ ವರ್ಷವು ಶಾಂತಿಯುತ ವರ್ಷವಾಗಿರುವುದೆಂದು ಖ್ರುಶ್‌ಚ್ಯೋವ್‌ರವರು ಹೇಳಿದ ಮಾತನ್ನು ನಾನೊಪ್ಪುತ್ತೇನೆ, ಇದಕ್ಕೆ ಅನೇಕ ಕಾರಣಗಳಿವೆಯೆಂದು ನನ್ನ ಭಾವನೆ. ಸೋವಿಯತ್ ಒಕ್ಕೂಟದ ನಾಯಕತ್ವದಲ್ಲಿರುವ ಸಮಾಜವಾದೀ ಶಿಬಿರದ ದೇಶಗಳು ಮಹತ್ತರ ವಿಜಯಗಳನ್ನ ಸಾಧಿಸಿಕೊಂಡುವು. ಶಾಂತಿಪ್ರಿಯ ಜನತೆಗಳಿಗೆ ಅನುಕೂಲವಾಗಿ ಶಕ್ತಿಗಳ ಸಹಸಂಬಂಧಗಳನ್ನು ಬದಲಾಯಿಸಲು ಈ ವಿಜಯಗಳು ಸಹಾಯಕವಾದುವು. ಏಶಿಯದ ಜನತೆಗಳು, ಆಫ್ರಿಕದ ಜನತೆಗಳೊಂದಿನ ನಿಕಟ ಸಹಕಾರದೊಡನೆ, ಎಂದಿಗಿಂತಲೂ ಹೆಚ್ಚು ಕಸುವಿನಿಂದ ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳುತ್ತಿದ್ದಾರೆಂಬುದನ್ನು ಕೈರೋ ಸಮ್ಮೇಲನವು ತೋರಿಸಿಕೊಟ್ಟಿದೆ. ಸಾಮ್ರಾಜ್ಯವಾದೀ ಶಿಬಿರದೊಳಗಡೆ ಒಕ್ಕಟ್ಟಿಲ್ಲ ಎಲ್ಲಾ ಖಂಡಗಳ ಜನತೆಯೂ ಯುದ್ಧವನ್ನು ವಿರೋಧಿಸುತ್ತಾರೆ."

ಸಮ್ಮೇಲನವು ಮುಗಿದಿದೆ, ಎಲ್ಲಾ ಶಾಂತಿ-ಪ್ರಿಯ ಜನತೆಗಳೂ ಕೈರೋ ಸಮ್ಮೇಲನದ ಪರಿಣಾಮಗಳನ್ನು ಉತ್ಸಾಹಪೂರ್ವಕವಾಗಿ ಸ್ವಾಗತಿಸುವರು.



ಭೂಸುಧಾರಣೆಯ ಬಗ್ಗೆ—

ಶ್ರದ್ಧೆ, ಕಾರ್ಯತತ್ಪರತೆ ಇಲ್ಲದೆ ನಿರ್ಣಯಗಳಿಂದ ಪ್ರಯೋಜನವಿಲ್ಲ

ಕಾಂಗ್ರೆಸ್ ಅಧ್ಯಕ್ಷ ವೇದಿಕೆಯಿಂದ ಧೇಬರ್‌ರವರ ಸ್ವಯಂ ವಿಮರ್ಶೆ

ಕಾಂಗ್ರೆಸ್ ಅಧ್ಯಕ್ಷ ಯು. ಎನ್. ಧೇಬರ್ ಅವರು 63ನೇ ಕಾಂಗ್ರೆಸ್ ಅಧಿವೇಶನದಲ್ಲಿ ಮಾಡಿರುವ ಭಾಷಣದಲ್ಲಿ ಭೂಸುಧಾರಣೆಯನ್ನು ಕುರಿತು ಕಾಂಗ್ರೆಸ್ ಸರಕಾರಗಳಿಗೂ ಶಾಸನ ಕರ್ತರಿಗೂ ನಾಯಕರಿಗೂ ಅಷ್ಟೊಂದು ರುಚಿಯಾಗದ ಮಾತುಗಳನ್ನಾಡಿದ್ದಾರೆ. ಈ ಮಾತುಗಳಾದರೂ ಬರೀ ಮಾತುಗಳಾಗಿ ಉಳಿಯದೆ, ಕಾರ್ಯತಃ ಅನುಸರಿಸಲ್ಪಡುವುದೆಂದು ಖಚಿತವಾಗಿ ಹೇಳಬರುವುದಿಲ್ಲ. ಧೇಬರರ ಆದಿಯಾಗಿ ಎಲ್ಲ ಕಾಂಗ್ರೆಸ್ ನಾಯಕರುಗಳ ಈವರೆಗಿನ ಮಾತುಗಳ ಹಾಗು ಕೃತಿಗಳ ಅನುಭವದ ಆಧಾರದಲ್ಲಿ ಈ ಮಾತುಗಳನ್ನೂ ನಂಬುವುದಕ್ಕಾಗುವುದಿಲ್ಲ. ಈ ಮಾತುಗಳು ಕಾರ್ಯಗತವಾಗಲೆಂದು ಹಾರೈಸುವುದರ ಜೊತೆಯಲ್ಲಿ, ಅದಕ್ಕೋಸ್ಕರ ಒತ್ತಾಯಿಸುವುದರ ಜೊತೆಯಲ್ಲೆ, ಅದೆಷ್ಟು ಜಾರಿಗೆ ಬರುವುದೋ ಎನ್ನುವುದನ್ನು ಕಾದು ನೋಡಬೇಕಾಗಿದೆ.

ಕಾಂಗ್ರೆಸ್ ಮತ್ತು ಕಾಂಗ್ರೆಸಿಗರು

ಕಾಂಗ್ರೆಸಿನ ಉದ್ದೇಶಗಳು, ಧೋರಣೆ ಮತ್ತು ಕಾರ್ಯಕ್ರಮಗಳು, ಉದಾತ್ತವಾದವುಗಳು. ಆದರೆ ಕಾಂಗ್ರೆಸಿಗರಿಗೆ ಅವುಗಳ ಮೇಲೆ "ಮೂಲಭೂತವಾದ ನಿಷ್ಠೆ" ಇಲ್ಲದೆ ಹೋಗಿದೆ. ಇದು ಧೇಬರರ ವಿಮರ್ಶೆ.

ಹೀಗೆ ಆಗಲು ಕಾರಣವೇನು? ಅದನ್ನು ನಿವಾರಿಸುವುದಕ್ಕೆ ಏನು ಮಾಡಬೇಕು? ಧೇಬರ್ ಅವರು ಈ ಪ್ರಶ್ನೆಗಳಿಗೆ ಉತ್ತರ ಕೊಟ್ಟಿಲ್ಲ. ಕಾಂಗ್ರೆಸಿನ ನಿರ್ಣಯಗಳನ್ನು ಕಾರ್ಯಗತಗೊಳಿಸಬೇಕೆಂದು ಕಾಂಗ್ರೆಸಿಗರಿಗೆ ಅವರು ಕರೆ ಕೊಟ್ಟಿದ್ದಾರೆ. ಆದರೆ ಆ ಕರೆಗೆ ಕಾಂಗ್ರೆಸಿಗರು ಮನ್ನಣೆ ಕೊಡುವರು ಎಂದು ನಂಬುವುದಾದರೂ ಹೇಗೆ? ನಿರ್ಣಯಗಳನ್ನು ಇನ್ನಾದರೂ ಜಾರಿಗೊಳಿಸುವಂತೆ ಅಧಿಕಾರ ಸ್ಥಾನಗಳಲ್ಲಿರುವ ಕಾಂಗ್ರೆಸಿಗರನ್ನು ನಿರ್ಬಂಧಿಸುವುದಕ್ಕೆ ಧೇಬರರು ವಹಿಸುವ ಕ್ರಮ ಯಾವುದು? ಈ ಪ್ರಶ್ನೆಗಳಿಗೂ ಧೇಬರರ ಉತ್ತರವಿಲ್ಲ.

ನಿರ್ಣಯ ಮತ್ತು ಪ್ರಯೋಗ

ಧೇಬರರು ನಾಲ್ಕು ವರ್ಷಗಳ ಹಿಂದೆ ಕಾಂಗ್ರೆಸ್ ಅಧ್ಯಕ್ಷರಾಗಿ ಆರಿಸಲ್ಪಟ್ಟಾಗ, ಲೆನಿನ್‌ರವರ "ಕರ್ತವ್ಯವೇನು?" ಎಂಬ ಪುಸ್ತಕವನ್ನು ಓದಿದ್ದರಂತೆ—ಶಿಸ್ತು, ಸಂಘಟನೆ, ನಿರ್ಣಯವನ್ನು ಕಾರ್ಯಕಾರಿಗೊಳಿಸುವ ರೀತಿ ಇವುಗಳಿಗೆಲ್ಲ ಶತ್ರುಗಳಿಂದಲೂ ಹೊಗಳಲ್ಪಡುವ ಕಮ್ಯೂನಿಸ್ಟರ ಕ್ರಮ ನಿಯಮಗಳನ್ನು ತಿಳಿದುಕೊಳ್ಳುವುದಕ್ಕೆ! ಎಂದು ಅವರೇ ಅಂದಿದ್ದರು. ಆ ಪುಸ್ತಕದಲ್ಲಿ ಲೆನಿನ್ ಒಂದು ವಿಷಯವನ್ನು ವನ್ನು ಸಂಶಯಕ್ಕೆ ಎಡೆಯಿಲ್ಲದಷ್ಟು ಸ್ಪಷ್ಟಪಡಿಸಿದ್ದಾರೆ: 'ಒಂದು ಡಜನು ನಿರ್ಣಯಗಳಿಗಿಂತಲೂ ಒಂದು ಕ್ರಾಂತಿಕಾರಿ ಕೆಲಸ ಮುಖ್ಯ'. ಪಕ್ಷ-ಸಂಗಡಗಳಿಗೂ ರಾಜಕೀಯ ಧುರೀಣರಿಗೂ ಘೋಷಣೆ ಮತ್ತು ಠರಾವುಗಳ ಆಧಾರದ ಮೇಲೆ ಬೆಲೆ ಕಟ್ಟುವುದು ಸರಿಯಲ್ಲ, ಕೃತಿಯ ಆಧಾರದ ಮೇಲೆ ಬೆಲೆ ಕಟ್ಟಬೇಕು. ಕಾಂಗ್ರೆಸಿನ ಹತ್ತು ವರ್ಷಗಳ ಆಡಳಿತೆಯ ಪ್ರಾಯೋಗಿಕ ಅನುಭವವನ್ನು ಧೇಬರರ ಒಂದು ಉಪದೇಶದಿಂದ ಮರೆಸಿಬಿಡಲು ಸಾಧ್ಯವಿಲ್ಲ.

ದುಡಿಯುವವನಿಗೆ ಮೊದಲನೆ ಪಾಲು

- ಭೂಸುಧಾರಣೆ ಮತ್ತು ವ್ಯಾವಸಾಯಿಕ ಅಭಿವೃದ್ಧಿ ಇಂದು ಅತ್ಯಂತ ಪ್ರಾಮುಖ್ಯತೆಯನ್ನು ಪಡೆದಿವೆ. ಅದನ್ನು ಯಾರೂ ಅಲ್ಲಗಳೆಯುವುದಿಲ್ಲ.

"ಭೂ ಸಮಸ್ಯೆಯನ್ನು ತೆಗೆದುಕೊಳ್ಳೋಣ. ಜಮೀನುಗಳಿಂದ ಹೊರತಳ್ಳಲ್ಪಡುವ ಭಯವನ್ನು ರೈತರ ಮನಸ್ಸಿನಿಂದ ದೂರ ಮಾಡಲು ನಮಗೆ ಸಾಧ್ಯವಾಗಿದೆಯೆ? ಅಬ್ಬುಜಬ್ಬಾಗಿ ಚಿಂತೆಗೆ ತುತ್ತಾಗಿರುವ ರೈತನು, ತಾನು ಮತ್ತು ಬಹುತೇಕವಾಗಿ ತನ್ನ ಮುದಿ ತಂದೆ ಕೂಡ ಒಂದಿಷ್ಟೇ ಜೀವಮಾನ ಬೆವರು ಮತ್ತು ಕಣ್ಣೀರು ತೊಯ್ದು ದುಡಿದಿರುವ ಜಮೀನಿನ ಮೇಲೆ ಮಾಲಿಕತನದ ಹಕ್ಕನ್ನು ಪಡೆಯಲು ಆತುರದಿಂದ ಕಾಯುತ್ತಿದ್ದಾನೆ. ಅವನು ಕೇಳುತ್ತಿರುವುದು ಕೇವಲ ನ್ಯಾಯ. ಅವನಿಗೆ ಭದ್ರತೆ ಬೇಕಾಗಿದೆ.

"ಬೇರೆ ಹಿತಾಸಕ್ತಿವಂತರೂ ಇದ್ದಾರೆ ನಿಜ. ಅವರ ಪರವಾಗಿಯೂ ಒಂದಿಷ್ಟು ಹೇಳಬಹುದು. ಆದರೆ ನ್ಯಾಯದ ಕೂಗಿಗೆ ಒಂದೇ ಒಂದು ಉತ್ತರವಿರುವುದು-'ಯಾವನು ದುಡಿಯುತ್ತಾನೋ ಅವನಿಗೇ ಮೊದಲನೆ ಪಾಲಿನ ಹಕ್ಕು.' ಒಂದು ಹೊಸ ಜೀವನ ರೀತಿಯ ತತ್ವಗಳಿಗೆ ನಮ್ಮ ನಿಷ್ಠೆ ಎಷ್ಟಿದೆ ಎನ್ನುವುದಕ್ಕೆ ಇದೊಂದು ಪರೀಕ್ಷೆ.

"ಹಾಗೆಯೇ ಹಿಡುವಳಿಗಳಿಗೆ ಪರಿಮಿತಿ ನಿರ್ಣಯಿಸಬೇಕೆಂಬ ಕೇಳಿಕೆಯಿದೆ. ಇದು ನ್ಯಾಯ ಮಾತ್ರವಲ್ಲ, ದೇಶದ ಹಿತದ ದೃಷ್ಟಿಯಿಂದ ಅಗತ್ಯ ಕೂಡ ಆಗಿದೆ. ಈ ಪ್ರಶ್ನೆಯ ಪರಿಹಾರದ ವಿಚಾರದಲ್ಲಿ ನಾವು ತೊಳಲಾಡುತ್ತಿದ್ದೇವೆ. ಪರಿಹಾರ ಇಲ್ಲದಿರುವುದರಿಂದಲ್ಲ; ಪ್ರಶ್ನೆಯ ಬಗ್ಗೆ ಅಥವ ಪರಿಹಾರದ ಬಗ್ಗೆ ಸ್ಪಷ್ಟತೆ ಇಲ್ಲದಿರುವುದರಿಂದಲೂ ಅಲ್ಲ. ಅದರ ಬಗ್ಗೆ ನಮ್ಮಲ್ಲಿ ಶ್ರದ್ಧೆ ಇಲ್ಲದುದರಿಂದ ನಾವು ತೊಳಲಾಡುತ್ತೇವೆ...

ಘೋಷಣೆ - ಕಾರ್ಯಗಳ ಮಧ್ಯಂತರ ಕೊನೆಗಾಣಲಿ(?)

"...ಘೋಷಣೆಗಳಿಗೂ ಕಾರ್ಯಗಳಿಗೂ ಇರುವ ದೂರವನ್ನು ಕೊನೆಗಾಣಿಸದಿದ್ದರೆ ಸಂಘಟನೆ, ಅಭ್ಯಾಸ, ಶಿಕ್ಷಣ, ಸಾಧನ ಸಂಚಯ, ಚಟುವಟಿಕೆ ಮುಂತಾದುವುಗಳಿಂದ ಹೆಚ್ಚೇನೂ ಪ್ರಯೋಜನವಾಗದು; ಕಾಂಗ್ರೆಸ್ಸಿನ ಒಳಗಿನ ಒಡಕು ಕೊಣಗಾಣದು......

"ಕಳೆದ ಸೆಪ್ಟೆಂಬರ್ ತಿಂಗಳಲ್ಲೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಭೂ ಸಮಸ್ಯೆಯನ್ನು ಕೂಲಂಕುಶವಾಗಿ ಪರಿಶೀಲಿಸಿ, ಸ್ಪಷ್ಟವಾದ ನಿರ್ಣಯವನ್ನು ಮಾಡಿದೆ:

ದ್ವಿತೀಯ ಪಂಚವಾರ್ಷಿಕ ಯೋಜನೆಯ ಆಧಾರದಲ್ಲಿ ಭೂಸುಧಾರಣೆ ಜಾರಿಗೊಳಿಸಬೇಕು.

ಬೇರೆಯವರ ಜಮೀನುಗಳಲ್ಲಿ ವ್ಯವಸಾಯ ಮಾಡುವ ರೈತರಿಗೆ ಭದ್ರತೆ; ರೈತರಿಗೂ ಸರಕಾರಕ್ಕೂ ನಡುವಿನ ಮಧ್ಯವರ್ತಿಗಳನ್ನು ತೊಲಗಿಸಬೇಕು; ಭೂಮಾಲಿಕರು ವಶಪಡಿಸಿಕೊಳ್ಳಬಹುದಾದ ಜಮೀನಿಗೆ ಪರಿಮಿತಿ ಹೊರಿಸಿ ಅದಕ್ಕಿಂತ ಹೆಚ್ಚಿನ ಜಮೀನುಗಳನ್ನು ರೈತರು ಕೊಂಡುಕೊಳ್ಳುವುದಕ್ಕೆ ಅವಕಾಶವಿರಬೇಕು; ಸ್ವಂತ ಸಾಗುವಳಿಗೆಂದು ಭೂಮಾಲಿಕರು ಜಮೀನು ತಿರುಗಿ ಪಡೆಯುವಾಗಲೂ ರೈತರಿಗೆ ಸ್ವಲ್ಪ ಜಮೀನು ಉಳಿಯಬೇಕು.

ಮುಂದಕ್ಕೆ ಜಮೀನು ಕೊಂಡುಕೊಳ್ಳುವುದಕ್ಕೆ ಪರಿಮಿತಿ ಹೊರಿಸಬೇಕು. ಹಿಂದಿನಿಂದ ಭೂಮಾಲಕರ ವಶದಲ್ಲಿರುವ ಜಮೀನುಗಳ ಮೇಲೂ ಪರಿಮಿತಿ ಹೊರಿಸಲ್ಪಡಬೇಕು.

ರೈತರನ್ನು ಹೊಲಗಳಿಂದ ಹೊರ ತಳ್ಳುವುದನ್ನೂ ರೈತರು ತಾವಾಗಿ ಜಮೀನನ್ನು ಬಿಟ್ಟುಕೊಡುವುದೆಂಬ ರೂಪದಲ್ಲಿ ಭೂಮಾಲಿಕರು ವಶಪಡಿಸಿಕೊಳ್ಳುವುದನ್ನೂ ತಡೆಗಟ್ಟಬೇಕು. ಕಳೆದ ಮೂರು ವರ್ಷಗಳಿಂದ ಹೀಗೆ ಆಗಿರುವುದನ್ನು ಪುನರ್ ವಿಚಾರಣೆ ನಡೆಸಿ ರೈತರ ಕೈ ತಪ್ಪಿ ಹೋಗಿರುವ ಜಮೀನನ್ನು ಅವರಿಗೆ ತಿರುಗಿ ಕೊಡಿಸಬೇಕು.

ಯೋಜನಾ ಮಂಡಲದ ಶಿಫಾರಸಿನ ಪ್ರಕಾರ ಎಲ್ಲ ಪ್ರಾಂತಗಳಲ್ಲೂ ನ್ಯಾಯ ಗೇಣಿ (ರೈತನು ಭೂಮಾಲಿಕನಿಗೆ ಕೊಡತಕ್ಕ ಉತ್ಪತ್ತಿಯ ಭಾಗ) ಯನ್ನು ನಿರ್ಣಯಿಸಬೇಕು.

ಈ ಸ್ಪಷ್ಟ ನಿರ್ಣಯವು ಕಾಂಗ್ರೆಸ್ ಸರಕಾರಗಳಿಗೂ ಶಾಸನ ಕರ್ತರಿಗೂ ಕೊಡಲಾಗಿರುವ ನಿರ್ದೇಶವಾಗಿದೆ. ಇದು ಅವರನ್ನು ಪರೀಕ್ಷೆಗೆ ಗುರಿಪಡಿಸಿದೆ."

ಇದು ಕಾಂಗ್ರೆಸ್ ಅಧ್ಯಕ್ಷರ ಮಾತು. ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಈ ನಿರ್ದೇಶವನ್ನು ಜಾರಿಗೆ ತಾರದಿರಲು ಕಾರಣವೇನು? ಅದನ್ನು ಅಲಕ್ಷಿಸಿರುವ ಮಂತ್ರಿ ಮಂಡಲಗಳ ಮೇಲೂ ಶಾಸನ ಕರ್ತರ ಮೇಲೂ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಶಿಸ್ತಿನ ಕ್ರಮ ವಹಿಸುವುದೇ? ಈ ನಿರ್ದೇಶಗಳ ಸಲುವಾಗಿ ದೇಶದ ಆದ್ಯಂತವಾಗಿ ನಡೆಯುತ್ತಿರುವ ಚಳುವಳಿಯ ಮೇಲೆ ದಬ್ಬಾಳಿಕೆ ನಡೆಸುವ ಸರಕಾರಗಳನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಅಧಿಕಾರ ಸ್ಥಾನದಿಂದ ಕೆಳಗೆ ಇಳಿಸುವುದೆ? ಈ ಪ್ರಶ್ನೆಗಳಿಗೆ ಧೇಬರರ ಉತ್ತರವಿಲ್ಲ. ಕಾಂಗ್ರೆಸಿನ ನಿರ್ಣಯಗಳನ್ನು ಕಸಕ್ಕಿಂತ ಕಡೆಯೆಂದು ಎಣಿಸುವ ಕಾಂಗ್ರೆಸ್ ಪಕ್ಷದ ಶಾಸನ ಕರ್ತರಿಗೂ ಕಾರ್ಯಕಾರಿ ಸಮಿತಿಯ 'ಉಪದೇಶ' ಸಾಲದು. ಕಾಂಗ್ರೆಸಿನೊಳಗೆ ಜಮೀನ್ದಾರ— ಬಂಡವಾಳಗಾರ— ಜಾತೀಯವಾದಿ ಪ್ರತಿಗಾಮಿಗಳನ್ನು ತುರುಕಿ, ಅಂಥವರನ್ನೆ ಗದ್ದುಗೆಗೆ ಏರಿಸುವ ಧೇಬರರ ಉಪದೇಶಾಮೃತವು ಮೊಸಳೆ ಕಣ್ಣೀರು ಸುರಿಸಿದಂತೆ ಎಂದೇ ಹೇಳಬೇಕಾಗುತ್ತದೆ. ಟಾಟಾ—ಬಿರ್ಲಾ ಕಂಪೆನಿಗಳಿಂದ ಕಾಂಗ್ರೆಸ್ ಚುನಾವಣೆ ಕಾರ್ಯಗಳಿಗೆ ಲಕ್ಷ—ಲಕ್ಷಾಂತರ ರೂಪಾಯಿಗಳನ್ನು ಪಡೆದು, ಅವರನ್ನು ಸಂತೋಷ ಪಡಿಸುವುದೇ ಮುಖ್ಯ ಕರ್ತವ್ಯವನ್ನಾಗಿ ಇಟ್ಟುಕೊಂಡಿರುವ ಧೇಬರರ ಉಪದೇಶವು ಜನರ ಕಣ್ಣಿಗೆ ಮಣ್ಣೆರಚುವ ಯತ್ನ ಎಂದೇ ಹೇಳಬೇಕಾಗುತ್ತದೆ.

ಕೇರಳವನ್ನು ನೋಡಲಿ

ಧೇಬರರು ಕೊಂಚ ಕೇರಳದ ಕಡೆಗೆ ನೋಡಲಿ. ಅಲ್ಲಿ ಕಮ್ಯೂನಿಸ್ಟ್ ಸರಕಾರವು ಅಧಿಕಾರ ವಹಿಸಿಕೊಂಡು ಕೆಲವೇ ದಿನಗಳಲ್ಲಿ ರೈತರನ್ನು ಹೊಲಗಳಿಂದ ಹೊರತಳ್ಳದಂತೆ ತಡೆಯುವ ಶಾಸನ ಹೊರಡಿಸಿತು. ಇದೀಗ ಭೂ ಸಂಬಂಧ ಮಸೂದೆಯನ್ನು ಪ್ರಕಟಿಸಿದೆ.

ಇತರ ರಾಜ್ಯಗಳಲ್ಲಿ ಭೂಸುದಾರಣೆಯ ಬಗ್ಗೆ ಮಾತನಾಡುವುದರಲ್ಲೇ ಕಾಲ ಕಳೆಯಲಾಗುತ್ತಿದೆ. ಅದೇ ಸಮಯದಲ್ಲಿ ರೈತರನ್ನು ಹೊಲದಿಂದ ಹೊರತಳ್ಳಲು ಜಮೀನ್ದಾರರಿಗೆ ಅವಕಾಶ ಕೊಡಲಾಗುತ್ತಿದೆ.

ಕೇರಳ ಸರಕಾರದಂತೆಯೇ ಕಾಂಗ್ರೆಸ್ ಸರಕಾರಗಳೆಲ್ಲ ರೈತರನ್ನು ಯಾವ ಕಾರಣದಿಂದಲೂ ಜಮೀನಿನಿಂದ ಹೊರತಳ್ಳದಂತೆ ತಡೆಯುವ ಶಾಸನ ಕೂಡಲೆ ತರಬೇಕೆಂದು ಧೇಬರರು ನಿರ್ದೇಶ ಕೊಡುವರೆ? ಶಾಸನ ಸಭೆಗಳ ಈ ವರ್ಷದ ಬಜೆಟ್ ಅಧಿವೇಶನಗಳಲ್ಲೆ ಕೇರಳ ಸರಕಾರ ತಂದಿರುವಂಥ ಭೂಸುಧಾರಣೆಯ ಮಸೂದೆಯನ್ನು ಮಂಡಿಸಬೇಕೆಂದು ಕಾಂಗ್ರೆಸ್ ಸರಕಾರಗಳನ್ನು ಧೇಬರರು ನಿರ್ಬಂಧಿಸುವರೆ? ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಶಾಸನ ಸಭಾ ಸದಸ್ಯರು ಯಾರೇ ಆಗಲಿ—ಭೂಸುಧಾರಣೆಗೆ ವಿರೋಧವಾಗಿ ಶಾಸನ ಸಭೆಗಳಲ್ಲಾಗಲಿ ಹೊರಗಡೆಯಾಗಲಿ ಮಾತನಾಡಬಾರದೆಂದು ಶಿಸ್ತನ್ನು ಹೊರಿಸುವರೆ? ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಅಂಗೀಕರಿಸಿರುವ ನಿರ್ಣಯವನ್ನೂ ಪ್ರಾಗ್ಜ್ಯೋತಿಷಪುರದ ನಿರ್ಣಯವನ್ನೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಬಹಿರಂಗವಾಗಿ ಪ್ರಚಾರ ಮಾಡುವಂತೆ ಎಲ್ಲ ಕಾಂಗ್ರೆಸ್ ನಾಯಕರ ಮೇಲೂ ಕಡ್ಡಾಯದ ಕಾರ್ಯಕ್ರಮ ವಿಧಿಸುವರೆ?

ಅದಕ್ಕೆ ಧೇಬರರು ತಯಾರಿಲ್ಲ. ಹೊರಗೆ ಪ್ರಚಾರಕ್ಕೆ ಬಣ್ಣದ ಮಾತುಗಳನ್ನಾಡಿ, ಒಳಗಿಂದ ಪ್ರತಿಯೊಂದು ಪ್ರಗತಿಶೀಲ ಹೆಜ್ಜೆಗೂ ಅಡ್ಡಗಾಲಿಡುವವರಿಗೆ ಧೇಬರರ ಪ್ರೋತ್ಸಾಹ ದೊರಕುತ್ತಿದೆ.

"ಎಲ್ಲರನ್ನೂ ಕೆಲವು ದಿನ ಮೋಸ ಮಾಡಬಹುದು; ಕೆಲವರನ್ನು ಯಾವಾಗಲೂ ಮೋಸ ಮಾಡಬಹುದು. ಆದರೆ ಎಲ್ಲರನ್ನೂ ಯಾವಾಗಲೂ ಮೋಸ ಮಾಡಲು ಸಾಧ್ಯವಿಲ್ಲ" ಎಂದು ಇಂಗ್ಲೀಷಿನಲ್ಲಿ ಒಂದು ಗಾದೆ ಇದೆ. ಹಾಗೆ ಧೇಬರರ ಮಾತುಗಳೂ ಕಾಂಗ್ರೆಸ್ಸಿನ ಠರಾವುಗಳೂ ಎಲ್ಲರನ್ನೂ ಕೆಲವು ದಿನ ಮೋಸ ಮಾಡಿದ್ದಾಯಿತು; ಕೆಲವರನ್ನು ಇನ್ನೂ ಕೆಲ ದಿನ ಮೋಸ ಮಾಡಬಹುದು—ಒಂದು ವೇಳೆ ಯಾವಾಗಲೂ ಮೋಸ ಮಾಡಬಹುದು. ಆದರೆ ಬಹುಸಂಖ್ಯಾಕ ಜನರನ್ನಂತೂ ಇನ್ನು ಹೆಚ್ಚು ದಿನ ಮೋಸಗೊಳಿಸಲು ಸಾಧ್ಯವಿಲ್ಲ. ಕಾಂಗ್ರೆಸ್ ಮಂತ್ರಿಗಳೂ ಶಾಸನ ಸಭಾ ಸದಸ್ಯರುಗಳೂ ಇತರ ನಾಯಕರೂ ಧೇಬರರ ಉಪದೇಶ ಕೇಳಿ, ಮನಸ್ಸು ಬದಲಿಸಿ, ಕಾಂಗ್ರೆಸ್ಸಿನ ಘೋಷಣೆಗಳಲ್ಲೂ ನಿರ್ಣಯಗಳಲ್ಲೂ ಶ್ರದ್ಧೆ, ನಿಷ್ಠೆ ಹಾಗು ಕಾರ್ಯತತ್ಪರತೆ ತೋರಿಸುವ ಸುಯೋಗವನ್ನು ಕಾದು ಕಂಗಾಲಾಗಲು ಜನರು ತಯಾರಿಲ್ಲ. ಅದೀಗ ಧೇಬರರ ದುರಂತ!

———

ಗೌಹಾತಿ ಜನತೆಗೊಂದು ದಸರಾ!

ಕಾಂಗ್ರೆಸ್ಸಿನ 63ನೇ ಅಧಿವೇಶನದಲ್ಲಿ ಜೀವಕಳೆ ಇಲ್ಲ. ಇದೊಂದು ಸಂತೆಯಂತೆ (ನಮ್ಮ ಸಾಹಿತ್ಯ ಸಮ್ಮೇಳನದಂತಿರಬಹುದೇ ?) ಗೌಹಾತಿಯಲ್ಲಿ ನೆರೆದಿದೆ, ಎಂದು ಪತ್ರಿಕೆಗಳೆಲ್ಲಾ ಹೇಳಿದೆ. ಇದು ನಿಜವಾಗಿರಬೇಕು. ಯಾಕೆಂದರೆ ಕಾಂಗ್ರೆಸ್ ನಾಯಕರೊಬ್ಬರ ಹೇಳಿಕೆ ಪ್ರಕಾರ, ದೇವರಂತೆ ಪತ್ರಿಕಾ ಕರ್ತರು ತಪ್ಪು ಮಾಡದವರು ತಾನೆ!

ಏನಿಲ್ಲದಿದ್ದರೂ ಗೌಹಾತಿಯ ಬಡ ಜನತೆಗೆ ಆನೆಗಳ ಪ್ರದರ್ಶನ ಹಾಗೂ ಈ ಭಾರಿ ಉತ್ಸವವನ್ನು ನೋಡುವ ಭಾಗ್ಯ ಒದಗಿದೆ.

ಅಧ್ಯಕ್ಷ ಧೇಬರರ ಭಾಷಣವಾಗುವಾಗ, ಎಷ್ಟೋ ಮಂದಿ ಕಾಂಗ್ರೆಸ್ಸಿಗರು, ಹೊರಗೆ ಘೀಳಿಡುತ್ತಿದ್ದ ಆನೆಗಳನ್ನು ನೋಡಲು, ತೆರಳಿದರೆಂದು ವರದಿಯಾಗಿದೆ. ಆದರೆ, ಇದರಲ್ಲಿ, ಮೈಸೂರಿನ ಕಾಂಗ್ರೆಸ್ಸಿಗರು ಇರಲಿಕ್ಕಿಲ್ಲ. ಮೈಸೂರಿನಲ್ಲಿ ದಸರಾ ದಿನ ಆನೆಗಳ ಮೆರವಣಿಗೆ ಇದೆ! ಗೌಹಾತಿಯ ಈ ದಸರಾ—ಮೈಸೂರು ದಸರಾವನ್ನು ಮೀರಲಿಕ್ಕಿಲ್ಲವಷ್ಟೆ!

ಅಧ್ಯಕ್ಷ ಢೇಬರರ ಕಾಲು ಜಾರಿದಾಗ?

ಕಮ್ಯೂನಿಸ್ಟ್ ಪಕ್ಷದ ವಿರೋಧವಾಗಿ ಅಪಪ್ರಚಾರಮಾಡಲು, ಭಾಷಣ ಮಾಡಲು, ಹೇಳಿಕೆಗಳೀಯಲು ಪಂಡಿತ ನೆಹರೂರವರಿಂದ ಹಿಡಿದು ಎಲ್ಲರೂ ಅವಕಾಶವನ್ನೆದುರು ನೋಡುತ್ತಿರುತ್ತಾರೆ. ಕೇರಳದಲ್ಲಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ಸರಕಾರ ರಚಿತವಾದ ಮೇಲಂತೂ ಇದು ಮುಗಿಲು ಮುಟ್ಟಿದೆ. ಕೇರಳ ಸರಕಾರದ ಪ್ರತಿಯೊಂದು ಕ್ರಮವನ್ನು ಅಲ್ಲಗೆಳೆಯುವುದಷ್ಟೇ ಅಲ್ಲದೆ, ಕಮ್ಯೂನಿಸ್ಟರು ಅಧಿಕಾರಕ್ಕೆ ಬಂದ ಮೇಲೆ ರಾಜ್ಯದಲ್ಲಿ ಅರಾಜಕತೆ, ಕೊಳ್ಳೆ ಸುಲಿಗೆ ಹೆಚ್ಚಾಗಿದೆ ಎನ್ನುವ ಪ್ರಚಾರವಂತೂ ನಿತ್ಯ ಸಾಗುತ್ತಿದೆ.

ಬೇಜವಾಬ್ದಾರಿಯಿಂದ ವರ್ತಿಸುವ, ಅಪಪ್ರಚಾರದ ಸುರಿಮಳೆ ನಡೆಸುವ ವ್ಯಕ್ತಿಗಳು ಮತ್ತು ಸಂಸ್ಥೆಗಳೂ ಹೋಗಲಿ ಎನ್ನುಂತಿದ್ದರೆ, ಜವಾಬ್ದಾರಿಯುತ ಸ್ಥಾನದಲ್ಲಿರುವವರೂ ಸಹ ಸತ್ಯಾಸತ್ಯತೆಯನ್ನು ಅರಿತುಕೊಳ್ಳುವಷ್ಟು ತಾಳ್ಮೆಯಿಲ್ಲದೆ ವರ್ತಿಸುತ್ತಾರೆ.

ಆಡಳಿತ ಪಕ್ಷವಾಗಿರುವ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಢೇಬರ್‌ರು ಅಂಥವರಲ್ಲಿ ಒಬ್ಬರಾಗಿದ್ದಾರೆ. ಕೇರಳ ವಿದ್ಯಾ ಮಸೂದೆಯನ್ನು ರಾಷ್ಟ್ರಪತಿಗಳ ಸುಪ್ರೀಂ ಕೋರ್ಟಿನ ಅಭಿಮತಕ್ಕೆ ಒಪ್ಪಿಸಿದ್ದಾರೆ. ಇದರ ಮೇಲೆ ವಿವಾದವೇ ನಡೆಯುತ್ತಿದೆ. ಕೇರಳ ಕಮ್ಯೂನಿಸ್ಟ್ ಪಕ್ಷವು ಕೇಂದ್ರ ಸರಕಾರವು ಈ ಬಗ್ಗೆ ಅನುಸರಿಸಿರುವ ನೀತಿಯನ್ನು ಟೀಕಿಸಿದೆ ಎಂದು ನಿರ್ಣಯವನ್ನು ಓದದೆಯೇ ಅಧ್ಯಕ್ಷ ಢೇಬರರು ಶ್ರೀಮನ್ನಾರಾಯಣ್‌ರವರ ಸಲಹೆಯ ಮೇರೆಗೆ ಕೇರಳ ಕಮ್ಯೂನಿಸ್ಟ್ ಪಕ್ಷವು ರಾಷ್ಟ್ರಾಧ್ಯಕ್ಷರನ್ನು ಟೀಕಿಸುವ ಉದ್ಧಟತನಕ್ಕೆ ಹೋಗಿದೆ ಎಂದು ಆ ನಿರ್ಣಯವನ್ನು ಖಂಡಿಸಿ ಹೇಳಿಕೆಯೊಂದನ್ನಿತ್ತಿದ್ದರು.

ಇದರ ಬಗ್ಗೆ ಸ್ವಾರಸ್ಯವಾದ ಹಿನ್ನೆಲೆಯೊಂದಿದೆ. ಅಧ್ಯಕ್ಷ ಢೇಬರರ ಈ ಹೇಳಿಕೆಯು ಗೌಹಾತಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಗೊಂದಲವನ್ನೇ ಉಂಟುಮಾಡಿತ್ತು. ಢೇಬರರ ಹೇಳಿಕೆ ರಾಷ್ಟ್ರಾಧ್ಯಕ್ಷರನ್ನು ಕಮ್ಯೂನಿಸ್ಟರು ಟೀಕಿಸಿದ್ದಾರೆಂದು ಖಂಡಿಸುವುದಾಗಿತ್ತು. ಆದರೆ ಕಮ್ಯೂನಿಸ್ಟ ಪಕ್ಷದ ನಿರ್ಣಯವನ್ನು ಯಾರೂ ಓದಿರಲಿಲ್ಲ. ಕೇರಳ ಸರಕಾರದ ಮೇಲೆ ಇಲ್ಲದ ಆರೋಪಗಳನ್ನು ಹೊರಿಸುವುದರಲ್ಲಿ ಹೆಸರು ಗಳಿಸಿರುವ ಶ್ರೀಮನ್ನಾರಾಯಣ್‌ರವರು ತಾವು ಪ್ರಮುಖ ಇಂಗ್ಲಿಷ್ ದಿನ ಪತ್ರಿಕೆಯೊಂದರಲ್ಲಿ ನಿರ್ಣಯವು ವರದಿಯಾಗಿದ್ದುದನ್ನು ಓದಿರುವುದಾಗಿಯೂ ಅದರಂತೆ ಕಮ್ಯೂನಿಸ್ಟ್ ಪಕ್ಷ ಅಧ್ಯಕ್ಷರನ್ನು ಟೀಕಿಸಿದೆ ಎಂದೂ ಹಾರಾಡಿದರು.

ಆದರೆ ಅಧಿವೇಶನದ ಕ್ರಿಯಾಸಮಿತಿಯ ಕೆಲ ಸದಸ್ಯರು ಢೇಬರರ ಹೇಳಿಕೆಯ ಬಗ್ಗೆ ಆಕ್ಷೇಪವೆತ್ತಿದರು. ಕಮ್ಯೂನಿಸ್ಟ್ ಪಕ್ಷ ಸರಕಾರದ ನೀತಿಯನ್ನು ಖಂಡಿಸಿದೆಯೇ ಹೊರತು ರಾಷ್ಟ್ರಾಧ್ಯಕ್ಷರನ್ನಲ್ಲ ಎಂದು ತಿಳಿಸಿದರು.

ಇದರಿಂದ ಗೊಂದಲವೆದ್ದು ಕಮ್ಯೂನಿಸ್ಟ್ ಪಕ್ಷದ ನಿರ್ಣಯದ ಪ್ರತಿಗಾಗಿ ಹುಡುಕಾಟ ಆರಂಭವಾಯಿತು. ಪ್ರಮುಖ ಸುದ್ದಿ ಸಂಸ್ಥೆಯೊಂದನ್ನು ನಿರ್ಣಯದ ಪಾಠ ತರಿಸಬೇಕೆಂದು ಕೇಳಲಾಯಿತು. ಅದರ ಎರ್ನಾಕುಲಂ ಕಛೇರಿಗೆ ಟ್ರಂಕ್ ಮಾಡಲಾಗಿ, ನಿರ್ಣಯದ ಪಾಠ ಮಲೆಯಾಳಂನಲ್ಲಿದೆಯೆಂದೂ, ಕೇರಳ ಕಮ್ಯೂನಿಸ್ಟ್ ಪಕ್ಷದ ಕಛೇರಿಗೆ ಅದರ ಆಂಗ್ಲ ಭಾಷಾನುವಾದ ಒದಗಿಸಲು ಕೇಳಲಾಗಿದೆಯೆಂದೂ ಪ್ರತ್ಯುತ್ತರ ಬಂದಿತು.

ಇಷ್ಟರಲ್ಲಿ ಶ್ರೀಮನ್ನಾರಾಯಣ್‌ರವರು ತಾವು ಓದಿದ್ದರೆಂದು ಹೇಳಲಾದ ಪ್ರಮುಖ ಪತ್ರಿಕೆಯ ಬಾತ್ಮೀದಾರನ ಬಳಿ ಪ್ರತಿ ಇಲ್ಲದ್ದರಿಂದ ಅವನು ಗೌಹತಿಗೆ ಹೋಗಲು ಕಾರನ್ನು ಕೊಟ್ಟು ಅದೇ ರಾತ್ರಿ ಪ್ರತಿ ತರಲು ಹೇಳಿ ಅದನ್ನು ನೆಹರೂರವರಿಗೆ ಕೊಡಲಾಯಿತು.

ಕೇರಳ ಕಮ್ಯೂನಿಸ್ಟ್ ಪಕ್ಷವನ್ನು ಟೀಕಿಸುವ ಮುನ್ನ, ಅಧ್ಯಕ್ಷ ಢೇಬರರು ಹೇಳಿಕೆ ಈಯುವ ಮುನ್ನ, ಆ ನಿರ್ಣಯದಪೂರ್ಣ ಪಾಠ ಪಡೆದಿರಬೇಕಾಗಿತ್ತೆಂದೂ ಆತುರದಿಂದಿಂದ ವರ್ತಿಸಿದುದು ತಪ್ಪಾಯಿತೆಂದೂ ಹಲವು ಕಾಂಗ್ರೆಸಿಗರ ಅಭಿಪ್ರಾಯವಾಗಿದೆ ಎಂದೂ, ಇದು ನೆಹರೂರವರ ಅಭಿಪ್ರಾಯವೂ ಆಗಿದೆಯೆಂದೂ ತಿಳಿದು ಬಂದಿದೆ.

ಕಮ್ಯೂನಿಸ್ಟ್ ಪಾರ್ಟಿ ಸಮ್ಮೇಳನ

(೩ನೇ ಪುಟದಿಂದ)

ನೆರವೇರಿಸಲು ಕಾರ್ಪೊರೇಷನ್ನಿನ ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳೂ ಒಂದಾಗಿ, ಸೈಕಲ್ ತೆರಿಗೆ ರದ್ದು, ಇತ್ಯಾದಿ ನಿರ್ದಿಷ್ಟ ಕಾರ್ಯಕ್ರಮದ ಆಧಾರದ ಮೇಲೆ ದುಡಿಯಬೇಕೆಂದು ಈ ಸಮ್ಮೇಳನ ಮನವಿ ಮಾಡುತ್ತದೆ. ಈ ರೀತಿ ಒಂದಾಗಿ ದುಡಿಯಲು ಕಮ್ಯೂನಿಸ್ಟ್ ಪಾರ್ಟಿಯೂ, ಕಾರ್ಪೊರೇಷನ್ನಿನಲ್ಲಿರುವ ಕಮ್ಯೂನಿಸ್ಟ್ ಸದಸ್ಯರೂ ಸದಾ ಸಿದ್ಧರಾಗಿದ್ದಾರೆಂದು ಈ ಸಮ್ಮೇಳನ ಭರವಸೆ ನೀಡುತ್ತದೆ.

3. ಕಮ್ಯೂನಿಸ್ಟ್ ಪಾರ್ಟಿ ಬೆಂಗಳೂರು ಜಿಲ್ಲಾ ಸಮಿತಿಯ ಈ ಸಮ್ಮೇಳನವು ಕೇಂದ್ರ ಸಮಿತಿಯು ಮಂಡಿಸಿರುವ ಪಾರ್ಟಿ ಘಟನಾವಳಿಯ ಕರಡು ತಿದ್ದುಪಡಿಗಳನ್ನು ಸಾಮಾನ್ಯವಾಗಿ ಒಪ್ಪುತ್ತದೆ. ಮತ್ತು ಸಮ್ಮೇಳನದಲ್ಲಿ ಸೂಚಿಸಲಾಗಿರುವ ತಿದ್ದುಪಡಿಗಳನ್ನು ಪ್ರಾಂತ ಸಮ್ಮೇಳನದಲ್ಲಿ ಪ್ರತಿನಿಧಿಗಳು ಪ್ರತಿನಿಧಿಸಬೇಕೆಂದು ನಿರ್ದೇಶಿಸುತ್ತದೆ

4. ಬೆಳೆಯುತ್ತಿರುವ ಜವಾಬ್ದಾರಿಗಳನ್ನು ನಿರ್ವಹಿಸಲು ಮತ್ತು ಇರುವ ಸಾಧ್ಯತೆಗಳನ್ನು ಗಮನಿಸಿ, ಮಾರ್ಚ್ 31, 1958ರೊಳಗೆ ಪಾರ್ಟಿ ಸದಸ್ಯತ್ವವನ್ನು ದ್ವಿಗುಣಗೊಳಿಸಲು ಈ ಸಮ್ಮೇಳನವು ನಿರ್ಣಯಿಸುತ್ತದೆ.

ಕರ್ನಾಟಕ ಕಮ್ಯೂನಿಸ್ಟ್ ಪಾರ್ಟಿ ಸಮ್ಮೇಳನ

ಕಮ್ಯೂನಿಸ್ಟ್ ಪಾರ್ಟಿಯ ಕರ್ನಾಟಕ ಪ್ರಾಂತೀಯ ಸಮ್ಮೇಳನವು ಜನವರಿ 29 ರಿಂದ 31ರ ವರೆಗೆ ಮಂಗಳೂರಿನಲ್ಲಿ (ದಕ್ಷಿಣ ಕನ್ನಡ ಜಿಲ್ಲೆ) ಜರಗುವುದು. 20 ಪಾರ್ಟಿ ಸದಸ್ಯರಿಗೊಬ್ಬರಂತೆ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸುವರು.

ಕೇಂದ್ರ ಸಮಿತಿಯು ತಯಾರಿಸಿರುವ ಪಾರ್ಟಿ ಘಟನೆಯ ತಿದ್ದುಪಡಿಗಳು, ಸಂಘಟನೆಯಲ್ಲಿ ದುರ್ಬಲತೆಗಳು ಮತ್ತು ಪಾರ್ಟಿಯನ್ನು ಬಲಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚೆ ನಡೆಯಲಿದೆ. ಪ್ರಾಂತದ ಪರಿಸ್ಥಿತಿ ಮತ್ತು ಪ್ರಾಂತ ಸಮಿತಿಯ ಚಟುವಟಿಕೆಗಳ ಬಗ್ಗೆಯೂ ಚರ್ಚೆ ನಡೆದು ನಿರ್ಣಯಗಳಾಗಲಿವೆ.

ಹೊಸ ಪಾರ್ಟಿ ಸದಸ್ಯರಿಗೆ ಕಾರ್ಡುಗಳನ್ನು ಪಡೆಯಲಿಚ್ಛಿಸುವವರು ಭರ್ತಿ ಮಾಡಿದ ಫಾರ್ಮ್‌ಗಳನ್ನು ರೂ 1/- ಸಹಿತ ತಂದು ಕೊಟ್ಟರೆ ಸಮ್ಮೇಳನದ ಕಾಲದಲ್ಲಿ ಕಾರ್ಡುಗಳನ್ನು ಕೊಡಲಾಗುವುದು.

ಪಾರ್ಟಿ ಕಾರ್ಡಿಗೆ ಮಾತ್ರ 0-8-0 ಯಂತೆ ಕೊಟ್ಟು ಕಾರ್ಡು ಪಡೆದವರು ಸಮ್ಮೇಳನದ ಮೊದಲು ಪಿ.ಸಿ.ಗೆ. ಸಲ್ಲಬೇಕಾದ ಚಂದಾ ಹಣದ ಭಾಗವಾದ 0-8-0 ಯನ್ನು ತಪ್ಪದೆ ಕೊಡಬೇಕಾಗಿ ವಿನಂತಿ.

ತಾ. 31 ರಂದು ಸಂಜೆಗೆ ಕೇಂದ್ರ ಮೈದಾನಿನಲ್ಲಿ ಬಹಿರಂಗ ಸಭೆ ನಡೆಯಲಿದೆ. ಕಾ| ಪಿ. ರಾಮಮೂರ್ತಿ ಮತ್ತಿತರ ನಾಯಕರು ಭಾಷಣ ಮಾಡುವರು.

ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯು ಸಮ್ಮೇಳನದ, ವ್ಯವಸ್ಥೆ ಮಾಡಲು ಒಪ್ಪಿಕೊಂಡಿದೆ. ಪ್ರತಿಯೊಬ್ಬ ಪ್ರತಿನಿಧಿಯೂ ರೂ 3/- ಪ್ರತಿನಿಧಿ ಶುಲ್ಕ ಕೊಡಬೇಕೆಂದೂ ತೀರ್ಮಾನ ಮಾಡಲಾಗಿದೆ. ಪ್ರತಿನಿಧಿಗಳು 28 ರಂದು ಸಂಜೆಗೆ ಮಂಗಳೂರಿಗೆ ತಲುಪುವುದು ಅಗತ್ಯ. ಮಂಗಳೂರಿಗೆ ಬರಲು ಬೆಂಗಳೂರು, ಮೈಸೂರು, ಹಾಸನ, ಹರಿಹರ, ಕಡೂರು ಮುಂತಾದ ರೈಲ್ವೆ ನಿಲ್ದಾಣಗಳಿಂದ ನೇರವಾದ ಬಸ್ ಸೌಕರ್ಯವಿದೆ. ಪ್ರತಿನಿಧಿಗಳು ತಾವು ಮಂಗಳೂರಿಗೆ ತಲುಪುವ ವೇಳೆಯನ್ನು ಪಾರ್ಟಿ ಆಫೀಸಿಗೆ ಮೊದಲೇ ತಿಳಿಸುವುದು ಉತ್ತಮ. ಇದರ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಸತಕ್ಕದ್ದು:

ಎ. ಕೃಷ್ಣ ಶೆಟ್ಟಿ
ಕಾರ್ಯದರ್ಶಿ
ಕಮ್ಯೂನಿಸ್ಟ್ ಪಾರ್ಟಿ ಆಫೀಸ್,
ಮಹಾತ್ಮಾ ಗಾಂಧಿ ರಸ್ತೆ,
ಮಂಗಳೂರು.

ಕಮ್ಯೂನಿಸ್ಟ್ ಪಕ್ಷದ ಬಲವು ದ್ವಿಗುಣವಾಗಿದೆ

ಆಂಧ್ರ

ಭಾರತ ಕಮ್ಯೂನಿಸ್ಟ್ ಪಾರ್ಟಿಯ ಕರೆಗೆ ಓಗೊಟ್ಟ ಆಂಧ್ರ ಕಮ್ಯೂನಿಸ್ಟ್ ಪಕ್ಷವು ತನ್ನ ಬಲವನ್ನು 22,300ರಿಂದ 48,836ಕ್ಕೆ ಏರಿಸಿದೆ. ಮಾರ್ಚಿಯ ಹೊತ್ತಿಗೆ ಇನ್ನೂ 10,000ದಷ್ಟು ಹೆಚ್ಚು ಮಂದಿಯನ್ನು ಸೇರಿಸಲಾಗುವುದೆಂದು ಆಂಧ್ರರಾಜ್ಯ ಕಮ್ಯೂನಿಸ್ಟ್ ಪಕ್ಷದ ಸಮ್ಮೇಳನದಲ್ಲಿ ವ್ಯಕ್ತಪಡಿಸಲಾಗಿದೆ. ಈಗ 451 ಮಂದಿ ಪೂರ್ಣ ಸಮಯದ ಕೆಲಸಗಾರರಿದ್ದಾರೆ. 4,000 ಹಳ್ಳಿಗಳಲ್ಲಿ ಪಾರ್ಟಿಯ ಶಾಖೆಗಳಿವೆ. ವಾರ್ಷಿಕ ವೆಚ್ಚವು 3,44,000 ರೂ.ಗಳಷ್ಟಿವೆ.

ಪಶ್ಚಿಮ ಬಂಗಾಳ

ಕಮ್ಯೂನಿಸ್ಟ್ ಪಕ್ಷವನ್ನು ಸಾಮೂಹಿಕ ಪಕ್ಷವಾಗಿ ಮಾಡುವ ಪ್ರಯತ್ನಕ್ಕೆ ಪಶ್ಚಿಮ ಬಂಗಾಳದಲ್ಲಿ ವಿಶೇಷ ಜಯ ಲಭಿಸಿದೆ. 1956ರ ಜನವರಿಯಿಂದ 1958ರ ಜನವರಿಯ ಕಾಲಪರಿಮಿತಿಯಲ್ಲಿ ಸದಸ್ಯತ್ವವು 10,000 ಮಂದಿ ಇದ್ದು 22,000ಕ್ಕೆ ಏರಿದೆ. ಬರ್ದ್ವಾನ್, ಮಿಡ್ನಾಪುರ್ ಮತ್ತು 24 ಇತರ ಜಿಲ್ಲೆಗಳಲ್ಲಿ ಪಾರ್ಟಿಯ ಮುನ್ನಡೆಯು ಅದ್ಭುತವಾಗಿವೆ. ನಿರ್ಬಲವೆನ್ನಿಸಿದ್ದ ಬಂಕುರದಲ್ಲೂ ಸದಸ್ಯತ್ವವು ದ್ವಿಗುಣವಾಗಿದೆ. ಡಾರ್ಜಿಲಿಂಗ್ ಹಾಗು ಜಲಪಾಯ್‌ಗುರಿ ಜಿಲ್ಲೆಗಳಲ್ಲಿ ಪ್ಲಾಂಟೇಷನ್ ಕಾರ್ಮಿಕರು ವಿಪುಲವಾಗಿ ಬಂದು ಪಕ್ಷದ ಸದಸ್ಯರಾಗಿದ್ದಾರೆ.

ಪಂಜಾಬಿನ ೩,೯೦೦ ಪಟ್ವಾರಿಗಳ ಬಂಧನ

ಪಂಜಾಬಿನಲ್ಲಿ ರೆವೆನ್ಯೂ ಪಟ್ವಾರಿ ಯೂನಿಯನಿನ ಅಧ್ಯಕ್ಷರ ಹೇಳಿಕೆಯ ಪ್ರಕಾರ, ಇಷ್ಟರವರೆಗೆ, 5 ಕೇಂದ್ರಗಳಲ್ಲಿ ಮುಷ್ಕರ ಹೂಡುತ್ತಿರುವವರ ಪೈಕಿ 3,900 ಮಂದಿಯ ಬಂಧನವಾಗಿದೆ.

ಅಧಿಕ ಸಂಬಳ ಸ್ಕೇಲು, ಭತ್ತೆ ಹಾಗೂ ಪೆನ್ಶನ್ ಪ್ರಶ್ನೆಗಳ ಮೇಲೆ ಪಟ್ವಾರಿಗಳು ಸರಕಾರದೊಡನೆ ನಡೆಸಿದ ವಿಫಲ ಸಂಧಾನದ ಫಲ ಈ ಮುಷ್ಕರ. ಪಟ್ವಾರಿಗಳ ನ್ಯಾಯವಾದ ಕೇಳಿಕೆಗಳನ್ನು ನೆರವೇರಿಸಲಾಗುವುದೆಂದು ಎಂದಿನಿಂದಲೂ ಭರವಸೆ ಕೊಡುತ್ತಾ ಬಂದಿದ್ದ ಮುಖ್ಯ ಮಂತ್ರಿಯವರೂ ಭರವಸೆ ಮುರಿದದ್ದೇ ಅಲ್ಲದೆ, ಸಾವಿರಗಟ್ಟಲೆಯಲ್ಲಿ ನೌಕರರನ್ನು ಬಂಧಿಸಿ ಮುಷ್ಕರ ಮುರಿಯುವ ಯತ್ನ ಮಾಡುವಂತಿದೆ. ಸರಕಾರವು ಈ ದಬ್ಬಾಳಿಕಾ ನೀತಿಯನ್ನು ಮುಂದುವರಿಸಿದರೆ ಪರಿಸ್ಥಿತಿಯು ಉಗ್ರಮಟ್ಟಕ್ಕೆ ಹೋಗಬಹುದೆಂದು ಸರಕಾರವನ್ನು ಎಚ್ಚರಿಸಲಾಗಿದೆ.

ಕೇರಳ....ಕೇರಳ....

ಮುಂದಿನ ಕಾಂಗ್ರೆಸ್ ಅಧಿವೇಶನಕ್ಕೆ ಕೇರಳ ಮತ್ತಿತರ ಕಡೆಗಳಿಂದ ಆಮಂತ್ರಣ ಬಂದಿದೆ. ಈ ಬಗ್ಗೆ ಪ್ರತಿನಿಧಿಗಳ ಅಭಿಪ್ರಾಯ ಕೇಳಿದಾಗ 'ಕೇರಳ....ಕೇರಳ' ಎಂಬ ಕೂಗೆದ್ದಿತು ಎಂದು ತಿಳಿಯಲಾಗಿದೆ. ಕೇರಳದಲ್ಲಿ ಕಮ್ಯೂನಿಸ್ಟ್ ಆಳ್ವಿಕೆಯನ್ನು ಕಣ್ಣಾರೆ ಕಂಡು, ಜನರ ಪ್ರತಿಕ್ರಿಯೆಯನ್ನು ಕಿವಿಯಾರೆ ಕೇಳುವ ಬಯಕೆ ಈ ಕಾಂಗ್ರೆಸ್ಸಿಗರಿಗಿದೆಯೇನೋ !

ಪ್ರಾಂತೀಯ ಸುದ್ದಿ ಸಂಗ್ರಹ

ಪ್ಲಾಂಟರುಗಳ ಕಿರಾತ ಆಳ್ವಿಕೆ— ಪೋಲೀಸ್ ಇಲಾಖೆಯ ಮೌನ!

ಮೈಸೂರು ಸಂಸ್ಥಾನದಲ್ಲಿ ಪ್ಲಾಂಟೀಶನ್ ಕೆಲಸಗಾರರನ್ನು ತಲೆ ಮಾರುಗಳಿಂದ ಜೀತದಾಳುಗಳಂತೆ ದುಡಿಸಿ, ಅವರ ಶೋಷಣೆಯನ್ನು ನಿರಾತಂಕವಾಗಿ ನಡೆಸಿಕೊಂಡು ಬಂದ ಕೆಲ ಪ್ಲಾಂಟರುಗಳು ಮದಮತ್ತರಾಗಿರುತ್ತಾರೆ. ಇದರ ಪರಿಣಾಮವಾಗಿ ಕಾರ್ಮಿಕರು ನೆಮ್ಮದಿಯಾಗಿ ತಮ್ಮ ಬಾಳನ್ನು ಮುಂದುವರಿಸುವುದೇ ಅಸಾಧ್ಯವಾಗಿದೆ.

ಕಳೆದ ಡಿಸೆಂಬರ್ ತಿಂಗಳು ಮಾವಿನಗುಡಿಗೆ ಸೋಮೇಶ್ವರ ಖಾನ್ ಎಸ್ಟೇಟುಗಳಲ್ಲಿ ನಡೆದ ಘಟನೆಯೇ ಇದಕ್ಕೆ ಸಾಕ್ಷಿಯಾಗಿದೆ. ಇಂತಹ ಹಲವಾರು ಘಟನೆಗಳು ದಿನನಿತ್ಯ ಪ್ಲಾಂಟೀಶನುಗಳಲ್ಲಿ ನಡೆಯುತ್ತಿರುವುದು ಮೈಸೂರು ಸಂಸ್ಥಾನ ಸರಕಾರದ ಕಲಮುಗಳಲ್ಲಿದ್ದಂತೆ ತೋರುತ್ತದೆ. ಇಲ್ಲದಿದ್ದರೆ ಕಾರ್ಮಿಕರಿಂದ ಹಾಗೂ ಕಾರ್ಮಿಕ ಸಂಘದಿಂದ, ಪ್ಲಾಂಟೀಶನುಗಳಲ್ಲಿ ನಡೆಯುತ್ತಿರುವ ದುರಾಡಳಿತೆಯ ಬಗ್ಗೆ, ಪೋಲೀಸು ಇಲಾಖೆಗೆ ಹಾಗೂ ಸರಕಾರಕ್ಕೆ ಹೋದ ದೂರುಗಳನ್ನು ಗಮನಿಸಿ ಸೂಕ್ತ ಕ್ರಮಗಳನ್ನು ನಡೆಸುತ್ತಿದ್ದರು. ಆದರೆ ಕಾರ್ಮಿಕರ ಮಟ್ಟಿಗೆ ಕಾರ್ಮಿಕ ಇಲಾಖೆ ಇದ್ದು ಸತ್ತಂತಿದೆ.

ಇದರ ಪರಿಣಾಮವಾಗಿ ಕಾರ್ಮಿಕರ ಮೇಲೆ ನಡೆಸುತ್ತಿರುವ ದಬ್ಬಾಳಿಕೆ, ಟ್ರೇಡ್ ಯೂನಿಯನ್ ಕಾರ್ಯಕರ್ತರ ಮೇಲೆ ವಿಸ್ತರಿಸಲು ತೊಡಗಿದ್ದಾರೆ. ತಾರೀಖು 18-1-58 ರಂದು ಕರ್ನಾಟಕ ಪ್ರೊವಿನ್ಶಿಯಲ್ ಪ್ಲಾಂಟೀಶನ್ ವರ್ಕರ್ಸ್ ಯೂನಿಯನ್ ಕಾರ್ಯದರ್ಶಿ ಎ. ಕೆ. ವಿಶ್ವನಾಥ್ ಎಂಬುವರನ್ನೂ, ಇತರ ಕಾರ್ಯಕರ್ತರನ್ನು ಚಿಕ್ಕಮಗಳೂರು ಜಿಲ್ಲೆಯಲ್ಲಿರುವ "ಕೆಳಹಾಂದಿ ಎಸ್ಟೇಟ್" ಮಾಲೀಕರ ಗೂಂಡಾಗಳೂ ಸೇರಿ ಹೊಡೆದು, ಪಿಸ್ತೂಲು ತೋರಿಸಿ ಖಾಲಿ ಕಾಗದದ ಮೇಲೆ ಸಹಿ ಹಾಕಿಸಿದ್ದಾರೆ; ಅವರಲ್ಲಿದ್ದ ಯೂನಿಯನಿನ ಹಣ ಸುಮಾರು 50 ರೂಪಾಯಿಯನ್ನೂ, ಯೂನಿಯನಿಗೆ ಸದಸ್ಯರಾಗಿ ಸೇರಿಸುವ ಅಪೇಕ್ಷಾ ಪತ್ರಗಳನ್ನೂ ಕಂಪ್ಲೆಂಟ್ಸ್‌ಗಳನ್ನೂ ಲೇಖನಿ ಪಾದರಕ್ಷೆಗಳನ್ನೂ ಕಸಿದು, ಕಟ್ಟಿಹಾಕಿ ಹೊಡೆದಿರುತ್ತಾರೆ. ಸುಮಾರು ಮಧ್ಯರಾತ್ರಿ ಹೊತ್ತು, ಬಂದೂಕಗಳ ಸಹಿತ ಗೂಂಡಾಗಳು ಇವರನ್ನು ಕೊಂಡು ಹೋಗಿ ಕಾಡಿನ ಮಧ್ಯದಲ್ಲಿ ಬಿಟ್ಟರು. ಸದ್ರಿ ಎಸ್ಟೇಟಿನಲ್ಲೇ ದುಡಿಯುವ ಐತ್ತ ಮತ್ತು ಪಿರೇರಾ ಎಂಬ ಕಾರ್ಮಿಕರನ್ನೂ ಟ್ರೇಡ್ ಯೂನಿಯನ್ ಕಾರ್ಯಕರ್ತರೊಡನೆ ಸಹಕರಿಸಿದ್ದಕ್ಕೆ, ಖಾಲೀ ಕಾಗದದ ಮೇಲೆ ಸಹಿ ಹಾಕಿಸಿ, ಕಟ್ಟಿಹಾಕಿ ಹೊಡೆದು ಬಂಧನದಲ್ಲೇ (ಈ ರಿಪೋರ್ಟು ಬರೆಯುವ ತನಕ) ಇಟ್ಟಿರುತ್ತಾರೆ.

ಈ ಬಗ್ಗೆ ಶ್ರೀ ಎ.ಕೆ. ವಿಶ್ವನಾಥರವರು ಮೂಡಿಗೆರೆ ಪೋಲೀಸ್ ಸಬ್ ಇನ್ ಸ್ಪೆಕ್ಟರ್ ರವರಿಗೂ ದೂರಿತ್ತಿದ್ದಾರೆ. ಕರ್ನಾಟಕ ಪ್ರೊವಿನ್ಶಿಯಲ್ ಪ್ಲಾಂಟೀಶನ್ ವರ್ಕರ್ಸ್ ಯೂನಿಯನ್ ಚಿಕ್ಕಮಗಳೂರು ಜಿಲ್ಲಾ ಪೋಲೀಸ್ ಅಧಿಕಾರಿಗಳಿಗೂ ಕಂಪ್ಲೇಂಟ್ ಮಾಡಿದೆ.

ಇನ್ನು ಪೋಲೀಸ್ ಇಲಾಖೆ ಯಾವ ನೀತಿಯನ್ನು ಅನುಸರಿಸುತ್ತಾರೆಂದು ಕಾದು ನೋಡಬೇಕಾಗಿದೆ.

ತುಮುಕೂರು

ಮುನಿಸಿಪಲ್ ಕೆಲಸಗಾರರ ಸಂಘ ಮುರಿಯುವ ಹಂಚಿಕೆ

ತುಮುಕೂರು ಮುನಿಸಿಪಲ್ ಕೆಲಸಗಾರರ ಸಂಘವು ಹಲವಾರು ತಿಂಗಳುಗಳಿಂದ ಕೆಲಸಗಾರರಿಗೆ ಬರಬೇಕಾದ ಹೊಸ ಸ್ಕೇಲ್ ಸಂಬಳವನ್ನು ಜಾರಿಗೆ ತರಬೇಕೆಂದು ಪುರಸಭೆಯನ್ನು ಒತ್ತಾಯಿಸುತ್ತಲಿದ್ದುದರಿಂದ, ತಾರೀಖು 18-9-57 ರಲ್ಲಿ ಪುರಸಭೆಯು ಕೆಲಸಗಾರರಿಗೆ ಹೊಸ ಸ್ಕೇಲ್ ಸಂಬಳ ಕೊಡಬಹುದೆಂದು ತೀರ್ಮಾನಿಸಿ ಸರ್ಕಾರದ ಒಪ್ಪಿಗೆಗೆ ಕಳುಹಿಸಿ ಕೊಟ್ಟಿತು. ಆದರೆ ಇದುವರೆಗೂ ಸರ್ಕಾರದ ಒಪ್ಪಿಗೆ ಸಿಗದೇ ನೌಕರರ ಸಹನೆಯನ್ನು ಮೀರಿಸುತ್ತಲಿದೆ. ಈ ಸಂಬಂಧವಾಗಿ ಹಿಂದೆ ಅಂದರೆ ಪುರಸಭೆಯ ತೀರ್ಮಾನವಾದನಂತರ ಸಚಿವ ಶ್ರೀ ಚನ್ನಿಗರಾಮಯ್ಯನವರು ಇಲ್ಲಿಗೆ ಬಂದಿದ್ದಾಗ್ಯೆ ಸಂಘದ ಅಧ್ಯಕ್ಷರೂ ಮತ್ತು ಕಾರ್ಯದರ್ಶಿಗಳು ಸಚಿವರನ್ನು ಭೇಟಿ ಮಾಡಿ ಒಂದು ಮನವಿಯನ್ನು ಸಹ ಕೊಟ್ಟಿದ್ದರು. ಆಗ್ಗೆ ಸಚಿವರು ಆದಷ್ಟು ಜಾಗ್ರತೆ ಸರ್ಕಾರದಿಂದ ಸಮ್ಮತಿಯನ್ನು ಕಳುಹಿಸಿ ಕೊಡುವುದಾಗಿ ಭರವಸೆ ಕೊಟ್ಟರು. ಆದರೆ ಇದುವರೆವಿಗೂ ಏನೂ ಆಗಿಲ್ಲ. ಸಚಿವ ಚನ್ನಿಗರಾಮಯ್ಯನವರು ಆಗಮಿಸಿದ್ದಾಗ ಪುನಃ ಸಂಘದವರು ತಮ್ಮ ಬೇಡಿಕೆಗಳನ್ನು ಜಾಗ್ರತೆ ಈಡೇರಿಸಿಕೊಡುವಂತೆ ಕೇಳಲು ಹೋಗಿದ್ದರು. ಆದರೆ ಸಚಿವರು ಸಂಘದ ಕಾರ್ಯದರ್ಶಿಯೊಡನೆ ಮಾತನಾಡುವಷ್ಟು ಸಹನೆಯನ್ನು ತೋರಿಸದೆ, ನಿಮಗೆ ಹೊಸ ಸ್ಕೇಲ್ ತೆಗೆದುಕೊಳ್ಳುವ ಇಷ್ಟವಿದ್ದಲ್ಲಿ ನನ್ನೊಡನೆಯೋ, ಅಥವಾ ಪುರಸಭೆಯ ಅಧ್ಯಕ್ಷರೊಡನೆಯೋ ಬಂದು ದೈನ್ಯತೆಯಿಂದ ಕೇಳಿಕೊಂಡಲ್ಲಿ ಮಾತ್ರ ನಿಮಗೆ ಹೊಸ ಸ್ಕೇಲ್ ಸಂಬಳ ಸಿಕ್ಕೀತೆ ವಿನಃ, ಹಾಗಲ್ಲದೇ ನೀವುಗಳು ಸಂಘ ಕಟ್ಟಿಕೊಂಡು, ಸಂಘದ ಮುಖಾಂತರ ನಮ್ಮೊಡನೇ ವ್ಯವಹರಿಸಿದಲ್ಲಿ ನಿಮ್ಮ ಯಾವ ಬೇಡಿಕೆಗಳನ್ನೂ ಸಹ ಈಡೇರಿಸಿ ಕೊಳ್ಳಲಾರಿರಿ. ಎಂದು ನೌಕರರುಗಳನ್ನು ಬೆದರಿಸಿ ಮಾತನಾಡಿದರು. ಮತ್ತು ಅಲ್ಲೇ ಇದ್ದ ಪುರಸಭಾಧ್ಯಕ್ಷರೂ ಸಹ ನೌಕರರನ್ನುದ್ದೇಶಿಸಿ, ನೀವುಗಳು ಸಚಿವರಿಂದಲೇ ಸಂಬಳವನ್ನು ತೆಗೆದುಕೊಳ್ಳತಕ್ಕದೆಂದೂ, ಈ ಸಂಬಂಧವಾಗಿ ನನ್ನೊಡನೇ ವ್ಯವಹರಿಸಬಾರದೆಂಬ ಅಧಿಕ ಪ್ರಸಂಗದ ಬೆದರಿಕೆಯನ್ನು ಸಚಿವರ ಎದುರಿನಲ್ಲಿಯೇ ಹಾಕಿದ್ದಾರೆ. ಅಲ್ಲದೇ ಇವರ ಚೇಲಾಗಳಾದ ಕೆಲವು ಪುರಸಭಾ ಸದಸ್ಯರುಗಳು, ನೌಕರರು ಸಂಘ ಬಿಟ್ಟಲ್ಲಿ ನಾಳೆಯೇ ಹೊಸ ಸ್ಕೇಲ್ ಸಂಬಳ ಕೊಡಿಸಿಕೊಡುವುದಾಗಿ ಜಂಭ ಕೊಚ್ಚಿ ಕೊಳ್ಳುತ್ತಲಿದ್ದಾರೆ.

ಸಂಘದ ಹೋರಾಟದ ಫಲವಾಗಿ ಹೊಸ ಸ್ಕೇಲ್ ಸಂಬಳವನ್ನು ಕೊಡಬಹುದೆಂದು ಪುರಸಭಾಧಿವೇಶನದಲ್ಲಿ ಮಂಜೂರಾಗಿರುವುದರಿಂದ, ಈ ಸಂದರ್ಭವನ್ನು ಸಂಘ ಮುರಿಯಲು ಮುನಿಸಿಪಲ್ ಅಧ್ಯಕ್ಷರೂ ಮತ್ತು ಕೆಲವು ಸದಸ್ಯರುಗಳು ಉಪಯೋಗಿಸಿಕೊಂಡು ಸಂಘ ಬಿಟ್ಟಲ್ಲಿ ಆದಷ್ಟು ಜಾಗ್ರತೆ ಹೊಸ ಸ್ಕೇಲ್ ಸಂಬಳ ಕೊಡಿಸುವರೆಂದು ಹೇಳುತ್ತಾ, ಸಂಘದಲ್ಲಿ ಒಡಕನ್ನುಂಟು ಮಾಡುವ ಹೇಯ ಕೃತ್ಯವನ್ನು ಮಾಡುತ್ತಲಿದ್ದಾರೆ. ಸಂಘಕ್ಕಾಗಿ ನಿಷ್ಠೆಯಿಂದ ದುಡಿಯುವ ಕೆಲವು ಸದಸ್ಯರುಗಳಿಗೆ ಸಂಘವನ್ನು ಬಿಟ್ಟಲ್ಲಿ ಲಂಚ ಕೊಡುವುದಾಗಿ ಆಸೆ ಹುಟ್ಟಿಸಲು ಹೋಗಿ ನಗೆಗೀಡಾಗಿದ್ದಾರೆ. ಮತ್ತು ನೌಕರರ ಕಾಲೊನಿಗೆ ಹೋಗಿ ಪೋಲಿಸರ ಸಹಾಯದಿಂದ ಹೆದರಿಕೆ ಬೆದರಿಕೆಗಳನ್ನು ಹಾಕುತ್ತಲಿದ್ದಾರೆ. ಆದರೆ ನೌಕರರು ಧೃತಿಗೆಡದೇ ಒಗ್ಗಟ್ಟಿನಿಂದ ಈ ಬಗಲು ಬಚ್ಚಾಗಳಿಗೆ ಸರಿಯಾದ ಉತ್ತರವನ್ನು ಕೊಡುತ್ತಲಿದ್ದಾರೆ. ತಮ್ಮ ಬೆನ್ನೆಲುಬಿನಂತಿರುವ ಸಂಘವನ್ನು ಇನ್ನೂ ಹೆಚ್ಚು ದೃಢವಾಗಿ ನಿಲ್ಲುವಂತೆ ಒಗ್ಗಟ್ಟಿನಿಂದ ಇದ್ದು ತಮ್ಮ ಹೋರಾಟದಿಂದಲೇ ಮಾತ್ರ ಪ್ರತಿಯೊಂದು ಬೇಡಿಕೆಗಳನ್ನೂ ಈಡೇರಿಸಿಕೊಳ್ಳಲು ಸಾಧ್ಯವೆಂಬ ನಂಬಿಕೆಯೊಡನೆ ಮುನ್ನಡೆಯುತ್ತಲಿದ್ದಾರೆ.

ನಗರದ ಮೇಯರ್ ಚುನಾವಣೆ

ಬೆಂಗಳೂರು ನಗರದ ಮೇಯರರಾಗಿ ಕಾಂಗ್ರೆಸ್ ಪಕ್ಷದ ಶ್ರೀ ರಾಮಚಂದ್ರರು 45 ಮತಗಳನ್ನು ಪಡೆದು ಚುನಾಯಿತರಾದರು. ಸಯುಕ್ತ ನಾಗರಿಕ ಪಕ್ಷದ ಸ್ಪರ್ಧಿ ಶ್ರೀ ನಂಜಪ್ಪನವರಿಗೆ 28 ಮತಗಳು ದೊರಕಿದುವು. ಉಪಮೇಯರ್ ಚುನಾವಣೆಯಲ್ಲೂ ಸಯುಕ್ತನಾಗರಿಕ ಪಕ್ಷದ ಶ್ರೀ ಪಿ ಎನ್. ನಾರಾಯಣ್‌ರವರು 31 ಮತಗಳನ್ನು ಪಡೆದು ಸೋತರು. ಕಾಂಗ್ರೆಸ್ ಸ್ಪರ್ಧಿ ಶ್ರೀಮತಿ ಶಾರದಾರವರು 42 ಮತಗಳನ್ನು ಗಳಿಸಿ ವಿಜೇತರಾದರು.

ಕಾರ್ಪೊರೇಷನಿನಲ್ಲಿ ಕಾಂಗ್ರೆಸ್ಸಿನ ಬಲ 42 ಆದರೂ ಕಾಂಗ್ರೆಸ್ಸಿಗೆ 45 ಮತಗಳು ದೊರಕಿವೆ. ವಿರೋಧ ಪಕ್ಷಗಳಲ್ಲಿ ಕೆಲವರು ಹೆಸರಿಗೆ ಮಾತ್ರ ವಿರೋಧ ಪಕ್ಷೀಯರಾಗಿದ್ದು ಕಾಂಗ್ರೆಸ್ಸಿಗೆ ಬೆಂಬಲವೀಯುವರಾಗಿದ್ದಾರೆಂದೂ ಇದರಿಂದ ತಿಳಿಯುತ್ತದೆ. ಇಂಥವರು ಮತದಾರರಿಗೆ ಏನೂ ಭರವಸೆ ಇತ್ತರೂ ಅದು ಮೃಗಮರೀಚಿಕೆಯೆಂದು ಈಗಾಗಲೇ ಬೆಳಕಿಗೆ ಬಂದಿದೆ. ಕಾಂಗ್ರೆಸ್ಸಂತೂ ಭರವಸೆ ಈಯುವುದು ಅವುಗಳನ್ನು ಕಾರ್ಯಗತಗೊಳಿಸಲಿಕ್ಕಲ್ಲ, ಎಂಬುದನ್ನು ಇಷ್ಟು ವರುಷಗಳಲ್ಲಿ ತೋರಿಸಿ ಕೊಟ್ಟಿದೆ. ನಗರದ ನಾಗರಿಕರು ಕಾಂಗ್ರೆಸ್ಸಿನ ಈ ಕೃತಘ್ನ ನೀತಿಯ ವಿರುದ್ಧವಾಗಿ ಕಾಂಗ್ರೆಸ್ ವಿರೋಧಿಗಳಿಗೆ ಮತವಿತ್ತರೂ, ಈ ಭಾರಿಯೂ ಕಾಂಗ್ರೆಸ್ ಕಾರ್ಪೊರೇಷನ್ ಅಳ್ವಿಕೆಯನ್ನು ಹೊಂದುವಂತಾಗಿದೆ.

ಇಂಥಾ ಸಂದರ್ಭದಲ್ಲಿ ಮತದಾರರ ಹಿತವನ್ನು ಗಮನಿಸಿ, ನಗರದ ನೈರ್ಮಲ್ಯ ನೀರು, ತೆರಿಗೆ ಮೊದಲಾದ ಸಮಸ್ಯೆಗಳ ಪರಿಹಾರಕ್ಕಾಗಿ ಕಾಂಗ್ರೆಸಿಗೆದುರಾಗಿ ವಿರೋಧ ಪಕ್ಷೀಯರೆಲ್ಲಾ ಒಂದಾಗಿ ಹೋರಾಡುವುದು ಅತ್ಯಾವಶ್ಯ.

(೧೦ನೇ ಪುಟ ನೋಡಿ)

....ಮನೆ ಮುರಿದ ಮಗ....

(೬ನೇ ಪುಟದಿಂದ)

(ಪಾರ್ವತಮ್ಮ ಅದಕ್ಕೆ ಕಿವಿಗೊಡದೆ, ಹಿಂತಿರುಗಿ ನೋಡದೆ, ಅಳುತ್ತ ಹೋಗುತ್ತಾಳೆ.)

(ಗೋಪಿ ಪಕ್ಕನೆ ಪ್ರವೇಶಿಸುತ್ತಾಳೆ.)

ಗೋಪಿ: (ಆಗ್ರಹದಿಂದ ಬೇಡಿಕೊಳ್ಳುವ ಧಾಟಿಯಲ್ಲಿ) ಊಟ ಮಾಡ್ಕೊಂಡು ಹೋಗ್ರಿ, ಅತ್ತೇ!

ಪಾರ್ವತಮ್ಮ: (ಹಿಂತಿರುಗಿ ನೋಡದೆ ಮುಂದೆ ನಡೆಯುತ್ತ) ಬೇಡ ಮಗಳೇ! ನನ್ ಮಗನ ಮಾತಿನಲ್ಲೇ ನನ್ನ ಹಸಿವು ಆರೋಯ್ತು!

ಗೋಪಿ: ನೀವು ತಂದಿದ್ದ ಬುಟ್ಟೀನಾದೂ ತಗೊಂಡೋಗಿ ಅತ್ತೇ!

(ಪಾರ್ವತಮ್ಮ ಅದಕ್ಕೂ ಗಮನ ಕೊಡದೆ ಹೋಗುತ್ತಾಳೆ. ರಾಮಪ್ಪ ಕಂಬದಂತೆ ನಿಂತು ಅವಳು ಹೋಗುವುದನ್ನೆ ನೋಡುತ್ತಾನೆ. ಅವಳು ಮರೆಯಾಗುತ್ತಾಳೆ. ಗೋಪಿಯ ಮುಖದಲ್ಲಿ ವ್ಯಸನ ತೋರುತ್ತದೆ. ಸೆರಗಿನಿಂದ ಕಣ್ಣೀರು ಒರಸಿಕೊಳ್ಳುತ್ತಾಳೆ)

ರಾಮಪ್ಪ: ಹುಂ! ಏನೇ ಅದು ಬುಟ್ಟಿ?

ಗೋಪಿ: ಅತ್ತೆ ಎಂಟು-ಹತ್ತು ಮಾವಿನ ಹಣ್ಣು ತಂದಿದ್ರು—! ನಿಮ್ಗೆ ಮಾವಿನ ಹಣ್ಣೆಂದ್ರೆ ಜೀವಾಂತಂದ್ರು!

ರಾಮಪ್ಪ: ಹುಂ! ಮಾವಿನ ಹಣ್ಣು ತಂದಿದಾಳೆ! (ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾನೆ)

(ಗೋಪಿ ಬಿಕ್ಕಿ ಬಿಕ್ಕಿ ಅಳುತ್ತ ಒಳಗೆ ಹೋಗುತ್ತಾಳೆ).

— ತೆರೆ —

(ಮುಂದುವರಿಯುವುದು)

ಜಗತ್ತು ಇಂದು ಸಮಾಜವಾದದತ್ತ ಪರಿವರ್ತನೆಯಾಗುತ್ತಿದೆ

ಅಜಯ ಘೋಷ್

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಶಾಂತಿ ಬಗ್ಗೆ ಆಸ್ಥೆ ಮತ್ತು ಘೋಷಣೆ

ವೈಜ್ಞಾನಿಕ ಸಮಾಜವಾದದ ಸಂಸ್ಥಾಪಕರಾದ ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ಇಂದಿಗೆ ನೂರು ವರುಷಗಳ ಹಿಂದೆ 1848ರಲ್ಲೇ ಬರೆದ ತಮ್ಮ ಕಮ್ಯೂನಿಸ್ಟ್ ಘೋಷಣೆಯಲ್ಲೇ ತಿಳಿಸಿದ್ದಾರೆ:

"ವಿಭಿನ್ನ ದೇಶಗಳ ದುಡಿಯುವ ವರ್ಗದ ರಾಷ್ಟ್ರೀಯ ಹೋರಾಟಗಳಲ್ಲಿ ಅವರ ಸಮಾನ ಹಿತಗಳನ್ನು ಕಮ್ಯೂನಿಸ್ಟರು ರಕ್ಷಿಸುತ್ತಾರೆ. ಅದನ್ನು ಸ್ಪಷ್ಟಗೊಳಿಸುವುದರ ಜೊತೆಗೆ ಎಲ್ಲಕ್ಕಿಂತ ಮೇಲಾಗಿ ಪರಿಗಣಿಸುತ್ತಾರೆ. ರಾಷ್ಟ್ರೀಯತೆಯ ಪ್ರಶ್ನೆಯಿಂದ ಭಿನ್ನವಾಗಿ ಈ ಸಮಸ್ಯೆಯನ್ನು ನೋಡುತ್ತಾರೆ"

61 ರಾಷ್ಟ್ರಗಳ ಕಮ್ಯೂನಿಸ್ಟ್ ನಾಯಕರ ಸಮ್ಮೇಳನವು ಅತ್ಯಧಿಕ ಮಹತ್ವಪೂರ್ಣವಾದುದಾಗಿತ್ತು. ಅದರಲ್ಲಿ ವರ್ತಮಾನ ಅಂತರರಾಷ್ಟ್ರೀಯ ಪರಿಸ್ಥಿತಿಗಳ ಬಗ್ಗೆ ದೀರ್ಘ ಚರ್ಚೆಯು ನಡೆಯಿತು. ಕಮ್ಯೂನಿಸ್ಟ್ ಪಾರ್ಟಿಗಳಲ್ಲಿ ಅಷ್ಟೊಂದು ಮಹತ್ವಪೂರ್ಣವಾದ ಸಮ್ಮೇಳನ ಇದುವರೆಗೆ ಎಂದೂ ನಡೆದುದಿಲ್ಲ. ಶಾಂತಿರಕ್ಷಣೆಯ ಬಗ್ಗೆ ಸಂಯುಕ್ತ ಕಾರ್ಯಕ್ರಮಗಳನ್ನು ಕೈಕೊಳ್ಳುವುದರ ಬಗ್ಗೆಯೂ ಸಮ್ಮೇಳನದಲ್ಲಿ ನಿರ್ಣಯಿಸಲಾಯಿತು. ಶಾಂತಿಯ ಪ್ರಶ್ನೆ ಇಂದು ಜಗತ್ತಿನಲ್ಲಿ ಇತರೆಲ್ಲಾ ಪ್ರಶ್ನೆಗಳಿಗಿಂತಲೂ ಮಿಗಿಲಾಗಿಯೂ, ಮಹತ್ವಪೂರ್ಣವಾದುದೆಂದೂ ಸಮ್ಮೇಳನದ ಘೋಷಣಾಪತ್ರದಲ್ಲಿ ತಿಳಿಸಲಾಗಿದೆ.

64 ದೇಶಗಳ ಕಮ್ಯೂನಿಸ್ಟ್ ಪಾರ್ಟಿಗಳ ಸಮ್ಮೇಳನದಲ್ಲಿ ಅಂಗೀಕರಿಸಲಾದ ಘೋಷಣಾಪತ್ರ ಮಹತ್ವಪೂರ್ಣವಾದ ಹೇಳಿಕೆಯಾಗಿದೆ. ಅದು ಒಂದೇ ರೀತಿಯಾದ ವಿಶ್ವವ್ಯಾಪಿ ಚಳುವಳಿಗಳಲ್ಲಿ ತನ್ನದೇ ಆದ ಐತಿಹಾಸಿಕ ಕಾರ್ಯ ನಿರ್ವಹಿಸಲಿದೆ.

ಘೋಷಣಾಪತ್ರದಲ್ಲಿ ಕೇವಲ ಶಾಂತಿಯ ಬಗ್ಗೆ ನಮಗಿರುವ ಅಭಿಲಾಷೆಯನ್ನಷ್ಟೇ ವ್ಯಕ್ತಪಡಿಸಿದ್ದಲ್ಲ, "ಶಾಂತಿಯನ್ನು ರಕ್ಷಿಸಲು ಸಾಧ್ಯವಿದೆ" ಎಂಬ ಆತ್ಮ ವಿಶ್ವಾಸದಿಂದ ತುಂಬಿದ ಅನುಭವಿ ಸಿದ್ಧಾಂತವೂ ಇದೆ. ವಿಭಿನ್ನ ರಾಜಕೀಯ ಸಂಬಂಧಗಳ ಬಗ್ಗೆಯಾಗಲೀ, ದೇಶಗಳ ಬಗ್ಗೆಯಾಗಲಿ ಯೋಚಿಸದೆ ಕೇವಲ ಶಾಂತಿಪ್ರಿಯರಾದವರನ್ನೆಲ್ಲಾ ಒಂದು ಸೇರಿಸುವ ಮಹಾನ್ ಕರ್ತವ್ಯವನ್ನು ಘೋಷಣಾಪತ್ರ ವ್ಯಕ್ತಗೊಳಿಸುತ್ತದೆ. ಇದರಿಂದಾಗಿ ಇಂದು ಪ್ರತಿಯೊಂದು ಕಮ್ಯೂನಿಸ್ಟ್ ಪಾರ್ಟಿಯೂ—ತನ್ನ ಪವಿತ್ರ ಕರ್ತವ್ಯದ ದೃಷ್ಟಿಯಿಂದ—ಘೋಷಣಾಪತ್ರದ ಆಧಾರದ ಮೇಲೆ ಅಧಿಕಾಧಿಕ ವ್ಯಾಪಕವಾದ ಚಳುವಳಿಯನ್ನು ಕಟ್ಟಬೇಕಾಗಿದೆ.

ಪ್ರಥಮದಲ್ಲಿ 12 ಕಮ್ಯೂನಿಸ್ಟ್ ದೇಶಗಳು ಹೊರಡಿಸಿದ ಘೋಷಣಾಪತ್ರವನ್ನು ಸ್ವಾಗತಿಸುತ್ತಾ ಅವು ಮಾರ್ಕ್ಸ್‌ವಾದ—ಲೆನಿನ್‌ವಾದದ ಸೃಜನಾತ್ಮಕ ವಿಕಾಸದ ಸ್ವರೂಪವೆಂದು ಇತರ ಎಲ್ಲಾ ಕಮ್ಯೂನಿಸ್ಟ್ ಪಾರ್ಟಿಗಳೂ ಅಭಿಪ್ರಾಯ ವ್ಯಕ್ತಪಡಿಸಿದ್ದುವು. 12 ರಾಷ್ಟ್ರಗಳು ಹೊರಡಿಸಿದ ಘೋಷಣಾಪತ್ರದಲ್ಲಿ ವಿಶ್ವಕಮ್ಯೂನಿಸ್ಟ್ ಚಳುವಳಿಯ ಸಾಮೂಹಿಕ ಮೂಲ ತತ್ವ ವ್ಯಕ್ತವಾಗುತ್ತದೆ. ಇಂದು ಹಲವು ಕಡೆ ಹರಡಿಕೊಂಡಿರುವ ಭ್ರಮೆಯ ಬಗ್ಗೆ ಸವಿಸ್ತಾರವಾಗಿ ದೃಷ್ಟಿ ಹರಿಸಲಾಗಿದೆ. ಘೋಷಣಾಪತ್ರವು ಮುಂದಿನ ಗುರಿಯನ್ನೂ ವ್ಯಕ್ತಗೊಳಿಸುತ್ತದೆ, ಕಾರ್ಮಿಕವರ್ಗ ಮತ್ತು ಅದರ ನಾಯಕ ಕಮ್ಯೂನಿಸ್ಟ್ ಪಾರ್ಟಿಯನ್ನು ಅತ್ಯಂತ ಶಕ್ತಿಶಾಲಿಯಾದ ಹೊಸ ಶಸ್ತ್ರದಿಂದ ಸಜ್ಜಿತಗೊಳಿಸುತ್ತದೆ.

ಅವಸರವಾದದ ವಿರುದ್ಧ ಹೋರಾಟ

ಸೋವಿಯತ್ ಕಮ್ಯೂನಿಸ್ಟ್ ಪಾರ್ಟಿಯು ತನ್ನ ಅಮೂಲ್ಯ ಕಾಲಾವಕಾಶದಲ್ಲಿ ಸಾಧಿಸಿದ ಮಹತ್ವಪೂರ್ಣ ಸಾಫಲ್ಯಾಂಶಗಳೇ ಅದರ ಆಧಾರವಾಗಿವೆ. ಘೋಷಣೆಯು ಆ ಪಾರ್ಟಿಯ ಸ್ಥಾಪನಾ ಸಮ್ಮೇಳನಗಳ ಆಧಾರವುಳ್ಳದ್ದಾಗಿದೆ. ಇದರಿಂದಾಗಿಯೇ ಘೋಷಣೆಯಲ್ಲಿ ಅವಸರವಾದಿತನದ ಮೇಲೆ ಸಂಪೂರ್ಣ ಹೊಡೆತ ಬೀಳುತ್ತದೆ. ಎಲ್ಲಾ ದೇಶ-ಕಾಲಗಳಿಗೂ ಅನ್ವಯವಾಗುವಂಥಾ ಸಮಾಜವಾದೀ ಪದ್ಧತಿಯನ್ನು ಘೋಷಣೆಯು ಪುನಃ ಪುಷ್ಟೀಕರಿಸುತ್ತದೆ. ದೇಶ-ದೇಶಗಳ ಮೇರೆಗಳನ್ನು ಮೀರಿನಿಂತ, ಬಂಡವಾಳಶಾಹೀ ಪದ್ಧತಿಯ ವಿನಾಶವನ್ನು ಶಾಂತಿಯುತ ಮಾರ್ಗಗಳಿಂದ ಸಾಧಿಸುವ ಮತ್ತು ಸಮಾಜವಾದೀ ವ್ಯವಸ್ಥೆಯನ್ನು ಬಲಪಡಿಸುವುದರ ಬಗ್ಗೆ ಘೋಷಣೆಯು ಮಹತ್ವನೀಡಿದೆ.

ಘೋಷಣೆಯಲ್ಲಿ ಸೂಚಿಸಲಾಗಿರುವ ಅಂಶಗಳು ಎಲ್ಲಾ ಕಮ್ಯೂನಿಸ್ಟ್ ಪಾರ್ಟಿಗಳಿಗೂ ಅತಿ ಮಹತ್ವದ್ದಾಗಿದೆ. ಇಂದು ಮಾರ್ಕ್ಸ್‌ವಾದಿ--ಲೆನಿನ್‌ವಾದಿ ಸಿದ್ಧಾಂತಗಳಲ್ಲಿ ಸಂಶೋಧನಾ ಪ್ರವೃತ್ತಿಗಳು ಹುಟ್ಟಿಕೊಂಡಿವೆ. ಅದಕ್ಕೆ ಯಾವ ವರ್ಗ ಕಾರಣ? ಯಾವ ಯಾವ ಆಂತರಿಕ ಮತ್ತು ಬಾಹ್ಯ ಶಕ್ತಿಗಳು ಕಾರಣ? ಅದು ಬೆಳೆಯಲು ಯಾವ ಪರಿಸ್ಥಿತಿ ಕಾರಣ? ಇವೆಲ್ಲದರ ಬಗ್ಗೆಯೂ ಘೋಷಣೆಯಲ್ಲಿ ಸವಿಸ್ತಾರ ವಿವರಣೆಗಳಿರುವುದೇ ಅಲ್ಲದೆ, ಈ ಅವಸರವಾದಿತನ ಮತ್ತು ಸಂಶೋಧನಾ ಪ್ರವೃತ್ತಿಯ ಪ್ರಯತ್ನಗಳ ವಿರುದ್ಧ ಬಲವಾದ ಸಂಘರ್ಷ ನಡೆಸಲು ಸೂಚಿಸಲಾಗಿದೆ.

ಇಂದಿನ ಅಂತರರಾಷ್ಟ್ರೀಯ ಕ್ಷೇತ್ರದಲ್ಲಾದ ನಿರ್ಣಾಯಕ ಪರಿವರ್ತನೆಯಿಂದಲೂ, ಜಗತ್ತಿನ ಕಾರ್ಮಿಕ ವರ್ಗದಲ್ಲಿ ಹಾಗೂ ಪ್ರಗತಿಶೀಲ ವಿಭಾಗದಲ್ಲಿ ಸಾಮ್ರಾಜ್ಯಶಾಹಿಯ ವಿರುದ್ಧ ಬೆಳೆದು ಬಂದಿರುವ ವಿರೋಧಿ ಭಾವನೆಯೂ--ಇವುಗಳೆಲ್ಲದರ ಪರಿಣಾಮವಾಗಿ ವಿವಿಧ ದೇಶಗಳಲ್ಲಿ ಹುಟ್ಟಿಕೊಂಡಿರುವ ಪರಿಸ್ಥಿತಿಗಳಿಂದಾಗಿ--ಜಗತ್ತಿನಲ್ಲಿ ಇಂದು "ಶಾಂತಿಯುತ ರೀತಿ"ಯಲ್ಲಿ ಸಮಾಜವಾದಿ ವಿಜಯವು ಸಂಭವನೀಯವೆಂದು ಸಿದ್ಧವಾಗಿದೆ. ಆ ಶಾಂತಿಯುತ ರೀತಿಯು ಕಳೆದ ಕಾಲಘಟಗಳಲ್ಲಿ ನಡೆದ ಸಮಾಜವಾದೀ ಕ್ರಾಂತಿಗಳಿಂದ ಹಲವು ರೀತಿಯಲ್ಲಿ ಭಿನ್ನವಾಗಿರುವುದು. ಆದರೆ ಮುಖ್ಯವಾದ ಅಂಶವೆಂದರೆ ಎಲ್ಲಾ ಕಮ್ಯೂನಿಸ್ಟ್ ಪಾರ್ಟಿಗಳೂ ಈ ಸಂಭವನೀಯ ವಿಷಯದ ಬಗ್ಗೆ ತಮ್ಮ ಶಕ್ತಿಮೀರಿ ದುಡಿಯಬೇಕಾಗಿದೆ.

ಇದೇ ಸಮಯದಲ್ಲಿ ಈ ಧೋರಣೆಗಳನ್ನು ಸಮಾಜವಾದೀ ಪದ್ಧತಿಯ ಶತ್ರುಗಳೂ, ಕಾರ್ಮಿಕ ವರ್ಗವನ್ನು ಕ್ರಾಂತಿಕಾರೀ ಧ್ಯೇಯದಿಂದ ವಿಚಲಿತಗೊಳಿಸುವ ದುಷ್ಟಶಕ್ತಿಗಳೂ ಉಪಯೋಗಿಸಿಕೊಳ್ಳುತ್ತವೆನ್ನುವುದನ್ನೂ ನಾವು ಮರೆಯಲು ಸಾಧ್ಯವಿಲ್ಲ. ಅವರು ಹೇಳುತ್ತಿರುವುದು; ಇಂದು ಮಾರ್ಕ್ಸ್‌ವಾದೀ ಲೆನಿನ್‌ವಾದೀ ಮೂಲಭೂತ ತತ್ವಗಳು ಹಳೆಯದಾಗಿವೆ. ಮುಂದೆ ಸಮಾಜವಾದೀ ಪರಿವರ್ತನೆ ಸ್ವಾಭಾವಿಕ ವಿಕಾಸ ಕ್ರಮದಲ್ಲೇ ನಡೆಯುತ್ತದೆ. ಅದಕ್ಕಾಗಿ ಯಾವ ದ್ವಂದ್ವಾತ್ಮಕ ಘರ್ಷಣೆಗೂ ಅವಕಾಶ ಇಲ್ಲ, ಯಾವ ಸಂಕಟ ಪರಿಸ್ಥಿತಿಗೂ ಎಡೆಯಿಲ್ಲ ಎಂದು. ಇದಕ್ಕಾಗಿಯೇ ಅವರು ಬಂಡವಾಳಶಾಹೀ ಜನತಂತ್ರ ಕ್ರಮವನ್ನೂ, ಪಾರ್ಲಿಮೆಂಟ್ ಕ್ರಮವನ್ನೂ ಎತ್ತೆತ್ತಿ ಹೊಗಳುತ್ತಾರೆ.

ಈ ವಿಚಾರಧಾರೆಗೆ ಗುರಿಯಾಗುವ ಅಥವಾ ಅದರ ವಿರುದ್ಧ ನಿರಂತರ ಸಂಘರ್ಷ ನಡೆಸಲಾರದ ಕಮ್ಯೂನಿಸ್ಟ್ ಪಾರ್ಟಿಗಳು ಒಂದು ರೀತಿಯಿಂದ ಬಂಡವಾಳಶಾಹೀ ವರ್ಗದ ಉದ್ದೇಶಗಳಿಗೆ ಲಾಭ ಒದಗಿಸಿದಂತೆ ಎಂದರೆ ತಪ್ಪಲ್ಲ. ಇದರಿಂದ ಜನತೆಯ ಚಳುವಳಿ ಕುಗ್ಗುವುದಕ್ಕೂ, ಬಲಹೀನವಾಗುವುದಕ್ಕೂ ಅವಕಾಶವಾಗುತ್ತದೆ.

ಎಡಪಂಥವಾದಿಗಳು ಮಾರ್ಕ್ಸ್‌ವಾದೀ—ಲೆನಿನ್‌ವಾದೀ ಮೂಲಭೂತ ಸಿದ್ಧಾಂತಗಳ ವಿರುದ್ಧ ಬಹಿರಂಗವಾಗಿ ಪ್ರಕಟವಾಗುವುದಿಲ್ಲವೆಂಬ ಅಂಶವನ್ನೂ ನಾವು ನೆನಪಿನಲ್ಲಿ ಇಡತಕ್ಕದ್ದು.

ಅವರು ಅಸ್ಪಷ್ಟವಾದ ತಂತ್ರಗಳಿಂದ ಕೂಡಿದ ಧಾಳಿಯನ್ನು ನಡೆಸುತ್ತಾರೆ. ಅವರ ಈ ತಂತ್ರಗಳು ಸ್ಪಷ್ಟವಾಗಿ ಗೋಚರವಾಗುವ ಕ್ಷೇತ್ರವೆಂದರೆ ಚಳುವಳಿಗಳು, ಜನವಾದಿ ಸಂಘಟನೆಗಳು, ಅದೇ ರೀತಿಯ ಇತರ ಅಭ್ಯಾಸಗಳು, ಜೀವನದ ದೈನಂದಿನ ಚಟುವಟಿಕೆಗಳು. ಇವುಗಳಲ್ಲಿ ಅವರ ಸ್ವರೂಪದ ಸ್ಪಷ್ಟ ಚಿತ್ರವು ಗೋಚರಿಸುತ್ತದೆ. ಇದಕ್ಕಾಗಿಯೇ, ಮೊದಲು ವಿವಿಧ ದೇಶಗಳಲ್ಲಿ ಎಡಪಂಥವಾದಿಗಳ ಸ್ಪಷ್ಟವಾದ ವಿಶೇಷ ಸ್ವರೂಪವನ್ನು ಕಂಡುಹಿಡಿದ ನಂತರವೇ, ಅದರ ವಿರುದ್ಧ ನಿರ್ಣಾಯಕ ಹೋರಾಟವನ್ನು ನಡೆಸಲು ಸಾಧ್ಯ.

ಇಂದು ಮಾರ್ಕ್ಸ್‌ವಾದೀ—ಲೆನಿನ್‌ವಾದೀ ಸಿದ್ಧಾಂತದ ಬಗ್ಗೆ ಕಣ್ಣು ಮುಚ್ಚಿ ಕುಳಿತಿರುವುದರಲ್ಲೂ ಯಾವ ಲಾಭವೂ ಇಲ್ಲವೆನ್ನುವುದನ್ನು ಘೋಷಣೆಯಲ್ಲಿ ಸೂಚಿಸಲಾಗಿದೆ. ಆ ಸಿದ್ಧಾಂತಗಳನ್ನು ದೇಶ-ಕಾಲದ ಪರಿಮಿತಿಗಳಿಗನುಗುಣವಾಗಿ, ಅಲ್ಲಿಯ ವಿಶೇಷತೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಕಾರ್ಯಗತಗೊಳಿಸಬೇಕಾಗಿದೆ.

"ಕಾರ್ಮಿಕ ವರ್ಗದ ಪಾರ್ಟಿಯು (ಕಮ್ಯೂನಿಸ್ಟ್ ಪಾರ್ಟಿ) ರಾಷ್ಟ್ರೀಯ ವಿಶೇಷತೆಗಳನ್ನು ವಿವೇಚಿಸದೆ ಇದ್ದರೆ, ಅದು ಯತಾರ್ಥತೆಯಿಂದಲೂ, ಜನತೆಯಿಂದಲೂ ಕೆಳಗಿಳಿಯುತ್ತದೆ. ಅದರ ಪರಿಣಾಮ ಖಂಡಿತವಾಗಿಯೂ ಭಯಾನಕವಾಗಿರುವುದೇ ಅಲ್ಲದೆ, ಸಮಾಜವಾದೀ ಉದ್ದೇಶಕ್ಕೇನೇ ಹಾನಿಯೊದಗಬಹುದು".

"ಒಂದುವೇಳೆ ಮೇಲಿನ ಪರಿಸ್ಥಿತಿಯನ್ನು ತಪ್ಪಿಸುವ ನೆಪದಿಂದ ರಾಷ್ಟ್ರೀಯ ವಿಶೇಷತೆಗಳನ್ನು ಎತ್ತೆತ್ತಿ ನೋಡುವಾಗ, ಅದೇ ಸಮಯದಲ್ಲಿ ಸಮಾಜವಾದೀ ಕ್ರಾಂತಿಯ ಮತ್ತು ಮಾರ್ಕ್ಸ್‌ವಾದಿ—ಲೆನಿನ್‌ವಾದಿ ವಿಶ್ವವ್ಯಾಪಿ ಸತ್ಯವನ್ನು ನಿರಾಕರಿಸಿದರೆ, ಆಗಲೂ ಸಮಾಜವಾದಿ ಸಿದ್ಧಾಂತಕ್ಕೆ ಅಷ್ಟೇ ದೊಡ್ಡ ಹಾನಿ ಸಂಭವಿಸುತ್ತದೆ".

ಜಗತ್ತಿನಲ್ಲಿ ಹೊಸದಾಗಿ ಯುದ್ಧ ಪ್ರಾರಂಭಿಸಲು ಯತ್ನಿಸುತ್ತಿರುವ ಯುದ್ಧಕೋರರ ವಿರುದ್ಧ, ರಾಷ್ಟ್ರೀಯ ಸ್ವತಂತ್ರ್ಯದ ಶತ್ರುಗಳ ವಿರುದ್ಧ, ಬಂಡವಾಳಶಾಹೀ ಮತ್ತು ಬಂಡವಾಳಶಾಹೀ ದೇಶಗಳ ಘೋರ ಪ್ರತಿಕ್ರಿಯಾವಾದಿಗಳ ವಿರುದ್ಧ, ಜನತೆಯ ನಿಜವಾದ ಹಿತಗಳ ರಕ್ಷಣೆಯ ಹೋರಾಟಗಳಲ್ಲಿ ಕಾರ್ಮಿಕ ವರ್ಗವು ತನ್ನ ಎಲ್ಲಾ ಸಂಕುಚಿತ ಪ್ರವೃತಿಯನ್ನೂ, ಹಟವಾದಿತನವನ್ನೂ ತೊರೆದು ವ್ಯಾಪಕವಾದ ಸಂಯುಕ್ತ ಹೋರಾಟವನ್ನು ನಡೆಸುವುದು ಅತ್ಯಾವಶ್ಯಕವಾಗಿದೆ.

ಕ್ರಾಂತಿಗೆ ಯೋಗ್ಯವಾದ ಪರಿಸ್ಥಿತಿಯನ್ನು ಹೊಂದಿರುವ ಯಾವ ಪಾರ್ಟಿಯೇ ಆಗಲಿ ಆದು ಮೇಲಿನ ಅಭಿಪ್ರಾಯವನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಆ ಪಾರ್ಟಿಗಳು, ತೋರಿಕೆಗೆ ಉಗ್ರವಾಗಿ ಕಂಡುಬರುವ, ಆದರೂ ಕೇವಲ ಯಾಂತ್ರಿಕ ರೀತಿಯದಾದ ಘೋಷಣೆಗಳು ಮತ್ತು ಭಾಷಣಗಳಿಂದ ತೃಪ್ತಿಪಟ್ಟುಕೊಳ್ಳಲಾರವು. ಆದರೆ ಅವು ಯತಾರ್ಥತೆಯಿಂದ ವಂಚಿತವಾಗಿದ್ದರೆ ಜನತೆಯನ್ನು ಐಕ್ಯ ತಳಹದಿಯ ಮೇಲೆ ಒಂದುಗೂಡಿಸುವ ಧ್ಯೇಯದಲ್ಲಿ ವಿಫಲವಾಗುವುವು.

ಇನ್ನೊಂದು ಅಂಶವನ್ನು ಘೋಷಣೆಯಲ್ಲಿ ಸೂಚಿಸಲಾಗಿದೆ:

"ಹಟವಾದಿತನ ಮತ್ತು ಸಂಕುಚಿತ ಪ್ರವೃತ್ತಿಯು ಮಾರ್ಕ್ಸ್‌ವಾದೀ ಸಿದ್ಧಾಂತದ ವಿಕಾಸ ಕ್ರಮದಲ್ಲಿ ದೊಡ್ಡ ಆತಂಕವನ್ನು ಒಡ್ಡುತ್ತದೆ. ಪರಿವರ್ತನೆಗೊಳ್ಳುತ್ತಿರುವ ಕಾಲದಲ್ಲಿ ಅದನ್ನು ಸೃಜನಾತ್ಮಕ ರೀತಿಯಲ್ಲಿ ಕೃತಿಗಿಳಿಸಬೇಕಾದಲ್ಲಿ ಪರಿಸ್ಥಿಯ ಪರಿಶೀಲನೆಯ ಹೆಸರಲ್ಲಿ ಕೇವಲ ಅದುಶಾಸ್ತ್ರಾರ್ಥವಾಗಿಯೇ ಉಳಿದುಕೊಳ್ಳುತ್ತದೆ. ಮತ್ತು ಪುಸ್ತಕದಲ್ಲಿ ಮಾತ್ರ ಉಳಿಯುತ್ತದೆ ಆಗ ಪಾರ್ಟಿ ಜನತೆಯಿಂದ ಕಡಿದುಹೋಗುತ್ತದೆ. ಯಾವ ಪಾರ್ಟಿಯು ಸಂಕುಚಿತತೆಯ ಗೂಡಿನಲ್ಲಿ ತನ್ನನ್ನೇ ಮುಚ್ಚಿಕೊಂಡಿರುತ್ತದೋ, ಅದು ಜನತೆಯಿಂದ ತನ್ನೆಲ್ಲಾ ಸಂಬಂಧಗಳನ್ನೂ ಕಳೆದುಕೊಂಡು, ಕಾರ್ಮಿಕ ವರ್ಗದ ಧ್ಯೇಯಕ್ಕೆ ಯಾವ ಸಹಾಯವನ್ನೂ ಮಾಡಲಾರದು"

ಸೋಷಲಿಸ್ಟ್ ಪಾರ್ಟಿಗಳ ಜೊತೆಯಲ್ಲೂ ಸೇರಿ ದುಡಿಯಬೇಕೆನ್ನುವ, ಸೈದ್ಧಾಂತಿಕವಾಗಿ ಅನೇಕ ಭಿನ್ನಾಭಿಪ್ರಾಯಗಳಿದ್ದರೂ; ಐಕ್ಯತೆಗೆ ಭಂಗ ಬಾರದಂತೆ ಪ್ರಯತ್ನಿಸಬೇಕೆಂಬ ಬಗ್ಗೆಯೂ ಘೋಷಣೆಯಲ್ಲಿ ಸೂಚಿಸಲಾಗಿದೆ.

ಜಾಗತಿಕ ಕಮ್ಯೂನಿಸ್ಟ್ ಚಳುವಳಿಯ ಐಕ್ಯತೆಯ ಬಗ್ಗೆಯೂ ಸ್ಪಷ್ಟಪಡಿಸಲಾಗಿದೆ. ಇಂದಿನ ತಾತ್ಕಾಲಿಕ ಪರಿಸ್ಥಿತಿಯಲ್ಲಿ ಎಷ್ಟೋ ಪಾರ್ಟಿಗಳು ಈ ಬಗೆಯ ಏಕತೆಯ ಬಗ್ಗೆ ಸಾಕಷ್ಟು ತಿಳಿದುಕೊಂಡಿಲ್ಲ ಎಂಬ ಅಂಶವನ್ನು ಒಪ್ಪಲೇ ಬೇಕಾಗಿದೆ. ಜೊತೆಯಲ್ಲೇ ಕೆಲವು ಪಾರ್ಟಿಗಳಲ್ಲಿ ಬಂಡವಾಳಶಾಹೀ ವಿಚಾರಗಳು ಬೆಳೆದುಬಂದಿರುವ ಅಂಶವನ್ನೂ ಒಪ್ಪಬೇಕಾಗುತ್ತದೆ. ಅವುಗಳೆಲ್ಲದರ ವಿರುದ್ಧ ಹೋರಾಡಿ, ಅವನ್ನೆಲ್ಲಾ ಬೇರು ಸಹಿತ ನಾಶಗೊಳಿಸಬೇಕಾಗಿದೆ.

ಪ್ರತಿಯೊಂದು ದೇಶಗಳ ಒಳಗೂ ಅಂತರರಾಷ್ಟ್ರೀಯ ರೀತಿಯಲ್ಲಿ ಕಮ್ಯೂನಿಸ್ಟ್ ಚಳುವಳಿಯು ಬೆಳೆಯಬೇಕಾಗಿರುವುದು ಅತಿ ಪ್ರಾಮುಖ್ಯವಾಗಿದೆ ಎನ್ನುವುದನ್ನು ಮಾರ್ಕ್ಸ್‌ವಾದೀ-ಲೆನಿನ್‌ವಾದೀ ಸಿದ್ಧಾಂತದ ಮೂಲಕ, ಹಾಗೂ ನಮ್ಮ ಇದುವರೆಗಿನ ಅಂತರರಾಷ್ಟ್ರೀಯ ಅನುಭವಗಳು ತೋರಿಸಿಕೊಟ್ಟಿವೆ. ಹಿಂದೆ ನಾವು ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯ ಏಕತೆಗಳನ್ನು ಕಟ್ಟಿದ ರೀತಿಯಲ್ಲಿ ಇಂದು ಸಾಧ್ಯವಿಲ್ಲ. ಆ ಸ್ವರೂಪವು ಇಂದಿನ ಐತಿಹಾಸಿಕ ಪರಿಸ್ಥಿತಿಗೆ ಅನುಕೂಲಕರವಾದುದಲ್ಲ. ಆದುದರಿಂದ ಹಳೆಯದನ್ನು ಪುನಃ ಅನುಸರಿಸುವ ಅಗತ್ಯವಿಲ್ಲ ಈ ವಿಚಾರದ ಬಗ್ಗೆ ಎಲ್ಲಾ ಕಮ್ಯೂನಿಸ್ಟ್ ಪಾರ್ಟಿಗಳೂ ಒಂದೇ ಅಭಿಪ್ರಾಯ ತಾಳಿವೆ.

ಹಾಗೆಯೇ, ಪಾರ್ಟಿ-ಪಾರ್ಟಿಗಳಲ್ಲಿ ನಿಕಟ ಬಾಂಧವ್ಯದ ಅವಶ್ಯಕತೆ ಬೆಳೆಯಬೇಕಾಗಿದೆ. ಅನುಭವ ಹಾಗೂ ಅಭಿಪ್ರಾಯಗಳ ವಿನಿಮಯವಾಗಬೇಕಾಗಿದೆ. ಏಕರೂಪದ ಸಮಸ್ಯೆಗಳ ಮೇಲೆ ಸಂಯುಕ್ತ ಕ್ರಮ ತೆಗೆದುಕೊಳ್ಳುವುದು ಅಗತ್ಯವಾಗಿದೆ. ವಿವಿಧ ಪಾರ್ಟಿಗಳ ವಾರ್ಷಿಕೋತ್ಸವಗಳಲ್ಲಿ, ಬಾಂಧವ್ಯಪೂರ್ಣ ಚರ್ಚೆಗಳಲ್ಲಿ ಭಾಗವಹಿಸಿದವರೆಲ್ಲರೂ ಈ ಮಹತ್ವದ್ದಾದ ಪ್ರಶ್ನೆಯ ಬಗ್ಗೆ ಸ್ಪಷ್ಟವಾದ ರೂಪವನ್ನು ಕಂಡುಕೊಂಡಿದ್ದಾರೆ.

ಈ ರೀತಿಯ ಮಹತ್ವಪೂರ್ಣ ನಿರ್ಣಯಗಳನ್ನು ಕೈಗೊಂಡು ಅಕ್ಟೋಬರ್ ಕ್ರಾಂತಿಯ ನಲ್ವತ್ತನೆ ವಾರ್ಷಿಕೋತ್ಸವ ಮತ್ತು ಎಲ್ಲಾ ಕಮ್ಯೂನಿಸ್ಟ್ ಪಾರ್ಟಿಗಳು ಕಮ್ಯೂನಿಸ್ಟ್ ಚಳುವಳಿಯನ್ನು ಬಲಗೊಳಿಸಿವೆ. ಇದೊಂದು ಅತಿ ಮಹತ್ವದ ಘಟನೆ. ಜಗತ್ತಿನ ವಿವಿಧ ದೇಶಗಳಲ್ಲಿ ದುಡಿಯುವ ಜನತೆ ನಡೆಸುತ್ತಿರುವ ಮಹಾನ್ ಹೋರಾಟಗಳಿಗೆ ಇದು ಸ್ಫೂರ್ತಿಯನ್ನು ನೀಡುವುದರಲ್ಲಿ ತಿಲಮಾತ್ರವೂ ಸಂದೇಹವಿಲ್ಲ.

ಶಾಂತಿ ಶಕ್ತಿಗಳೂ, ಪ್ರಜಾಪ್ರಭುತ್ವವಾದಿ ಮತ್ತು ಸಮಾಜವಾದೀ ಶಕ್ತಿಗಳೂ ವರ್ತಮಾನ ಯುಗದಲ್ಲಿ ಮಹತ್ವಪೂರ್ಣ ವಿಜಯಗಳನ್ನು ಸಾಧಿಸಿವೆ. ಮುಂದೆ ಇನ್ನೂ ಮಹತ್ವಪೂರ್ಣ ವಿಜಯಗಳನ್ನು ಸಾಧಿಸಲಿವೆ. ಕಳೆದ ನವೆಂಬರ್‌ನಲ್ಲಿ ಮಾಸ್ಕೋ [illegible]ನವು ಒತ್ತಿ ಹೇಳಿದ; ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಐಕ್ಯತೆ ಮತ್ತು ಬಾಂಧವ್ಯದ ಅಂಶವನ್ನು ಇಂದಿನ ಹೊಸ ಘೋಷಣೆ ಪುಷ್ಟೀಕರಿಸಿದ್ದೇ ಅಲ್ಲ, ಅದನ್ನು ಬೆಳೆಸಲೂ ಸಹಾಯಕವಾಗುತ್ತದೆ.

— ❖ —

ಪ್ರಾಂತ ಸುದ್ದಿ ಸಂಗ್ರಹ

ಉತ್ತರ ಕರ್ನಾಟಕದಲ್ಲಿ ಎನ್.ಎಲ್. ಉಪಾಧ್ಯಾಯರ ಪ್ರವಾಸ

ಕಾ॥ ಎನ್. ಎಲ್. ಉಪಾಧ್ಯಾಯರು ತಾ. 6ರಿಂದ 16ರ ತನಕ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಪಾರ್ಟಿ ಸದಸ್ಯರ ಸಭೆಗಳನ್ನುದ್ದೇಶಿಸಿ ಪಾರ್ಟಿಯ ಸಂಘಟನೆಯ ಬಗ್ಗೆ ಮಾತನಾಡಿದರು.

ತಾ. 6ರಂದು ಬಿಜಾಪುರದಲ್ಲಿ ಜಿಲ್ಲಾ ಪಾರ್ಟಿ ಸದಸ್ಯರ ಸಭೆ ಸೇರಿತ್ತು. ಪಾರ್ಟಿಯ ಚಟುವಟಿಕೆ ಮತ್ತು ಹೊಸ ಕರಡು ಘಟನೆಯ ಬಗ್ಗೆ ಉಪಾಧ್ಯಾಯರು ವಿವರವನ್ನಿತ್ತರು. ಪಾರ್ಟಿಯಲ್ಲಿರುವ ನ್ಯೂನತೆಗಳನ್ನು ನಿವಾರಿಸಲು ಜಿಲ್ಲಾ ಪಾರ್ಟಿಯು ಪ್ರಯತ್ನಿಸಬೇಕೆಂದು ತೀರ್ಮಾನವಾಯಿತು.

ತಾ 7ರಂದು ರೇಡಿಯೋ ಮೈದಾನದಲ್ಲಿ ಬಹಿರಂಗ ಸಭೆ ನಡೆಯಿತು. ಜಿಲ್ಲಾ ಕಮಿಟಿಯ ಕಾರ್ಯದರ್ಶಿ ಕಾ॥ ಬಾಲಸಿಂಗ ಮಾಸ್ತರ ಅವರು ಅಧ್ಯಕ್ಷತೆ ವಹಿಸಿದ್ದರು. ಕಾ॥ ಉಪಾಧ್ಯಾಯರು ಮಾತನಾಡಿ ದೇಶದ ಪರಿಸ್ಥಿತಿ, ಸರಕಾರದ ತೆರಿಗೆ ಧೋರಣೆ, ಪಂಚವಾರ್ಷಿಕ ಯೋಜನೆಯನ್ನು ಕೈಬಿಡಲು ಪ್ರತಿಗಾಮಿಗಳು ವಹಿಸಿರುವ ಪಿತೂರಿ ಮುಂತಾದವುಗಳನ್ನು ವಿವರಿಸಿ ಕೇರಳ ಸರಕಾರದ ಸಾಧನೆಗಳನ್ನು ತಿಳಿಸಿದರು. ಮೈಸೂರು ಸರಕಾರವು ಯೋಗ್ಯ ಪ್ರಗತಿಪರ ಭೂಶಾಸನವನ್ನು ಕೂಡಲೇ ಜಾರಿಗೆ ತರಲು ಎಲ್ಲರೂ ಒತ್ತಾಯ ತರಬೇಕೆಂದು ವಿನಂತಿ ಮಾಡಿಕೊಂಡರು.

ತಾ। 8ರಂದು ಬೆಳಗಾಂನಲ್ಲಿ ಪಾರ್ಟಿ ಸದಸ್ಯರ ಸಭೆ ನಡೆಯಿತು. ಜಿಲ್ಲೆಯ ನಾನಾ ಭಾಗಗಳಿಂದ ಸದಸ್ಯರು ಬಂದಿದ್ದರು. ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾದ ಕಾ॥ ಕೃಷ್ಣ ಮೆಸ್ಸೆಯವರು ಸ್ವಾಗತ ಭಾಷಣ ಮಾಡಿದ ನಂತರ ಕಾ॥ ಉಪಾಧ್ಯಾಯರು ನಮ್ಮ ಮುಂದಿರುವ ಸಮಸ್ಯೆಗಳ ಬಗ್ಗೆ ದೀರ್ಘ ವಿವರ ಕೊಟ್ಟ ನಂತರ ಪಾರ್ಟಿ ಸದಸ್ಯರಿಗೆ ಕಾರ್ಡುಗಳನ್ನು ಹಂಚಲಾಯಿತು.

ತಾ 12ರಂದು ಸಿರ್ಸಿಯಲ್ಲಿ ಬಹಿರಂಗ ಸಭೆ ನಡೆಯಿತು; ಸಿರ್ಸಿಯ ಪ್ರಸಿದ್ಧ ವಕೀಲರೂ ಪಿ. ಎಸ್. ಪಿ.ಯ ಮಾಜಿ ಸದಸ್ಯರೂ ಆದ ಶ್ರೀ ಯಂ. ಯಸ್. ಧಾರೇಶ್ವರ ವಕೀಲರು ಅಧ್ಯಕ್ಷತೆ ವಹಿಸಿದ್ದರು. ಕಾ॥ ಗುಬ್ಬಿ ನಾಯ್ಕರು ಸ್ವಾಗತ ಭಾಷಣ ಮಾಡಿದರು. ಕಾ॥ ಉಪಾಧ್ಯಾಯರು ನಂತರ ಮೂರು ಘಂಟೆಗಳ ಕಾಲ ಕಮ್ಯೂನಿಸ್ಟ್ ಪಾರ್ಟಿಯ ಧೋರಣೆಯನ್ನು ವಿವರಿಸಿದರು. ಕೇರಳದ ಕಮ್ಯೂನಿಸ್ಟ್ ಮಂತ್ರಿಮಂಡಲವನ್ನು ಉರುಳಿಸಲು ಪ್ರತಿಗಾಮಿಗಳು ನಡಿಸುತ್ತಿರುವ ಪ್ರಯತ್ನಗಳನ್ನು ಖಂಡಿಸಿ, ಕೇರಳದ ವಿದ್ಯಾಮಸೂದೆಯನ್ನು ರಾಷ್ಟ್ರಾಧ್ಯಕ್ಷರು ಅಂಗೀಕಾರ ಮಾಡದೆ ಸುಪ್ರೀಂಕೋರ್ಟಿಗೆ ಒಪ್ಪಿಸಿರುವುದಕ್ಕಾಗಿ ಕೇಂದ್ರ ಸರಕಾರದ ನೀತಿಯನ್ನು ಖಂಡಿಸಿದರು. ಮತ್ತು ಮೈಸೂರು ಸರಕಾರದ ಜನ ವಿರೋಧಿ ನೀತಿಯನ್ನು ಟೀಕಿಸಿ ಪ್ರಗತಿಪರ ಭೂಶಾಸನವನ್ನು ಕೂಡಲೇ ತರಬೇಕೆಂದು ಒತ್ತಾಯಪಡಿಸಿದರು.

ಉತ್ತರ ಕನ್ನಡ ಜಿಲ್ಲೆಯ ಅಂಕೋಲ, ಕುಮಟ, ಹೊನ್ನಾವರ, ಭಟಕಲ ಮುಂತಾದ ಸ್ಥಳಗಳಿಗೂ ಸಂಚರಿಸಿ ಪಾರ್ಟಿ ಕಾರ್ಯಕರ್ತರನ್ನೂ ಇತರ ಪ್ರಮುಖ ವ್ಯಕ್ತಿಗಳನ್ನೂ ಸಂದರ್ಶಿಸಿದರು.

ಅಲ್ಲಿಂದ ಹುಬ್ಬಳ್ಳಿ, ಹಾವೇರಿ ಮತ್ತು ದಾವಣಗೆರೆಗಳಿಗೂ ಹೋಗಿ ಬೆಂಗಳೂರಿಗೆ ವಾಪಾಸಾದರು.

ಎಲ್ಲ ಕಡೆಗಳಲ್ಲೂ ಪಾರ್ಟಿಯ ಬಗ್ಗೆ ಜನತೆಯಲ್ಲಿ ಹೆಚ್ಚಿನ ಉತ್ಸಾಹ ಮತ್ತು ಬೆಂಬಲ ಕಂಡು ಬರುತ್ತಿದ್ದುದಲ್ಲದೆ ಕಮ್ಯೂನಿಸ್ಟ್ ಪಾರ್ಟಿ, ರೈತ ಮತ್ತು ಕಾರ್ಮಿಕ ಸಂಘಟನೆಗಳನ್ನು ಬಲಪಡಿಸಲು ಅನೇಕ ಕಾರ್ಯಕರ್ತರಲ್ಲಿ ಆತುರವಿರುವುದು ಎದ್ದು ಕಾಣುತ್ತಿತ್ತು. ಸಿರ್ಸಿಯ ಬೀಡಿ ಕಾರ್ಮಿಕರು ಬಹಿರಂಗ ಸಭೆಯಲ್ಲಿ ಕಮ್ಯೂನಿಸ್ಟ್ ಪಾರ್ಟಿಗೆ ರೂ 12—8—0 ಯ ನಿಧಿಯನ್ನು ಅರ್ಪಿಸಿ ಪಾರ್ಟಿಯ ಬಗ್ಗೆ ತಮ್ಮ ಗೌರವವನ್ನು ವ್ಯಕ್ತಪಡಿಸಿದ್ದಾರೆ. ಕಮ್ಯೂನಿಸ್ಟ್ ಪಾರ್ಟಿ ಮತ್ತು ರೈತ ಸಂಘಟನೆಗಳಲ್ಲಿ ದುಡಿಯಲು ಕಾರವಾರದ ಬಿ. ಪಿ. ಕದಂ, ಸಿರ್ಸಿಯ ಯಂ. ಯಸ್. ಧಾರೇಶ್ವರ ಮುಂತಾದ ಅನೇಕ ಮುಖಂಡರು ಮುಂದೆ ಬಂದಿರುವುದು ಸ್ವಾಗತಾರ್ಹವಾಗಿದೆ. ಹಲವು ವರ್ಷಗಳಿಂದಲೂ ಕಮ್ಯೂನಿಸ್ಟ್ ಪಾರ್ಟಿಯಲ್ಲಿ ದುಡಿದುಕೊಂಡು, ಜೈಲುವಾಸ ಮುಂತಾದುವುಗಳನ್ನು ಅನುಭವಿಸಿದ 70 ವರ್ಷ ವಯಸ್ಸಿನ ಹೊನ್ನಾವರದ ಗುಬ್ಬಿ ನಾಯ್ಕರು ಉತ್ಸಾಹದಿಂದ ಈಗಲೂ ರೈತ ಮತ್ತು ಕಮ್ಯೂನಿಸ್ಟ್ ಪಾರ್ಟಿಯ ಸಂಘಟನೆಗೆ ನಿರಂತರ ದುಡಿಯುತ್ತಿದ್ದಾರೆ, 80 ವರ್ಷದ ವಯೋವೃದ್ಧ ಕರ್ನಾಟಕದ ಹಿರಿಯ ನಾಯಕರಾದ ಶ್ರೀ ಹೊಸಮನಿ ಸಿದ್ದಪ್ಪನವರು ಕರ್ನಾಟಕಾದ್ಯಂತ ಕಮ್ಯೂನಿಸ್ಟ್ ಪಾರ್ಟಿಯು ಬೇಗನೇ ಬೆಳೆಯಲೆಂದು ಹಾರೈಸಿದ್ದಾರೆ. ಇವರೆಲ್ಲರ ಪ್ರಯತ್ನದಿಂದ, ಇತರರ ಸಹಕಾರದಿಂದ ಪಾರ್ಟಿಯು ಬಲಗೊಳ್ಳುವುದು ಖಂಡಿತ.

—"ಸ್ವಂತ ಸುದ್ದಿಗಾರ"

ನಗರದ ಮೇಯರ್ ಚುನಾವಣೆ

(ಆನೇ ಪುಟದಿಂದ)

ಕಾರ್ಪೊರೇಟರೊಬ್ಬರ 'ವಚನ ಭಂಗಗೊಳಿಸುವುದಾದರೆ ವಚನಸ್ವೀಕಾರವೇಕೆ?' ಎಂಬ ಉದ್ಗಾರವು ಸತ್ಯವನ್ನೇ ಸಾರಿದೆ.

ಹೋದ ಭಾರಿ ಮೇಯರ್ ಚುನಾವಣೆಯಲ್ಲಿ ಸಹಸ್ರಾರು ರೂಪಾಯಿಗಳ ಚೆಲ್ಲಾಟ ನಡೆದು, ನಗರದಲ್ಲಿ ಅದೊಂದು ಅಸಹ್ಯ ಪ್ರಸಂಗವಾಗಿತ್ತು. ಈ ಸಾರಿ ಹಾಗೇನು ನಡೆದ ಹಾಗೇ ಕಾಣೋದಿಲ್ಲ, ಅಂತೂ ಚುನಾಯಿತರಾದ ಮೇಯರರು ಪಕ್ಷ ರಾಜಕೀಯ ಹಾಗೂ ತಾತ್ವಿಕ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ನಾಗರಿಕರ ಸೇವೆಗೆ ನಿಜವಾಗಿ ಕಂಕಣ ತೊಡುವರೆಂದು ಭಾವಿಸುತ್ತೇವೆ.

ಇನ್ಶ್ಯೂರೆನ್ಸ್ ನೌಕರರ ಬೇಡಿಕೆ ದಿನಾಚರಣೆ

ಬೆಂಗಳೂರಿನ ಇನ್ಶ್ಯೂರೆನ್ಸ್ ಕಾರ್ಪೊರೇಷನಿನ ನೌಕರರು ತಾ॥ 18ರಂದು ತಮ್ಮ "ಬೇಡಿಕೆಯ ದಿನ"ವನ್ನು ಉತ್ಸಾಹದಿಂದ ಆಚರಿಸಿದರು. ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಹೋಗಿ ಸಂಜೆ ಬಹಿರಂಗ ಸಭೆ ನಡಿಯಿತು. ಶ್ರೀ ಕೆ. ಕಣ್ಣನ್‌ರವರು ಅಧ್ಯಕ್ಷತೆ ವಹಿಸಿದ್ದರು. ಸಂಘದ ಕಾರ್ಯದರ್ಶಿ ಅನಂತ ವಿಠಲ್ ರಾವ್, ಮಾಜಿ ಕಾರ್ಯದರ್ಶಿ ಮೂರ್ತಿ, ಜಾರ್ಜ್, ಎಂ. ಎಸ್. ಕೃಷ್ಣನ್, ಪಾಪಣ್ಣ, ಎನ್. ಎಲ್. ಉಪಾಧ್ಯಾಯ ಮುಂತಾದವರು ನೌಕರರ ಬೇಡಿಕೆಗಳಿಗೆ ಬೆಂಬಲ ನೀಡಿ ಮಾತಾಡಿದರು. ಕಳೆದ ವರ್ಷ ಎಂದಿಗಿಂತಲೂ ಹೆಚ್ಚಿನ ಕೆಲಸವಾಗಿದೆಂದೂ, ಖಾಸಗಿ ಕಂಪೆನಿಗಳು ಲಾಭದ ಒಂದು ಭಾಗವನ್ನು ಬೋನಸ್ ಕೊಡುತ್ತಿದ್ದು ಅದನ್ನೀಗ ಕಾರ್ಪೊರೇಷನ್‌ನವರು ನಿರಾಕರಿಸುವುದು ಸರಿಯಲ್ಲವೆಂದು ಭಾಷಣದಲ್ಲಿ ಖಂಡಿಸಲಾಯಿತು. ಬೋನಸ್, ಸಂಬಳದಲ್ಲಿರುವ ವ್ಯತ್ಯಾಸ, ತುಟ್ಟಿಭತ್ತೆ ಮುಂತಾದ ಬೇಡಿಕೆಗಳ ಬಗ್ಗೆ ಕೂಡಲೇ ದ್ವಿಪಕ್ಷ ಸಮ್ಮೇಳನ ನಡೆಯಬೇಕೆಂಬ ನಿರ್ಣಯವನ್ನು ಸರ್ವಾನುಮತದಿಂದ ಮಾಡಲಾಯಿತು. ಇನ್ಶ್ಯೂರೆನ್ಸ್ ಇಲಾಖೆಯ ನೌಕರರಿಗೆ ನ್ಯಾಯ ಸಿಗಬೇಕೆಂದು ದೇಶದ ಎಲ್ಲ ಕಡೆಗಳಲ್ಲೂ ತಾ॥ 18 ರಂದು ಸಭೆ ಮೆರವಣಿಗೆಗಳು ನಡೆದಿವೆ.

ಬೆಂಗಳೂರು ಟ್ಯಾಕ್ಸಿ ಡ್ರೈವರುಗಳ ಜಯ

ಡಿಸೆಂಬರ್ 30ನೇ ತಾರೀಖಿನಂದು ಬೆಂಗಳೂರಿನ ಪೋಲೀಸ್ ಅಧಿಕಾರಿಯೊಬ್ಬರು ಬೆಂಗಳೂರು ನಗರದಲ್ಲಿ ಓಡಾಡುತ್ತಿರುವ ಟ್ಯಾಕ್ಸಿ ಡ್ರೈವರುಗಳ ಮೇಲೆ ದಬ್ಬಾಳಿಕೆ ನಡೆಸುವ ಉದ್ದಿಶ್ಯದಿಂದ ಡ್ರೈವರುಗಳು ಟ್ರಿಪ್-ಷೀಟ್‌ಗಳನ್ನು ಸರಿಯಾಗಿ ಇಟ್ಟುಕೊಳ್ಳಬೇಕೆಂದೂ, ಅದನ್ನು ಕನ್ನಡ ಅಥವಾ ಇಂಗ್ಲಿಷ್ ಭಾಷೆಯಲ್ಲೇ ಬರೆಯಬೇಕೆಂದು ಆಜ್ಞೆ ಹೊರಡಿಸಿ, ಇಲ್ಲದಿದ್ದರೆ ಅವರ ಲೈಸೆನ್ಸ್‌ಗಳನ್ನು ಕಿತ್ತೊಗೆಯುತ್ತೇವೆಂದು ಹೆದರಿಸಿದರು. ಕೂಡಲೇ ಟ್ಯಾಕ್ಸಿ ಡ್ರೈವರ್ಸ್ ಸಂಘವು ಎಲ್ಲ ಡ್ರೈವರ್ಸ್ ಮತ್ತು ಟ್ಯಾಕ್ಸಿ ಮಾಲಿಕರ ಸಭೆಯನ್ನು ಕರೆಯಿತು. ಸಭೆಯಲ್ಲಿ ಶ್ರೀ ನಾರಾಯಣಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಸಂಘದ ಕಾರ್ಯದರ್ಶಿಯಾದ ಎಂ. ಎಸ್. ರಾಮರಾಯರೂ, ಮುಲ್ಲಾರವರೂ ಪರಿಸ್ಥಿತಿಯನ್ನು ವಿವರಿಸಿದರು. ನಂತರ ಬಿ. ವಿ. ಕಕ್ಕಿಲಾಯ, ಡಿ. ಎಸ್. ಶ್ರೀರಾಮುಲು, ಎಂ. ಎಸ್. ಕೃಷ್ಣನ್, ಅಹಮದುಲ್ಲಾ ಖಾನ್, ಹಮೀದ್ ಷಾ ಮತ್ತು ಎನ್. ಎಲ್. ಉಪಾಧ್ಯಾಯರು ಅಧಿಕಾರಗಳ ಹುಕುಂ ಅನ್ನು ಖಂಡಿಸಿ ಮಾತಾಡಿದರು. ಸರಕಾರ ಕೂಡಲೇ ಅದನ್ನು ವಾಪಸು ಪಡೆಯಬೇಕೆಂಬ ನಿರ್ಣಯವನ್ನು ಮಾಡಲಾಯಿತು.

ನಂತರ ಸಂಘದ ನಿಯೋಗವೊಂದು ಮಂತ್ರಿಗಳನ್ನು ಭೇಟಿಮಾಡಿ ಡ್ರೈವರುಗಳಿಗಾಗುವ ಅನ್ಯಾಯವನ್ನು ತಿಳಿಸಿದ ನಂತರ ಆ ಆಜ್ಞೆಯನ್ನು ರದ್ದುಗೊಳಿಸಲಾಗಿದೆಂದು ತಿಳಿದು ಬಂದಿದೆ. ಟ್ಯಾಕ್ಸಿ ಡ್ರೈವರುಗಳು ತಮ್ಮ ಒಗ್ಗಟ್ಟಿನ ಸಂಘ ಶಕ್ತಿಯಿಂದ ಈ ಜಯಗಳಿಸಿದ್ದಾರೆ.

'ಭೂಸ್ವಾಮಿತ್ವ ಹೋದರೆ ಕಾಂಗ್ರೆಸ್ಸೂ ನಾಶ!'

"ಭೂಸ್ವಾಮಿತ್ವವನ್ನು ತೆಗೆದು ಹಾಕಿದರೆ ಕಾಂಗ್ರೆಸ್ಸು ನಾಶವಾದೀತು" ಎಂಬ ಭಯವು, ಭೂಸುಧಾರಣಾ ಕಾನೂನಿನ ಪ್ರಶ್ನೆಯನ್ನು ಎತ್ತಿದಾಗಲೆಲ್ಲಾ ಕಾಂಗ್ರೆಸ್ಸಿಗರಿಂದ ವ್ಯಕ್ತವಾಗಿದೆ. ಇದು ಆಧಾರರಹಿತವಾದುದು. ಭೂಸ್ವಾಮಿತ್ವ ಹೋದರೆ, 'ನಮಗೆ ಓಟು ಬರುವುದಿಲ್ಲವೆಂದು ಕಾಂಗ್ರೆಸ್ಸಿಗರು ಭಾವಿಸಿಕೊಳ್ಳಲಾಗದು. ಈ ಹೆದರಿಕೆಯಿಂದಾಗಿಯೇ 10 ವರ್ಷಗಳಿಂದ ಪ್ರಯತ್ನಿಸಿದರೂ ನಾವು ಭೂಸುಧಾರಣೆಯನ್ನು ತರಲು ಸಾಧ್ಯವಾಗಿಲ್ಲ, ಎಂದು ಕಾಂಗ್ರೆಸ್ಸಿನ ಅಧ್ಯಕ್ಷ ಧೇಭರರು ಗೌಹಾತಿ ಅಧಿವೇಶನದಲ್ಲಿ ಅಧ್ಯಕ್ಷ ಭಾಷಣದಲ್ಲಿ ಹೇಳಿದ್ದಾರೆ.

ಕೊನೆಗಾದರೂ, ಕಾಂಗ್ರೆಸ್ಸಿನ ಅಧ್ಯಕ್ಷರೊಬ್ಬರು, ಕಾಂಗ್ರೆಸ್ ಭೂಮಾಲಿಕರಿಗಾಗಿದೆ ಎಂದೂ, ಭೂಮಾಲಿಕರೇ ಕಾಂಗ್ರೆಸ್ಸಿನ ಜೀವನಾಡಿಯೆಂದೂ ಸ್ಪಷ್ಟಪಡಿಸಿದಂತಿದೆಯಲ್ಲಾ— ಧೇಭರರು ಕಾಂಗ್ರೆಸ್ಸಿಗರಿಗಿತ್ತ ಈ ಹಿತವಚನ!

ರೈತರಂಗ

ಮಂಗಳೂರು

ಕಳೆದ ತಾ. 13—1—1958ರಂದು ಜಪ್ಪಿನಮೊಗರು ಗ್ರಾಮದ ಅಂಗಡಿಮಾರು ಎಂಬಲ್ಲಿ ರೈತ ಸಂಘದ ವತಿಯಿಂದ ಸಾರ್ವಜನಿಕ ಸಭೆಯು ಶ್ರೀ ದೇವಪ್ಪ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಅಂದಿನ ಸಭೆಯಲ್ಲಿ ಶ್ರೀಯುತ ವಿಶ್ವನಾಥ ಆಳ್ವರು ಸಭೆಯನ್ನು ಕರೆದ ಉದ್ದೇಶವನ್ನು ತಿಳಿಸಿ, ಕಳೆದ ಸಪ್ಟಂಬರ ತಿಂಗಳಲ್ಲಿ ರೈತ ಸಮಿತಿಯು ಪುನರ್ಘಟಿಸಲ್ಪಟ್ಟ ಮೇಲೆ ಈ ತನಕ ಮಾಡಿದ ಕಾರ್ಯದ ವರದಿಯಿತ್ತರು. ಇದೀಗ ಜ್ಯಾರಿಯಲ್ಲಿರುವ ನ್ಯಾಯ ಗೇಣಿ ನಿರ್ಣಯ ಮಸೂದೆಯಂತೆ, ಗ್ರಾಮದಲ್ಲಿ ಕೆಲವೇ ಮಂದಿ ರೈತರು ಗೇಣಿ ಕೋರ್ಟಿಗೆ ಅರ್ಜಿಹಾಕಿದ್ದರೆಂತಲೂ, ಈ ಭಾಗದಲ್ಲಿ ಅದಷ್ಟು ಹೆಚ್ಚು ಮಂದಿಯು ವ್ಯವಹರಿಸಿ, ಗೇಣಿ ಕಾಯಿದೆಯ ಪ್ರಯೋಜನವನ್ನು ಪಡೆಯಬೇಕೆಂತಲೂ ರೈತರನ್ನು ಕೇಳಿಕೊಂಡರು. ಆ ಮೇಲೆ ಜೆ. ರಾಮಪ್ಪರು ಈ ಕೆಳಗಿನ ಎರಡು ಠರಾವುಗಳನ್ನು ಸಭೆಯಲ್ಲಿ ಮಂಡಿಸಿದರು.

ಇದೀಗ ನೀರಿನ ಅಭಾವದಿಂದಾಗಿ ಬಹುತೇಕ ಬೆಳೆಯು ಹಾಳಾಗಿದೆ. ಸಂಬಂಧಪಟ್ಟ ಧನಿಗಳು ಗೇಣಿ ರಿಯಾಯಿತಿ ಮಾಡುವಂತೆ ಒತ್ತಾಯಿಸಲು ಸರಕಾರವನ್ನು ಕೇಳಿಕೊಳ್ಳಬೇಕೆಂದೂ ಮತ್ತು ಮೋರ ಹಾಕುವ ಪದ್ಧತಿಯನ್ನು ರದ್ದುಗೊಳಿಸುವಂತೆ ತಂತಿ ಮೂಲಕ ಸರಕಾರವನ್ನು ಕೇಳಿಕೊಳ್ಳುವುದೆಂದು ತೀರ್ಮಾನಿಸಲಾಯಿತು.

ಆ ಮೇಲೆ ಜೆ. ಕೃಷ್ಣಪ್ಪನವರು ಅದನ್ನು ಸಮರ್ಥಿಸಿ ಮಾತಾಡಿ, ಇದೀಗ ನಮ್ಮ ಗ್ರಾಮದ ಅಡುಂಬುಕುದುರಿನಲ್ಲಿ ಎಕ್ರೆಗೆ 150 ರೂಪಾಯಿ ಗೇಣಿಯಿದ್ದು, ಕಳೆದ 8—1—58ರಲ್ಲಿ ರೈತ ಸಂಘದ ವತಿಯಿಂದ ನಡೆಸಲಾದ ಮಾತುಕತೆಯ ಮೂಲಕ ಧನಿಗಳು ನ್ಯಾಯವನ್ನು ಒಪ್ಪಬೇಕಾಗಿ ಬಂದು (ಸಾಧಾರಣ 20 ಒಕ್ಕಲುಗಳಿಗೆ) ಎಕ್ರೆಗೆ 115 ರೂಪಾಯಿಯಂತೆ ಗೇಣಿ ತೆಗೆದುಕೊಳ್ಳುವ ಭರವಸೆಯನ್ನು ಭೂಸ್ವಾಮಿಗಳಿತ್ತಿದ್ದಾರೆ. ಇದು ರೈತ ಸಂಘವು ಮಾಡಿದ ಕೆಲಸಗಳ ಪರಿಣಾಮ. ಇನ್ನೂ ರೈತರು ಒಗ್ಗಟ್ಟಿನಿಂದ ಇಂತಹ ಸಮಸ್ಯೆಗಳನ್ನು ಎದುರಿಸಬೇಕೆಂತಲೂ ಹೇಳಿದರು.

ಆ ಮೇಲೆ ಅಧ್ಯಕ್ಷರ ಭಾಷಣವಾದ ಬಳಿಕ, ಕಾರ್ಯದರ್ಶಿಯ ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಮಂತ್ರಿಗಳ ಮೋಸಕ್ಕೆ ತನಿಖೆಯ ತೆರೆ !

ಮಂತ್ರಿಗಳ ಮೇಲೆ ಅಪಾದನೆ ಬಂದಲ್ಲಿ ಸಾರ್ವಜನಿಕರ ತೃಪ್ತಿಗಾಗಿ ತನಿಖೆ ನಡೆಸಲಾಗುವುದೆಂದು, ಕೇಂದ್ರ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡ್ ಹೇಳಿದೆ.

ಬಹುಶಃ ಬರೇ ತನಿಖೆಯಿಂದಲೇ ಸಾರ್ವಜನಿಕರಿಗೆ ತೃಪ್ತಿ ಸಿಗಹುದೆಂದು ಕಾಂಗ್ರೆಸ್ಸಿಗರ ಅಭಿಪ್ರಾಯವಾಗಿದ್ದಲ್ಲಿ ಅದು ತೀರಾ ತಪ್ಪಭಿಪ್ರಾಯ.

ಕಾಂಗ್ರೆಸ್ಸಿನ ಹತ್ತು ವರುಷಗಳ ಅವಧಿಯಲ್ಲಿ, ವಿದೇಶಿ ವಿನಿಮಯ, ಆಹಾರ ಧಾನ್ಯ ಮತ್ತು ಅಭಿವೃದ್ಧಿ ಯೋಜನೆಗಳು ಹಾಗೂ ಸರಕಾರಿ ಕಂಟ್ರಾಕ್ಟುಗಳ ಕ್ಷೇತ್ರದಲ್ಲಿ ನಡೆದಷ್ಟು ಮೋಸ, ಕಾಸಳಂತೆ, ಲಂಚ ಬಡುಕತನ ಬ್ರಿಟಿಷರ 100 ವರುಷದ ಆಳ್ವಿಕೆಯಲ್ಲೂ ನಡೆದಿಲ್ಲವೇನೊ! ಹಾಗೂ ಸಾರ್ವಜನಿಕರ ಒತ್ತಾಯಕ್ಕೆ ಸಾವಿರಾರು ತನಿಖಾ ಸಮಿತಿಗಳನು ನೇಮಿಸಲಾಗಿದ್ದು, ನಿಜ.

ಈ ಸಮಿತಿಗಳು ವಿಚಾರಣೆ ನಡೆಸಿವೆ ಹಲವಾರು ನಿದರ್ಶನಗಳಲ್ಲಿ. ಮಂತ್ರಿಗಳ ಮೇಲಾಗಲೀ ಅಧಿಕಾರಿಗಳ ಮೇಲಾಗಲೀ, ಹೊರಿಸಿದ ಆಪಾದನೆಗಳನ್ನು ಸ್ಥಿರೀಕರಿಸಿವೆ. ಆದರೆ, ಸರಕಾರ ಮಾತ್ರ ಇಂಥಾ ವರದಿಗಳನ್ನು ಕಸದ ಬುಟ್ಟಿಗೆ ಚೆಲ್ಲಿದೆ.

ಉದಾಹರಣೆಗೆ–ಒಂದರ ಹಿಂದೆ ಒಂದು ನಡೆದ ರೈಲ್ವೆ ದುರಂತಗಳು—ಅರಿಯಲೂರು, ಮೆಹಬೂಬ್ ನಗರ—ಈ ಬಗ್ಗೆ ನಡೆದ ವಿಚಾರಣೆಗಳೇ ಇದಕ್ಕೆ ಸಾಕ್ಷಿ. ಅಧಿಕಾರಿಗಳ ನಿರ್ಲಕ್ಷ್ಯವೇ ಇದಕ್ಕೆ ಕಾರಣವೆಂದು ವಿಚಾರಣಾ ಸಮಿತಿ ಹೇಳಿದರೂ ಇಂದೂ ಈ ಬಗ್ಗೆ ಸರಕಾರ ಏನೂ ಕ್ರಮ ಕೈಗೊಂಡಿಲ್ಲ.

ನಮ್ಮ ಮೈಸೂರನ್ನೆ ನೋಡೋಣ. ಇಲ್ಲಿ ಒಂದರ ಹಿಂದೆ ಒಂದು ಬಂದು ಹೋದ ಮಂತ್ರಿಮಂಡಲದ ಮೇಲೆಲ್ಲಾ ಸಾರ್ವಜನಿಕ ಹಣವನ್ನು ಸ್ವಂತಕ್ಕೆ ಬಳಸಿಕೊಂಡ, ಕಂಟ್ರಾಕ್ಟುಗಳ ಹಣತಿಂದು ತಮ್ಮ ಪಾರ್ಟಿಗಳಿಗೆ ಇತ್ತಲ್ಲಿ ಮಟ್ಟ ದೊಡ್ಡಯಂಥಾ ಪ್ರಕರಣಗಳು ನಡೆದಿವೆ. ವಿಧಾನಸೌಧದ ಅಡಿಯಲ್ಲಿ, ಅನ್ಯಾಯವಾಗಿ ಸಾರ್ವಜನಿಕ 2–3 ಕೋಟಿ ರೂಪಾಯಿಗಳು ಹೂತು ಹೋಗಿವೆ—ಅಲ್ಲಾ ! ಈ ಹಣ ಕೆಲವು ಮಂತ್ರಿ ಪ್ರಮುಖರ ಜೇಬು ಸೇರಿರಬಹುದು. ಈ ಬಗ್ಗೆ ವಿಚಾರಣಾ ಸಮಿಯು ಕೆಂಗಲ್ಲರ ಮೇಲಿನ ಅಪಾದನೆಯನ್ನು ದೃಢೀಕರಿಸಿದೆ.

ಆದರೆ .... ಕಾಂಗ್ರೆಸ್ ಸರಕಾರ ಎಷ್ಟು ಮೋಸವೋ, ಅಷ್ಟೆ ಮೋಸ ಈ ವಿಚಾರಣೆಗಳೂ, ಅಪಾದಿಸಲ್ಪಟ್ಟ ವ್ಯಕ್ತಿಯ ಅಧಿಕಾರದ ತೆರೆ ಸರಿಸಿ ಸತ್ಯವನ್ನು ಹೊರಗೆಡಹಲು ಈ ತನಿಖಾ ಸಮಿತಿಯಲ್ಲ. ಆಪಾದನೆಗಳ ಮೇಲೆ ತನಿಖೆಯ ತೆರೆ ಎಳೆದು ಸಾರ್ವಜನಿಕರ ಕಣ್ಣಿಗೆ ದೂಳೆರಚುವುದೇ ಈ ಸಮಿತಿಗಳ ಕೆಲಸ—ಉದ್ದೇಶ!

'ಹುಳ್ಳು ದೇವರಿಗೆ ಕಳ್ಳ ಪೂಜಾರಿ ಸಾಕ್ಷಿ'ಯಾಗಿ ಜನತೆಯ ಮುಂದಿಡಲಾಗುವ ಸಮಿತಿ ತನಿಖೆಗಳಿಂದ ಸಾರ್ವಜನಿಕರು ಮೋಸ ಹೋಗಲಾರರು, ತೃಪ್ತಿಹೊಂದಲಾರರೆಂದು ಕಾಂಗ್ರೆಸ್ ನಾಯಕರು ತಿಳಿದಿರಲಿ.

ವಿಶೇಷ ಸಮಾಚಾರಗಳು

ಸೋಷಲಿಸ್ಟರ ದೃಷ್ಟಿ !

ಭಾರತದ ಸಮಾಜವಾದಿಗಳ (ಪ. ಸ. ವಾ. ಅಲ್ಲ) ದೃಷ್ಟಿಯಲ್ಲಿ ಕೇರಳದ ಕಮ್ಯೂನಿಸ್ಟ್ ಆಳ್ವಿಕೆಯಾಗಲೀ ಇತರ ರಾಜ್ಯಗಳ ಕಾಂಗ್ರೆಸ್ ಆಳ್ವಿಕೆಯಾಗಲೀ ಪರಸ್ಪರ ಭಿನ್ನವಾಗಿಲ್ಲವೆಂದು ಸೋಷಲಿಸ್ಟ್ ನಾಯಕ ಡಾ॥ ಲೋಹಿಯಾ ಹೇಳಿದ್ದಾರೆ.

ಕಣ್ಣು ಮುಚ್ಚಿಕೊಂಡಾತನಿಗೆ ಹಗಲೂ ಕತ್ತಲೂ ಭಿನ್ನವಾಗಿ ಕಾಣಲಿಕ್ಕಿಲ್ಲ ?

ಸತ್ಯಸಂಧ ಕಾಂಗ್ರೆಸ್ಸಿಗ !

ಗೌಹಾತಿಯಲ್ಲಿ ನಡೆಯುತ್ತಲಿರುವ 63ನೇ ಕಾಂಗ್ರೆಸ್ ಅಧಿವೇಶನದಲ್ಲಿ ವಾರಣಾಸಿಯ ಪ್ರತಿನಿಧಿಯಾದ ಕಾಂಗ್ರೆಸ್ಸಿಗರೊಬ್ಬರು, ಅಧಿವೇಶನದಲ್ಲಿ ಮಂಡಿಸಲಾದ ಆರ್ಥಿಕ ಪರಿಸ್ಥಿತಿಯ ಮೇಲಣ ನಿರ್ಣಯದ ಮೇಲೆ ಈ ಪ್ರತಿಕ್ರಿಯೆ ತೋರಿದ್ದಾರೆ:

"ವಿಶ್ವನಾಥ ಬನಾರಸ್ (ಕಾಶೀ) ಬಿಟ್ಟಿದ್ದಾನೆ, ಸಮಾಜವಾದ ಕಾಂಗ್ರೆಸ್ ಬಿಟ್ಟಿದೆ" ಎಂದು, ಹೇಳಿ ತನ್ನ ಸತ್ಯಸಂಧತೆಯ ಪ್ರದರ್ಶನ ಮಾಡಿದ್ದಾರೆ ಈ ಪ್ರತಿನಿಧಿ.

"ದೇವರಿಲ್ಲದ ದೇವಸ್ಥಾನ ಸಮಾಜವಾದ ರಹಿತ ಕಾಂಗ್ರೆಸ್" ಎಂಬ ನಿಜವಾದ ಘೋಷಣೆಯಿತ್ತ ಈ ಕಾಂಗ್ರೆಸ್ಸಿಗರು, ಅಧಿವೇಶನಗಳಲ್ಲೆಲ್ಲಾ ಹೊಸ ಘೋಷಣೆಗಳನ್ನು ಆಗಾಗ್ಗೆ ಕೊಡುತ್ತಿರುವ ಘೋಷಣಾ ವಿರೋಧಿ ನೆಹ್ರೂರ ಅವಕೃಪೆಗೆ ಖಂಡಿತ ಬಲಿಬಿದ್ದಿರಬಹುದು !

ಪಿ. ಎಸ್. ಪಿ.—ಅರಾಜಕತೆ

"ಕೇರಳದಲ್ಲಿ ಅರಾಜಕತೆಯಿದೆ, ಆ ಬಗ್ಗೆ ವಿಚಾರಣೆಯಾಗಲಿ ಎಂದು ಸಿಕ್ಕಾಪಟ್ಟೆ ಕೇರಳದ ಕಮ್ಯೂನಿಸ್ಟ್ ಆಳ್ವಿಕೆಯನ್ನು ಟೀಕೆ ಮಾಡುವಾಗ ಇತರ ರಾಜ್ಯಗಳಲ್ಲೂ ಆ ಪರಿಸ್ಥಿತಿ ಬಗ್ಗೆಯೂ ನಾವು ಸ್ವಲ್ಪ ಯೋಚಿಸಬೇಕು. ಕೇರಳದಲ್ಲಿ ನಾವು ಆಳುತ್ತಿದ್ದಾಗ ಮಾಡಿದ್ದೇನು? ಜನರ ಮೇಲೆ ಗುಂಡು ಹಾರಿಸಿಯೂ, ಅಧಿಕಾರ ಪೀಠದಿಂದ ನಾವಾಗಿ ಕೆಳಗಿಳಿಯಲು ಒಪ್ಪಲಿಲ್ಲ ....'' ಎಂದು ಮೊದಲಾಗಿ ಮುಂಬಾಯಿಯ ಪಿ. ಎಸ್. ಪಿ. ಮುಖಂಡ ಶ್ರೀ ಎಸ್. ಎಂ. ಜೋಶಿಯವರು ತಮ್ಮ ಪಕ್ಷದ ಸ್ವಯಂ ಟೀಕೆಯನ್ನು ಮಾಡಿಕೊಂಡಿದ್ದಾರೆ ಬಹುಶಃ ಜೋಶಿಯವರ ಈ ಪ್ರತಿಕ್ರಿಯೆ, ಫರೀದ್ ಅನ್ಸಾರಿ ಹಾಗೂ ಇತರ ಪಿ.ಎಸ್.ಪಿ ನಾಯಕರ ಹುಚ್ಚು ಟೀಕೆಗಳನ್ನು ಕುರಿತಾಗಿದೆ ಎಂದು ಹೇಳಬಹುದು.

ಫರೀದ್ ಅನ್ಸಾರಿ ಫಿರ್ಯಾದಿ

ಫರೀದ್ ಅನ್ಸಾರಿಯವರು ಪಿ. ಎಸ್. ಪಿ. ಪಕ್ಷದ ಜಂಟಿ ಪ್ರಧಾನ ಕಾರ್ಯದರ್ಶಿಗಳು. ಈ ಮಹನೀಯರು ಕೂಡಾ ಪಿ.ಎಸ್.ಪಿ. ಎನ್ನಲು, ಅವರಲ್ಲಿರುವ ಒಂದೇ ಒಂದು ಗುಣ ಸಾಕು. ಅದು ಅವರಲ್ಲಿರುವ ಹುಟ್ಟಾ ಕಮ್ಯೂನಿಸ್ಟ್ ವಿರೋಧಿ ಗುಣ. ಇವರು ರಾಜಕೀಯವಾಗಿಯೂ, ನೈತಿಕವಾಗಿಯೂ ಎಷ್ಟು ಉನ್ನತ ಮಟ್ಟದಲ್ಲಿದ್ದಾರೆಂದರೆ, ಇವರ ಕಣ್ಣಿಗೆ ಕೇರಳದಲ್ಲಿ ಆದ್ದದ್ದೆಲ್ಲಾ ಅನೈತಿಕವೇ ಎಂಬಂತೆ ಈ ನೀತಿ ಪುರುಷರು ಮಾತಾಡಿದ್ದಾರೆ. ಈ ಪಿ. ಎಸ್. ಪಿ. ನಾಯಕರು ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನೆಗಳಿಗುತ್ತರವಾಗಿ ಹೇಳಿದ್ದು ರಾಜಕೀಯ ನಾಯಕನಿಗೆ ಭೂಷಣ ತರುವಂತಹುದಲ್ಲ. ಉದಾಹರಣೆಗಾಗಿ 'ಕೇರಳದಲ್ಲಿ ಸ್ತ್ರೀಯರ ಮೇಲೆ ಬಲಾತ್ಕಾರ ನಡೆಯುತ್ತಿದೆ. ನಾಲ್ಕಾರು ಕಡೆಯಲ್ಲಿ ಈ ಬಗ್ಗೆ ನಿದರ್ಶನಗಳು ದೊರೆತಿವೆ' ಎಂದು ಫರೀದ್ ಅನ್ಸಾರಿಯವರು ನುಡಿದರು. ಪತ್ರಿಕಾಕರ್ತರೊಬ್ಬರು "ಬೇರೆಲ್ಲೂ, ಇತರ ರಾಜ್ಯಗಳಲ್ಲೆಲ್ಲಾ ಇಂಥಾ ಘಟನೆಗಳು ನಡೆದಿಲ್ಲವೇ !'' ಎಂಬ ಪ್ರಶ್ನೆಗೆ ಅನ್ಸಾರಿಯವರು ಸುಮ್ಮಗಿದ್ದರು. ಇದೇ ರೀತಿಯಲ್ಲಿ ಅರಾಜಕತೆ, ಅಧಿಕಾರ ಯಂತ್ರದಲ್ಲಿ ಕಮ್ಯೂನಿಸ್ಟರ ಪ್ರವೇಶ, ಪೋಲೀಸ್ ನಿಷ್ಕ್ರಿಯತೆ ಮೊದಲಾದ ಕೇರಳದ ಚರ್ಚಿನ ಪಾದರಿಗಳ ನಿತ್ಯ ಭೋದನೆಯನ್ನು ಇವರು ಪುನರ್ ಪಠಿಸಿದರು. ಆದರೆ, ನಗರದ ಪತ್ರಿಕಾಕರ್ತರು 'ಇವಕ್ಕೆಲ್ಲಾ ನಿದರ್ಶನಗಳನ್ನ ಕೊಡಿ' ಎಂಬುದಾಗಿ ಒತ್ತೊತ್ತಿ ಕೇಳಿದ್ದಕ್ಕೆ 'ನೀವೆಲ್ಲಾ ಕಮ್ಯೂನಿಸ್ಟರೆ'ಂದು ಕೂಡಾ ಫರೀದ್ ಅನ್ಸಾರಿಯವರು ರೇಗೆದ್ದು ಕೂಗಾಡಿದರಂತೆ. ಈ ಹುಚ್ಚಾಟ ಕಂಡು ರೇಗಿದ ಪತ್ರಿಕಾಕರ್ತರೊಬ್ಬರು "ಪಿ.ಎಸ್ ಪಿ.ಯ 10 ತಿಂಗಳ ಆಡಳಿತೆ ಕೇರಳದ ಚರಿತ್ರೆಯಲ್ಲೊಂದು ಕಪ್ಪು ಅಧ್ಯಾಯ !'' ಎಂದು ಶ್ರೀಯುತ ಫರೀದ್ ಅನ್ಸಾರಿಯವರ ಮುಖಕ್ಕೆ ಹೊಡೆದಂತೆ ಮಾತಾಡಿದ್ದರ ಕಿಂವದಂತಿಯಾಗಿದೆ.

ಏರಿಗೊಂದು ಮೋರಿಗೊಂದು !

ಅಶೋಕ್ ಮೆಹ್ತಾರಂಥಾವರ ದೃಷ್ಟಿಯಲ್ಲಿ ಕೇರಳದ ಜನತೆ ಕಮ್ಯೂನಿಸ್ಟರನ್ನು ಆರಿಸಿ ತಪ್ಪು ಮಾಡಿದ್ದಾರೆ. ಇಲ್ಲಿ ಬೆಂಗಳೂರಿನ ಪತ್ರಿಕಾಕರ್ತರು, ಪಿ.ಎಸ್.ಪಿ. ನಾಯಕರೊಬ್ಬರು ಹೇಳಿದ್ದನ್ನು, ಕೆದಕಿ ಕೇಳಿದ್ದೇ ತಪ್ಪಾಗಿದೆ; ಅದಕ್ಕಾಗಿ ಅವರು 'ಕಮ್ಯೂನಿಸ್ಟ'ರೆಂಬ ಅಪಾದನೆಗೆ ಒಳಗಾಗಿದ್ದಾರೆ.

ಅಂತೂ ಇಷ್ಟು ಮಾತ್ರ ನಿಜ. ಈ ಪಿ.ಎಸ್.ಪಿ. ನಾಯಕರು ದಿನದ 24ಗಂಟೆಯಲ್ಲಿ 24 ನಮೂನೆಯಲ್ಲಿ, ಒಬ್ಬರೊಬ್ಬರು ವಿರೋಧವಾಗಿಯೇ ಹೇಳಿಕೆಗಳನ್ನೀಯುತ್ತಿರುತ್ತಾರೆ. ಅದೂ ಕೇರಳದ ಬಗ್ಗೆಯೇ! ಇದರಿಂದ ಇಷ್ಟು ಮಾತ್ರ ಸ್ಪಷ್ಟವಾಗಿದೆ. ಕೇರಳದಲ್ಲಿ ಅರಾಜಕತೆ ಇರಲಿ, ಇಲ್ಲದಿರಲಿ ಪಿ.ಎಸ್.ಪಿ. ನಾಯಕತ್ವದಲ್ಲಿ ಅರಾಜಕತೆ ಖಂಡಿತವಿದೆ ಮಾತ್ರವಲ್ಲ! ಅನಾಯಕತ್ವವೂ ಮನೆ ಮಾಡಿದೆ, ಎನ್ನಬಹುದು.

ಗಂಗಾಶರಣ ಸಿಂಹರ ಗರ್ಜನೆ

ಇತ್ತ, ಕೇರಳದಲ್ಲಿ ಪಿ. ಎಸ್. ಪಿ ಮತ್ತು ಕಾಂಗ್ರೆಸ್ ಒಂದುಗೂಡಿ ಕಮ್ಯೂನಿಸ್ಟರ ವಿರುದ್ಧ ಕಾರ್ಯಾಚರಣೆ ನಡೆಸಲು ನಾವೇನು ಮಾತುಕತೆ ನಡೆಸಿಲ್ಲ, ಎಂದು ಪಿ.ಎಸ್.ಪಿ. ಅಧ್ಯಕ್ಷ ಸಿಂಹರ ಗರ್ಜನೆಯಾಗಿದೆ.

ಥಾನುರವರ ಏಕತಾನ

ಆದರೆ ಇದೀಗ ಪತ್ರಿಕಾಕರ್ತರಿಗೆ ಸಮಾಧಾನವೀಯುತ್ತಾ ಕೇರಳದ ಪಿ. ಎಸ್. ಪಿ. ಯ ನಾಯಕ ಶಿಖಾಮಣಿ ಥಾನುಪಿಳ್ಳೆಯವರು ಹೇಳಿದ್ದಾರೆ. "ನೀವು ವೃಥಾ ಆಶೆ ಕಳಕೊಳ್ಳಬೇಡಿ, ಮಾತುಕತೆಗಳು ತೃಪ್ತಿಕರವಾಗಿ ಮುಂದುವರಿಯುತ್ತಾ ಇದೆ". ಎಂದು ಥಾನುರವರು ತಮ್ಮ ಏಕತಾನದ ಆಲಾಪನೆ ಮಾಡಿದ್ದಾರೆ.

ಕಾಂಗ್ರೆಸ್ ಬಿಟ್ಟರೆ ಪಿ ಎಸ್.ಪಿ ಯೇ ಮುಂದಿನ ಆಳುವ ಪಕ್ಷವೆಂದು ಹಗಲು ಗನಸು ಕಾಣುತಿದ್ದ ಪ್ರ.ಸ.ವಾ. ನಾಯಕತ್ವ ಸ್ತಂಬೀಭೂತವಾಗಿದೆ. 'ಒಂದೆತ್ತು ಏರಿಗೆಳೆದರೆ ಇನ್ನೊಂದೆತ್ತು ಮೋರಿಗೆಳೆಯುವಂತಾಗಿದೆ' ಪಿ.ಎಸ್.ಪಿ.ಯ ರಾಜಕೀಯ ಮುನ್ನಡೆ!

ಭಾರತ–ಚೀನಾ ಮೈತ್ರಿ ಸಂಘದ ಮೂರನೇ ರಾಷ್ಟ್ರೀಯ ಸಮ್ಮೇಳನ

ಭಾರತ–ಚೀನಾ ಮೈತ್ರಿ ಸಂಘದ ಮೂರನೆ ರಾಷ್ಟ್ರೀಯ ಸಮ್ಮೇಳನವು, ಮುಂಬಾಯಿಯಲ್ಲಿ ಜನವರಿ 31 ರಿಂದ ಫೆಬ್ರವರಿ ಎರಡರವರೆಗೆ ನಡೆಯಲಿದೆ ಭಾರತದ ರಕ್ಷಣಾ ಸಚಿವರಾಗಿ ಶ್ರೀ ವಿ. ಕೆ. ಕೃಷ್ಣಮೆನನ್‌ರವರು ಸಮ್ಮೇಳನದ ಉದ್ಘಾಟನೆಯನ್ನು ಮಾಡಲಿರುವರು.

ಚೀನಾದ ಕಲಾವಿದರು ಮತ್ತು ವ್ಯವಸಾಯ ತಜ್ಞರನ್ನೊಳಗೊಂಡ ನಿಯೋಗವು ಈ ಸಮ್ಮೇಳನದಲ್ಲಿ ಭಾಗವಹಿಸಲಿರುವುದು. ಆ ಮೇಲೆ, ಭಾರತ ಪ್ರವಾಸ ಕೈಗೊಳ್ಳಲಿರುವ ಈ ತಂಡವು ಬೆಂಗಳೂರಿಗೂ ಆಗಮಿಸುವುದು

ಈ ಸಮ್ಮೇಳನವು ವ್ಯವಸಾಯ ಕ್ಷೇತ್ರದತ್ತ ವಿಶೇಶ ಆಸಕ್ತಿ ತೋರಿದಂತಿದೆ. 'ಭಾರತ ಮತ್ತು ಚೀನಾದಲ್ಲಿ ವ್ಯವಸ್ಯಾಯ' ಎನ್ನುವ ವಸ್ತು ಪ್ರದರ್ಶನವನ್ನು ತೋರಲಾಗುವುದೇ ಇದಕ್ಕೆ ಸಾಕ್ಷಿ. ಈ ಪ್ರದರ್ಶನಕ್ಕೆ ಸಂಬಂಧಿಸಿದ ವಸ್ತುಗಳು, ಭಾರತ ಮತ್ತು ಚೀನಾದ ಸರಕಾರಗಳಿಂದ ನೀಡಲಾಗುವುದು. 'ಚೀನಾದಲ್ಲಿ ವ್ಯವಸಾಯ'ದ ಬಗ್ಗೆ ಚರ್ಚಾ ಗೋಷ್ಠಿಯನ್ನು ಜರುಗಿಸಲಾಗುವುದು. ಚೈನಾದ ವ್ಯವಸಾಯ ತಜ್ಞರೂ, ಲೋಕಸಭಾಸದಸ್ಯರಾದ ಆರ್. ಕೆ. ಪಾಟೀಲ್, ಕಾಕಾಸಾಹೇಬ್ ಕಾಲೇಲ್ಕರ್ ಚರ್ಚಾ ಗೋಷ್ಠಿಯಲ್ಲಿ ಬಾಗವಹಿಸುವರು.

ಸಮ್ಮೇಳನದ ಅಂಗವಾಗಿ ನಡೆಯುವ ಸಾಂಸ್ಕೃತಿಕ ಗೋಷ್ಠಿಯಲ್ಲಿ ಚೀನಾದ ಕಲಾವಿದರಲ್ಲದೆ, ಭಾರತದ ಶ್ರೇಷ್ಠ ನರ್ತಕ ಉದಯಶಂಕರ್ ಮತ್ತು ಕಮಲಾಲಕ್ಷ್ ಮೊದಲಾದವರು, ನೃತ್ಯವನ್ನು ವೀಕ್ಷಿಸಿ, ಆನಂದಿಸುವ ಸಂದರ್ಭವನ್ನು ಸಮ್ಮೇಳನ ಒದಗಿಸಿದೆ.

ಚೀನಾದ ಕಲಾವಿದರು ಭಾರತದ ಬೇರೆ ಬೇರೆ ನಗರಗಳಲ್ಲಿ ಪ್ರದರ್ಶನವೀಯುವ ಸಂಭವವಿದೆಯೆಂದು ತಿಳಿಯಲಾಗಿದೆ.

ಮುಂಧ್ರ ಪ್ರಕರಣ ವಿಚಾರಣಾರಂಭ—

ಮೇಲಿನಿಂದ ಕೆಳಗಿನ ವರೆಗೆ ಮೋಸದ ವ್ಯವಹಾರ!

ಮುಂಧ್ರ ಪ್ರಕರಣದ ವಿಚಾರಣೆಯು ಮುಂಬಯಿ ಹೈಕೋರ್ಟಿನ ಶ್ರೇಷ್ಠ ನ್ಯಾಯಾಧೀಶರಾದ ಜಸ್ಟಿಸ್ ಛಾಗ್ಲಾರವರ ನೇತೃತ್ವದಲ್ಲಿ ಇದೇ 20 ತಾರೀಖಿನಂದು ಮುಂಬಯಿಯಲ್ಲಿ ಆರಂಭವಾಗಿದೆ. ಜೀವ ವಿಮಾ ಕಾರ್ಪೊರೇಷನ್ ಮುಂಧ್ರ ಗುಂಪಿನ ಕೈಗಾರಿಕೆಗಳಲ್ಲಿ ಷೇರುಗಳನ್ನು ಕೊಂಡಿರುವ ಪ್ರಕರಣದಲ್ಲಿ ನಿಜಾಂಶವನ್ನು ಕಂಡುಹಿಡಿಯುವುದಕ್ಕಾಗಿ ಈ ಸಮಿತಿಯು ಕೂಲಂಕುಶವಾಗಿ ವಿಚಾರಣೆ ನಡೆಸುವುದು.

ಬಹಿರಂಗ ವಿಚಾರಣೆ

ವಿಚಾರಣೆಯ ಕ್ರಮವನ್ನು ಕುರಿತು ಮಾತನಾಡುತ್ತಾ ಜಸ್ಟಿಸ್ ಛಾಗ್ಲಾರವರು ನಿಜಾಂಶವನ್ನು ಕಂಡುಹಿಡಿಯಲು, ಅವರು ಯಾವುದೇ ವ್ಯಕ್ತಿ ಇರಲಿ, ತನಿಖೆಯ ಉದ್ದಿಶ್ಯ ಎಂದು ತಿಳಿಸಿದ್ದಾರೆ. ಮುಂದುವರಿದು ಹೇಳುತ್ತಾ "ತೀವ್ರವಾಗಿ ಆಲೋಚನೆ ಮಾಡಿದ ನಂತರ ಈ ವಿಚಾರಣೆಯು ಬಹಿರಂಗ ವಿಚಾರಣೆಯಾಗಬೇಕೆಂದು ನಾನು ನಿರ್ಧರಿಸಿದ್ದೇನೆ. ಸಾರ್ವಜನಿಕವಾಗಿ ವಿಚಾರಣೆ ನಡೆಸುವುದರಿಂದ ತೀರ್ಮಾನಗಳು ನ್ಯಾಯವಾದದೂ ನಿಷ್ಪಕ್ಷವಾಗಿಯೂ ಇರುವುದೆಂಬ ಭರವಸೆಯನ್ನು ಕೊಡುತ್ತದೆ. ಯಾವ ಸಾಕ್ಷ್ಯಗಳ ಮೇಲೆ ತೀರ್ಮಾನವು ಆಧಾರಗೊಂಡಿದೆ ಎಂಬುದನ್ನು ಜನತೆ ತಿಳಿಯಬೇಕು. ಹೀಗೆ ಮಾಡುವುದರಿಂದ ಸಾರ್ವಜನಿಕರಿಗೆ ಬಹಿರಂಗವಾಗಿ ವಿಷಯವನ್ನು ಸಮಿತಿಯ ಮುಂದೆ ಇರಿಸಲು ಸಾಧ್ಯವಾಗುವುದು" ಎಂದು ತಿಳಿಸಿದ್ದಾರೆ.

ತಾವು ವಿಚಾರಣೆ ನಡೆಸುವ ವಿಷಯವು ಸೀಮಿತವಾಗಿದ್ದರೂ, ಅಂದರೆ ಜೀವವಿಮಾ ಕಾರ್ಪೊರೇಷನ್ ಮುಂಧ್ರ ಗುಂಪಿನ ಆರು ಕೈಗಾರಿಕೆಗಳ ಷೇರುಗಳನ್ನು ಕೊಂಡದ್ದು, ಸಾಮಾನ್ಯವಾದ ವ್ಯಾಪಾರೋದ್ಯಮದ ನಿಯಮಗಳಿಗೆ ಅನುವಾಗಿವೆಯೋ ಇಲ್ಲವೆ ಎನ್ನುವುದು, ಈ ಷೇರುಗಳನ್ನು ಕೊಳ್ಳುವಾಗ ಕಾರ್ಪೊರೇಷನ್‌ನ ಎಲ್ಲ ನಿಯಮಗಳನ್ನು ಪಾಲಿಸಲಾಗಿದೆಯೋ ಎಂಬುದು, ಅಲ್ಲವೆ ಈ ವ್ಯವಹಾರಕ್ಕೆ ಸಂಬಂಧಿಸಿದ ವ್ಯಕ್ತಿ ಅಥವಾ ವ್ಯಕ್ತಿಗಳು ಯಾರೆಂಬುದನ್ನು ನಿರ್ಧರಿಸುವುದು ಆಗಿದೆ. ಬಹಿರಂಗ ವಿಚಾರಣೆ ನಡೆಯುವುದು ಸ್ವಾಗತಾರ್ಹವಾಗಿದೆ. ಇದರಿಂದ ಅನೇಕ ವಿಷಯಗಳು ಈ ಪ್ರಕರಣದಿಂದ ಸಾರ್ವಜನಿಕರಿಗೆ ದೊರಕುವುದರಲ್ಲಿ ಸಂಶಯವಿಲ್ಲ.

ಈ ವಿಚಾರಣೆಯಲ್ಲಿ ಸಮಿತಿಯು ಅನೇಕರನ್ನು ವಿಚಾರಣೆ ನಡೆಸಿ ಸಾಕ್ಷ್ಯಗಳನ್ನು ಪಡೆಯುವುದು. ಸಮಿತಿಯ ಮುಂದೆ ಬರುವ ವ್ಯಕ್ತಿಗಳ ಪೈಕಿ ಆರ್ಥಿಕ ಸಚಿವ ಟಿ. ಟಿ. ಕೃಷ್ಣಮಾಚಾರಿ, ಕೇಂದ್ರ ಅರ್ಥ ಸಚಿವಾಲಯದ ಪ್ರಧಾನ ಕಾರ್ಯದರ್ಶಿ ಹೆಚ್. ಎಂ. ಪಟೇಲ್, ಮಾಜಿ ಹಣಕಾಸಿನ ಸಚಿವ ಸಿ. ಡಿ. ದೇಶಮುಖ್, ಕಾರ್ಪೊರೇಷನ ಜನರಲ್ ಮ್ಯಾನೇಜರ್ ಜಿ. ಆರ್. ಕಾಮತ್, ಪಾರ್ಲಿಮೆಂಟ್ ಸದಸ್ಯರಾದ ಫಿರೋಜ್ ಗಾಂಧಿ, ಕಾರ್ಪೊರೇಷನ ಮ್ಯಾನೇಜಿಂಗ್ ಡೈರೆಕ್ಟರ್ ವೈದ್ಯನಾಥನ್ ಮೊದಲಾದವರಾಗಿದ್ದಾರೆ. ಹೆಚ್. ಡಿ. ಮುಂಧ್ರರವರಿಗೆ ಸಮನ್ ಕೊಡಲಾಗಿದೆ. ಇವರುಗಳೇ ಅಲ್ಲದೆ ಇತರ ಅನೇಕ ಮಂದಿಯ ಸಾಕ್ಷ್ಯಗಳನ್ನು ಸಮಿತಿಯು ಪಡೆಯುವುದು.

ಬೇಜವಾಬ್ದಾರಿ ವ್ಯವಹಾರ

ಈವರೆವಿಗೆ ಪಾರ್ಲಿಮೆಂಟ್ ಸದಸ್ಯ ಫಿರೋಜ್ ಗಾಂಧಿ, ಜೀವವಿಮಾ ಕಾರ್ಪೊರೇಷನ್ ಮ್ಯಾನೇಜಿಂಗ್ ಡೈರೆಕ್ಟರ್ ವೈದ್ಯನಾಥನ್ ಮತ್ತು ಅರ್ಥಸಚಿವ ಟಿ. ಟಿ. ಕೆ. ಇವರುಗಳ ಸಾಕ್ಷ್ಯಗಳನ್ನು ಪಡೆದುಕೊಳ್ಳಲಾಗಿದೆ. ಟಿ. ಟಿ. ಕೆ. ಸಾಕ್ಷ್ಯವಿತ್ತ ದಿನ ಜನ ಕಿಕ್ಕಿರಿದು ಕೋರ್ಟಿನ ಒಳಗೂ ಹೊರಗೂ ತುಂಬಿದ್ದುದರಿಂದ, ಧ್ವನಿವರ್ಧಕ ಯಂತ್ರವನ್ನು ಬಳಸಲಾಯಿತು. ಇದರಿಂದ ಸಾರ್ವಜನಿಕರಲ್ಲಿ ಈ ತನಿಖೆಯ ಬಗ್ಗೆ ಎಷ್ಟು ಆಸಕ್ತಿಯಿದೆಯೆಂಬುದು ಗೋಚರವಾಗುತ್ತದೆ.

ಫಿರೋಜ್ ಗಾಂಧಿಯವರ ಸಾಕ್ಷ್ಯದಲ್ಲಿ ಮುಖ್ಯವಾಗಿ ಹೊರಬಿದ್ದಿರುವ ಅಂಶವು: ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಪ್ರಧಾನಿ ನೆಹರುರವರು ಹಣಕಾಸಿನ ಇಲಾಖೆಯವರಿಗೆ ಮುಂಧ್ರರವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಆದೇಶವಿತ್ತಿದ್ದರೆಂದು, ಆದರೆ ಕಾರ್ಪೊರೇಷನ್‌ನವರು ಈ ಆದೇಶಕ್ಕೆ ಉತ್ತರ ರೂಪವಾಗಿ ಸೆಪ್ಟೆಂಬರ್ 20ರಂದು ಮುಂಧ್ರರವರ ಇನ್ನಷ್ಟು ಷೇರುಗಳನ್ನು ಕೊಂಡಿತೆಂದೂ, ನಂತರ ಸೆಪ್ಟೆಂಬರ್ 23ರಂದು ಮತ್ತೆ ಕೊಂಡಿತೆಂದೂ ತಿಳಿಸಿದ್ದಾರೆ. 1955ರಲ್ಲಿ ಟಿ. ಟಿ. ಕೆ. ವಾಣಿಜ್ಯ ಸಚಿವರಾಗಿದ್ದಾಗ ಆಗಿನ ಅರ್ಥ ಸಚಿವ ಸಿ. ಡಿ. ದೇಶಮುಖ್‌ರವರಿಗೆ ಪತ್ರ ಬರೆದು ಮುಂಧ್ರ ಗುಂಪಿನ ಕೈಗಾರಿಕೆಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ್ದರೆಂದು ತಿಳಿಸಿದ್ದಾರೆ. ಮುಂಧ್ರರವರ ಮೇಲೆ, ಅವರ ಚಟುವಟಿಕೆಗಳ ಮೇಲೆ ಸುಮಾರು 14 ಕೇಸುಗಳನ್ನು ಕಂಪೆನಿ ಕಾನೂನು ನಿರ್ವಾಹಕ ಶಾಖೆಯು, ಆದಾಯ ತೆರಿಗೆ ಇಲಾಖೆಯೂ ಹಾಕಿತ್ತೆಂದು ತಿಳಿಸಿದ್ದಾರೆ. ಸರಕಾರಕ್ಕೆ ಮತ್ತು ಜೀವವಿಮಾ ಕಾರ್ಪೊರೇಷನ್ ಆಡಳಿತಗಾರರಿಗೆ ಮೇಲಿನಿಂದ ಕೆಳಗಿನವರೆಗೆ ಎಲ್ಲ ಅಧಿಕಾರಿಗಳಿಗೂ ಮುಂಧ್ರರವರ ಮೋಸದ ಚಟುವಟಿಕೆಗಳ ಅರಿವಿತ್ತೆಂದೂ, ತಿಳಿದೂ ತಿಳಿದೂ ಈ ದುರ್ವ್ಯವಹಾರದಲ್ಲಿ ಕಾರ್ಪೊರೇಷನ್ ಕೈಹಾಕಿದೆಯೆಂದೂ, ಫಿರೋಜ್ ಗಾಂಧಿಯವರು ತಿಳಿಸಿದ್ದಾರೆ.

ಕೇಂದ್ರ ಹಣಕಾಸಿನ ಕಾರ್ಯದರ್ಶಿಗಳ ಪ್ರಶ್ನಾರ್ಥಕ ನಡವಳಿಕೆ

ಕಾರ್ಪೊರೇಷನ ಮ್ಯಾನೇಜಿಂಗ್ ಡೈರೆಕ್ಟರ್ ವೈದ್ಯನಾಥನ್‌ರವರು ತಮ್ಮ ಸಾಕ್ಷ್ಯದಲ್ಲಿ, ತಾವು ಈ ವ್ಯವಹಾರದಲ್ಲಿ ಭಾಗಿಯಲ್ಲವೆಂದೂ, ತಮ್ಮ ಜವಾಬುದಾರಿಯೇನೂ ಇಲ್ಲವೆಂದೂ ಕೇಂದ್ರ ಹಣಕಾಸಿನ ಪ್ರಧಾನ ಕಾರ್ಯದರ್ಶಿ ಎಚ್. ಎಂ. ಪಟೇಲರ ಆದೇಶವನ್ನು ತಾವು ಪಾಲಿಸಿರುವುದಾಗಿಯೂ ತಿಳಿಸಿದ್ದಾರೆ. ಪಟೇಲ್‌ರವರು ನೇರವಾಗಿ ಈ ವ್ಯವಹಾರದಲ್ಲಿ ಆಸಕ್ತರಾಗಿದ್ದರೆಂದೂ, ಮುಂಧ್ರ ಗುಂಪಿನ ಷೇರುಗಳನ್ನು ಕೊಳ್ಳಲು ಅವರು ಪೂರ್ವಭಾವಿಯಾಗಿ ತೀರ್ಮಾನಿಸಿಕೊಂಡೇ ಬಂದಿದ್ದರೆಂದೂ, ಅವರ ಆದೇಶವನ್ನು ತಾವು ಸರಕಾರದ ಆಜ್ಞೆ ಎಂದು ಪಾಲಿಸಿದುದಾಗಿಯು ತಿಳಿಸಿದ್ದಾರೆ. ಸರಕಾರವು ಯಾವ ಸಂದರ್ಭದಲ್ಲಿಯೇ ಆಗಲಿ ವಿಮಾ ಕಾರ್ಪೊರೇಷನ್‌ನ ಇನ್‌ವೆಸ್ಟ್ ಕಮಿಟಿಯನ್ನು ಮೀರಿ ವರ್ತಿಸಬಹುದೆಂದೂ ತಿಳಿಸಿದ್ದಾರೆ. ಈ ವ್ಯವಹಾರದಿಂದ ವಿಮಾ ಕಾರ್ಪೊರೇಷನ್ನಿಗೆ ಸುಮಾರು 40 ಲಕ್ಷ ರೂಪಾಯಿಗಳ ನಷ್ಟವಾಗಿದೆ ಎಂದೂ ತಿಳಿಸಿದ್ದಾರೆ. ತಮ್ಮ ವೈಯಕ್ತಿಕ ಅಭಿಪ್ರಾಯ ಕೊಡುತ್ತ ಇಂಥ ವ್ಯವಹಾರ ಸರಿಯಾದದ್ದಲ್ಲವೆಂದೂ ತಿಳಿಸಿದ್ದಾರೆ. ಈ ವ್ಯವಹಾರಕ್ಕೆ ಪೂರ್ವಭಾವಿಯಾಗಿ ಮುಂಬಯಿ ರಿಜರ್ವ್ ಬ್ಯಾಂಕಿನಲ್ಲಿ ವಿಮಾ ಕಾರ್ಪೊರೇಷನ್‌ನ ಅಧ್ಯಕ್ಷರೂ, ಎಚ್. ಎಂ. ಪಟೇಲರೂ, ರಿಜರ್ವ ಬ್ಯಾಂಕಿನ ಜನರಲ್ ಮ್ಯಾನೇಜರೂ, ತಾವೂ ಸಹ ಭೇಟಿ ಮಾಡಿದ್ದರೆಂದೂ, ಟಿ. ಟಿ. ಕೆ. ಯವರನ್ನು ತಾವು ರಿಜರ್ವ ಬೇಂಕಿನ ಮುಂಭಾಗದಲ್ಲಿ ಕಂಡುದಾಗಿಯೂ ಅವರು ತಿಳಿಸಿದ್ದಾರೆ.

ವಿಮಾ ಕಾರ್ಪೊರೇಷನ್ ಈವರೆಗೆ ಷೇರುಗಳ ವ್ಯವಹಾರದಲ್ಲಿ ನಡೆಸಿರುವ ವ್ಯಾಪಾರದಲ್ಲಿ ಇದೇ ದೊಡ್ಡದೆಂದೂ ತಿಳಿಸಿದ್ದಾರೆ. ಮುಂಧ್ರರವರು ತಾವು ದುಡ್ಡಿನ ತಾಪತ್ರಯದಲ್ಲಿದ್ದುದರಿಂದ ತಮಗೆ ನೆರವೀಯಬೇಕೆಂದು ಎಚ್. ಎಂ. ಪಾಟೀಲರಿಗೆ ಕಾಗದ ಬರೆದಿದ್ದರೆಂದೂ, ಅಲ್ಲದೆ, ಮುಂಧ್ರರವರು ತಮ್ಮ ಷೇರುಗಳನ್ನು ದಳ್ಳಾಳಿಗಳು ಬೇಕಂತಲೇ ಕಡಿಮೆ ಮಾಡಿರುವುದಾಗಿ ತಿಳಿಸಿದ್ದರೆಂದೂ, ಅವರಿಂದ ಮಾರುಕಟ್ಟೆ ಬೆಲೆಗಿಂತ ಸ್ವಲ್ಪ ಹೆಚ್ಚು ತಮಗೆ ಈ ಷೇರುಗಳಿಗೆ ಬೆಲೆ ಕೊಡಬೇಕೆಂದು ಪ್ರಾರ್ಥಿಸಿದ್ದರೆಂದೂ, ಅದರಂತೆ ಮುಂಧ್ರರವರು ಸ್ವತಃ ತಮ್ಮ ಷೇರುಗಳನ್ನು ದಳ್ಳಾಳಿಗಳಿಂದ ಹಿಂದಕ್ಕೆ ಪಡೆದು ಕಾರ್ಪೊರೇಷನ್ನಿಗೆ ಮಾರಿದರೆಂದೂ ತಿಳಿಸಿದ್ದಾರೆ.

ಜನವರಿ 22ರಂದು ಅರ್ಥ ಸಚಿವ ಟಿ. ಟಿ. ಕೆ. ಯವರು ತಮ್ಮ ಸಾಕ್ಷ್ಯವನ್ನು ಕೊಡುತ್ತಾ ವ್ಯವಹಾರ ನಡೆದ ಜೂನ್ 23ರಂದು ತಾವು ಮುಂಬೈನಲ್ಲಿ ಇದ್ದುದಾಗಿಯೂ, ವಿಷಯ ತಿಳಿದಿತ್ತೆಂದೂ ಆದರೆ ವೈಯಕ್ತಿಕವಾಗಿ ತಾವು ಯಾವ ಆಸಕ್ತಿಯನ್ನೂ ತೋರಿಸಲಿಲ್ಲ ಎಂದು ತಿಳಿಸಿದ್ದಾರೆ. ಅಲ್ಲದೆ ಪಟೇಲರು ಲೋಕಾಭಿರಾಮವಾಗಿ ಶ್ರೀ ಮುಂಧ್ರ ಅವರ ಬೇಡಿಕೆಯ ಮೇಲೆ ಜೀವ ವಿಮಾ ಕಾರ್ಪೊರೇಷನ್ನು ಕೆಲವು ಷೇರುಗಳನ್ನು ಕೊಳ್ಳಲು ಯೋಚಿಸುತ್ತಿದೆ ಎಂದು ತಿಳಿಸಿದರೆಂದೂ, ಈ ವಿಷಯದಲ್ಲಿ ತಾವು ಯಾವ ಸಲಹೆಯನ್ನಾಗಲೀ ಪಟೇಲರಿಗೆ ನೀಡಿಲ್ಲವೆಂದೂ ಸಚಿವರು ತಿಳಿಸಿದ್ದಾರೆ. ಕೇಂದ್ರ ಸರಕಾರವು ಈ ಬಗ್ಗೆ ಯಾವ ಆದೇಶವನ್ನು ಕೊಡಲಿಲ್ಲವೆಂದು ತಿಳಿಸಿದ್ದಾರೆ. ಮುಂಧ್ರಾ ಪ್ರಕರಣದಲ್ಲಿ ಶ್ರೀ ಎಚ್. ಎಂ. ಪಟೇಲರ ಪಾತ್ರವನ್ನು ತಿಳಿಯಲು ಶ್ರೀ ಛಾಗ್ಲಾರವರು ಮೇಲಿಂದ ಮೇಲೆ ಮಾಡಿದ ಪ್ರಯತ್ನಗಳ ಫಲವಾಗಿ ಅರ್ಥ ಸಚಿವರಿಂದ ಸ್ಪಷ್ಟವಾದ ಉತ್ತರ ಬರಲಿಲ್ಲವೆಂದೂ ಆದರೆ, **"ಹೇಗೋ ಆಗಲಿ ಈ ವಿಷಯದಲ್ಲಿ ನಾನು ಏನೂ ಹೇಳುವ ಸ್ಥಿತಿಯಲ್ಲಿಲ್ಲ"** ಎಂದು ತಿಳಿಸಿದರು.

ಸಚಿವ ಟಿ. ಟಿ. ಕೆ. ಯವರ ವಿಚಾರಣೆಯಲ್ಲಿ ಜಸ್ಟಿಸ್ ಛಾಗ್ಲಾರವರು ಅನೇಕ ಪ್ರಶ್ನೆಗಳನ್ನು ಹಾಕಿದ್ದಾರೆ. ಟಿ. ಟಿ. ಕೆ. ಯವರ ಉತ್ತರದ ರೀತಿಯನ್ನು ದಿನ ಪತ್ರಿಕೆಗಳಲ್ಲಿ ಓದಿದರೆ ತಿಳಿದುಬರುತ್ತದೆ. ಅವರು ಇತ್ತಿರುವ ಜವಾಬುಗಳೆಲ್ಲವೂ ಅಸ್ಪಷ್ಟವಾಗಿದೆಯೆಂಬುದು ಸಹಜವಾಗಿ ಕಂಡುಬರುತ್ತದೆ. ಒಂದೆರಡು ನಿದರ್ಶನಗಳನ್ನು ಮಾತ್ರ ಇಲ್ಲಿ ಕೊಡಬಯಸುತ್ತೇವೆ.

ಶ್ರೀ ಛಾಗ್ಲಾ: 1956ರ ಫೆಬ್ರವರಿ ತಿಂಗಳಲ್ಲಿ ಒಮ್ಮೆ ಶ್ರೀ ಮುಂಧ್ರಾ ನಿಮ್ಮನ್ನು ಭೇಟಿ ಮಾಡಿದರೆಂಬುದು ಸರಿಯೆ?

ಶ್ರೀ ಟಿ. ಟಿ. ಕೆ. : ಇರಬಹುದು, ಆದರೆ ಖಚಿತವಾಗಿ ಹೇಳಲಾರೆ ವಾಸ್ತವವಾಗಿಯೂ ವಾಣಿಜ್ಯ ಮಂತ್ರಿಯಾಗಿ ನಾನು ಕೈಗಾರಿಕೋದ್ಯಮಿ ಎಂದುಕೊಳ್ಳುವ ಯಾರನ್ನೂ ನೋಡದಿರುವುದು ಸಾಧ್ಯವಿರಲಿಲ್ಲ.

ಶ್ರೀ ಛಾಗ್ಲಾ: ಹಾಗಿದ್ದರೆ ನೀವು ಶ್ರೀ ಪಟೇಲರಿಗೆ (ಅರ್ಥ ಸಚಿವ ಶಾಖೆ ಕಾರ್ಯದರ್ಶಿ) ಏನೂ ಆದೇಶ ಕೊಡಲಿಲ್ಲವೆಂದು ನಾನು ತಿಳಿಯಲೆ?

ಶ್ರೀ ಟಿ. ಟಿ. ಕೆ. : ಹಾಗೆ ಹೇಳುವುದು ಸರಿಯಾಗುವುದಿಲ್ಲ. ನಾನು ಯಾವ ಸಲಹೆಯನ್ನು ಕೊಡಲಿಲ್ಲ.

ಶ್ರೀ ಛಾಗ್ಲಾ: ಶ್ರೀ ಪಟೇಲರಿಗೆ ಯಾವುದಾದರೂ ಆಜ್ಞೆಯನ್ನಾಗಲೀ ಸೂಚನೆಯನ್ನಾಗಲೀ ಕೊಡಲಾಯಿತೆ?

ಶ್ರೀ ಟಿ. ಟಿ. ಕೆ.: ಯಾವ ಆಜ್ಞೆಯನ್ನೂ ಕೊಡಲಿಲ್ಲ.

ಒಟ್ಟಿನಲ್ಲಿ ವಿಚಾರಣೆಯು ಬಹಿರಂಗವಾಗಿ ನಡೆಯುತ್ತಿರುವುದರಿಂದ ಅನೇಕ ವಿಷಯಗಳು ಹೊರಬರುತ್ತಿವೆ. ಅಲ್ಲದೆ ಸಾರ್ವಜನಿಕರು ಸಾಕ್ಷ್ಯಗಳ ವಿವರಣೆಯಿಂದ ತಮ್ಮದೇ ಆದ ಅಭಿಪ್ರಾಯ ಹೊಂದಲಿಕ್ಕೂ ಸಾಧ್ಯವಿದೆ.

ಮಂಗಳೂರು ಮುನಿಸಿಪಲ್ ಮಜೂರರ ಮುಷ್ಕರ

ಮಂಗಳೂರು ಮುನಿಸಿಪಲ್ ನೌಕರರು 1953ರಲ್ಲಿ ತಮ್ಮ ಕೇಳಿಕೆಗಳನ್ನು ಮೊದಲು ಮಂಡಿಸಿದ್ದರು: ಕನಿಷ್ಟ ವೇತನ, ತುಟ್ಟಿಭತ್ತೆ, ಮನೆ ಬಾಡಿಗೆ ಭತ್ತೆ, ವಸತಿ ಸೌಕರ್ಯ, ಸರ್ವಿಸ್ ಖಾಯಂ ಪ್ರಶ್ನೆಗಳಿಂದೊಡಗೂಡಿದ ತಮ್ಮ ನ್ಯಾಯವಾದ ಕೇಳಿಕೆಗಳನ್ನು ಪುರಸಭೆಯ ಆಡಳಿತದ ಮುಂದಿಟ್ಟು, ಅದು ಇಂದಿಗೂ ಇತ್ಯರ್ಥವಾಗದೆ, ಈಗ ಮುಷ್ಕರ ಹೂಡುವ ನಿರ್ಣಯ ತಳೆದಿದ್ದಾರೆ.

1953ರಿಂದ ಹಿಡಿದು, ಪ್ರತಿ ವರ್ಷವೂ ಸಂಧಾನ— ಪ್ರತಿಭಟನೆ —ಪ್ರತಿಷೇಧ ಮುಷ್ಕರ—ಕೇಳಿಕೆ ದಿನಾಚರಣೆ ಪುನಃ ಸಂಧಾನ—ಭರವಸೆಗಳು ಎಡೆಬಿಡದೆ ನಡೆಯುತ್ತಾ ಬಂದಿದೆ. ಆದರೆ ಮುನಿಸಿಪಲ್ ಮಜೂರರ ಕೇಳಿಕೆಗಳು ಈಡೇರಲಿಲ್ಲ. ಇದಕ್ಕೆ ನೇರವಾದ ಹೊಣೆ ನಮ್ಮ ಈ ಕಲಗೆಟ್ಟ ಸರ್ಕಾರದ ಕಾರ್ಮಿಕ ದ್ರೋಹಿ ನೀತಿ!

ಈ ಮೈಸೂರು ಸರ್ಕಾರವಂತೂ ಇತ್ತ ಕಣ್ಣು ಹಾಯಿಸಿ ನೋಡಿದರೆ ಕಣ್ಣಲ್ಲಿ ಹುಳ ಬಿದ್ದೀತು ಎಂಬಂತೆ ವರ್ತಿಸುತ್ತಾ ಬಂದಿದೆ. ಹೊಸ ಸ್ಕೇಲು ಘೋಷಿಸಲ್ಪಟ್ಟದೆಯೇ ಹೊರತು, ಆ ಸ್ಕೇಲು ಇನ್ನೂ ಜಾರಿಗೆ ಬಂದಿಲ್ಲ. ಇದು ಮೈಸೂರು ಸರ್ಕಾರದ ಕಾರ್ಮಿಕ ನೀತಿ !

REG. No. M. 6867

Edited Printed and Published by C. R. Krishna Rao, at Janashakthi Printers L—59, K. V. Temple St., Sultanpet Bangalore—2 phone· 3810